

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 17 ಮಂಗಳವಾರ 2024


45

ಸಂಪುಟ: 45 | ಸಂಚಿಕೆ: 152 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*



ದಸರಾ ಉದ್ಘಾಟನೆಗೆ ದಿನಗಣನೆ; ಪಿತೃಪಕ್ಷದ ಹಿನ್ನೆಲೆಯಲ್ಲಿ ನಿಗದಿತ ಸಮಯಕ್ಕೆ ಮುನ್ನವೇ

ಚಾಮುಂಡೇಶ್ವರಿ ಉತ್ಸವಮೂರ್ತಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರ

ಮೈಸೂರು, ಸೆ.16(ಪಿಎಂ)– ಮೈಸೂರಲ್ಲಿ ದಸರಾ ಮಹೋತ್ಸವಕ್ಕೆ ದಿನ ಗಣನೆ ಆರಂಭವಾಗಿದ್ದು, ನಾಡಹಬ್ಬಕ್ಕೆ ಅರಮನೆ ನಗರಿ ಸಜ್ಜುಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಅರಮನೆ ಮಂಡಳಿಯಿಂದ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಸೋಮವಾರ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ವರ್ಗಕ್ಕೆ ಹಸ್ತಾಂತರ ಮಾಡಲಾಯಿತು.

ಅಮ್ಮನವರ ಈ ಮೂರ್ತಿಯನ್ನು ಚಾಮುಂಡಿ ಬೆಟ್ಟದಲ್ಲಿ ಪುಷ್ಪಾಲಂಕಾರಗೊಂಡ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಬಳಿಕ ವಿಜಯದಶಮಿ ದಿನದಂದು ಜಂಬೂಸವಾರಿ ಮೆರವಣಿಗೆಗಾಗಿ ಅರಮನೆ ಮಂಡಳಿ ಮತ್ತೆ ಮೂರ್ತಿಯನ್ನು ವಶಕ್ಕೆ ಪಡೆದುಕೊಳ್ಳಲಿದೆ. ಇದರ ಹೊರತಾಗಿ ವರ್ಷಪೂರ್ತಿ ಶ್ರೀ ಚಾಮುಂಡೇಶ್ವರಿ ತಾಯಿಯವರ ಈ ಪಂಚಲೋಹದ ಉತ್ಸವ ಮೂರ್ತಿ ಅರಮನೆಯಲ್ಲೇ ಇರಲಿದ್ದು, ನಿತ್ಯ ಪೂಜೆಗೊಳ್ಳಲಿದೆ. ಇದು ಪ್ರತಿವರ್ಷದ ಪ್ರಕ್ರಿಯೆಯಾಗಿದೆ.

ಈ ಬಾರಿಯ ದಸರಾ ಮಹೋತ್ಸವ ಅ.3ರಂದು ಉದ್ಘಾಟನೆಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಅರಮನೆಯಲ್ಲಿದ್ದ ಅಮ್ಮನವರ ಉತ್ಸವ ಮೂರ್ತಿಯನ್ನು ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರ ನೇತೃತ್ವದಲ್ಲಿ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹಸ್ತಾಂತರ ಮಾಡಲಾಯಿತು. ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಪರವಾಗಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ನೇತೃತ್ವದಲ್ಲಿ ಉತ್ಸವ ಮೂರ್ತಿಯನ್ನು ಸ್ವೀಕರಿಸಲಾಯಿತು.

ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಸುರಕ್ಷಿತವಾಗಿ ಇರಿಸಿ, ಉದ್ಘಾಟನೆ ದಿನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ. ಅಲ್ಲದೆ, ದೇವಾಲಯದ ಅರ್ಚಕರು ನಿತ್ಯ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಲಿದ್ದಾರೆ.



ಮೈಸೂರು ಅರಮನೆಯಲ್ಲಿ ಸೋಮವಾರ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ವರ್ಗಕ್ಕೆ ಚಾಮುಂಡೇಶ್ವರಿ ಅಮ್ಮನವರ ಪಂಚಲೋಹದ ಉತ್ಸವ ಮೂರ್ತಿ ಹಸ್ತಾಂತರ ಮಾಡಲಾಯಿತು. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ಮತ್ತಿತರರು ಚಿತ್ರದಲ್ಲಿದ್ದಾರೆ.

ಅರಮನೆಯಲ್ಲೇ ನಿತ್ಯ ಪೂಜೆ: 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಟಿ.ಎಸ್.ಸುಬ್ರಹ್ಮಣ್ಯ ಅವರು, ದಸರಾ ಉದ್ಘಾಟನೆಯಿಂದ ವಿಜಯದಶಮಿವರೆಗಿನ ಸಂದರ್ಭ ಹೊರತುಪಡಿಸಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಉತ್ಸವ ಮೂರ್ತಿ ಅರಮನೆಯಲ್ಲೇ ಇರಲಿದ್ದು, ನಿತ್ಯ ಪೂಜೆ ಸಲ್ಲಿಸಲಾಗುತ್ತದೆ. ಪ್ರತಿ ಶುಕ್ರವಾರ, ಮಂಗಳವಾರ ಮತ್ತು ಆಷಾಢ ಶುಕ್ರವಾರಗಳಂದು ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸುತ್ತೇವೆ ಎಂದು ತಿಳಿಸಿದರು.

ಮರದ ಅಂಬಾರಿಯಲ್ಲಿ ಅಮ್ಮನವರ ದರ್ಶನ: ಶ್ರೀರಂಗಪಟ್ಟಣ ದಸರಾಗೆ ಬಳಸುವ ಮರದ ಅಂಬಾರಿಯು ಮೈಸೂರು ಅರಮನೆಯಲ್ಲೇ ಇರಲಿದ್ದು, ಇದರೊಳಗೆ ಚಾಮುಂಡೇಶ್ವರಿ ಅಮ್ಮನವರ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ನಿತ್ಯ ಪೂಜೆ ಮಾಡಲಾಗುತ್ತದೆ. ಈ ಮೊದಲು ಮೂರ್ತಿಯನ್ನು ಲಾಕರ್‌ನಲ್ಲಿ ಇರಿಸಲಾಗುತ್ತಿತ್ತು. ಆದರೆ ಈಗ ಅರಮನೆಗೆ ಭೇಟಿ ನೀಡುವವರಿಗೆ ಉತ್ಸವ ಮೂರ್ತಿ ದರ್ಶನಕ್ಕೆ ಅವಕಾಶ ಲಭಿಸಿದೆ. ದಿನವೂ ಲಕ್ಷಾಂತರ ಜನ ಅರಮನೆಗೆ ಭೇಟಿ ನೀಡುತ್ತಾರೆ. ಅವರೆಲ್ಲಾ ಉತ್ಸವ ಮೂರ್ತಿ ದರ್ಶನ ಪಡೆಯುತ್ತಿದ್ದಾರೆ ಎಂದರು.

ಅರಮನೆಯಲ್ಲಿ ಫ್ಲವರ್ ಶೋ ಸೇರಿದಂತೆ ಯಾವುದೇ ಕಾರ್ಯಕ್ರಮ ಆಯೋಜಿಸಿದರೂ ಅಂದು ಅಮ್ಮನವರ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಜಂಬೂಸವಾರಿಯಂದು ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪನೆ ಮಾಡುವ ಮುನ್ನವೂ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ವಿಶೇಷ ಪೂಜಾ ಕೈಂಕರ್ಯ ನಡೆಸಲಾಗುತ್ತದೆ. ಜಂಬೂಸವಾರಿ ಪೂರ್ಣಗೊಂಡ ಬಳಿಕ ವಿಶೇಷ ಪೂಜೆ ಸಲ್ಲಿಸಿ, ಅರಮನೆಯ ಮರದ ▶ 9ನೇ ಪುಟಕ್ಕೆ

ಇಂದು ಕೇಜ್ರಿವಾಲ್ ರಾಜೀನಾಮೆ?

ನವದೆಹಲಿ: ಅಬಕಾರಿ ನೀತಿ ಹಗರಣದಲ್ಲಿ ಆರು ತಿಂಗಳು ಜೈಲುವಾಸ ಮುಗಿಸಿ



ಜಾಮೀನಿನ ಮೇಲೆ ಬಿಡುಗಡೆಯಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮಂಗಳವಾರ ಸಂಜೆ 4:30ಕ್ಕೆ ಲೆಫ್ಟಿನೆಂಟ್ ಗವರ್ನರ್ ವಿಕೆ ಸಕ್ಸೇನಾ ಅವರನ್ನು ಭೇಟಿ ಮಾಡಲಿದ್ದು, ಈ ವೇಳೆ ರಾಜೀನಾಮೆ ಸಲ್ಲಿಸುವ ಸಾಧ್ಯತೆ ಇದೆ.

ನಾಳೆ ಸಂಜೆ 4:30ಕ್ಕೆ ತಮ್ಮನ್ನು ಭೇಟಿ ಮಾಡಲು ವಿಕೆ ಸಕ್ಸೇನಾ ಅವರು ಕೇಜ್ರಿವಾಲ್ ಅವರಿಗೆ ಅಪಾಯಿಂಟ್‌ಮೆಂಟ್ ನೀಡಿದ್ದಾರೆ ಎಂದು ಅಧಿಕೃತ ಮೂಲಗಳು ಸೋಮವಾರ ತಿಳಿಸಿವೆ. ಮಂಗಳವಾರ ಲೆಫ್ಟಿನೆಂಟ್ ಗವರ್ನರ್ ಅವರನ್ನು ಭೇಟಿ ಮಾಡಲು ಕೇಜ್ರಿವಾಲ್ ಸಮಯ ಕೋರಿದ್ದಾರೆ ಮತ್ತು ಅವರ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವ ಸಾಧ್ಯತೆಯಿದೆ ಎಂದು ಎಎಪಿ ಈ ಹಿಂದೆ ಹೇಳಿತ್ತು.

ನಾವು ಪ್ರಾಮಾಣಿಕರು ಎಂದು ಜನರು ಹೇಳಿದಾಗ ಮಾತ್ರ ತಾವು ಮತ್ತೆ ಮುಖ್ಯಮಂತ್ರಿಯಾಗುವುದಾಗಿ ಮತ್ತು ಮನೀಶ್ ಸಿಸೋಡಿಯಾ ಅವರು ಉಪ ಮುಖ್ಯಮಂತ್ರಿಯಾಗುತ್ತಾರೆ ▶ 9ನೇ ಪುಟಕ್ಕೆ

ಕಲಬುರಗಿಯಲ್ಲಿ ಇಂದು —

ವಿಶೇಷ ಸಂಪುಟ ಸಭೆ

• ಬಿಜೆಪಿ ಅವಧಿಯ ಕೆಲವು ಹಗರಣ ಸಂಬಂಧ ತನಿಖೆ ನಿರ್ಧಾರ • ಕಲ್ಯಾಣ ಕರ್ನಾಟಕ ಭಾಗದ ಹಲವು ಅಭಿವೃದ್ಧಿ ಕಾರ್ಯಗಳ ಸಂಬಂಧ ತೀರ್ಮಾನ • ಮುಡಾ, ವಾಲ್ಮೀಕಿ ಹಗರಣದಿಂದ ಉಂಟಾಗಿರುವ ಹಿನ್ನಡೆ ಹಿನ್ನೆಲೆಯಲ್ಲಿ ವಿಶೇಷ ಸಭೆ ವ್ಯವಸ್ಥೆ



ಮಂಗಳವಾರ ವಿಶೇಷ ಸಂಪುಟ ಸಭೆ ನಡೆಯಲಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರವೇ ಕಲಬುರಗಿಗೆ ಆಗಮಿಸಿ, ಹಲವು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಬೆಂಗಳೂರು, ಸೆ.16(ಕೆಎಂಶಿ)– ಬಿಜೆಪಿ ಆಡಳಿತದಲ್ಲಿನ ಭ್ರಷ್ಟಾಚಾರ ಹಗರಣಗಳನ್ನು ತನಿಖೆಗೆ ವಹಿಸುವ ಸಂಬಂಧ ನಾಳೆ ಕಲಬುರಗಿಯಲ್ಲಿ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

ಹತ್ತು ವರ್ಷಗಳ ನಂತರ ಉತ್ತರ ಕರ್ನಾಟಕ ಭಾಗದಲ್ಲಿ ವಿಶೇಷ ಸಚಿವ ಸಂಪುಟ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದಿದ್ದು, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೆಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದಾರೆ. ವಾಲ್ಮೀಕಿ ಹಾಗೂ ಮುಡಾ ಹಗರಣದಿಂದ ಪಕ್ಷ ಮತ್ತು ಸರ್ಕಾರದ ವರ್ಚಸ್ಸಿಗೆ ಧಕ್ಕೆ ಉಂಟಾಗಿರುವುದನ್ನು ಮರೆಮಾಚಿ, ಜನರ ಮನಸ್ಸನ್ನು ಬೇರೆಡೆಗೆ ಸೆಳೆಯುವ ಉದ್ದೇಶದಿಂದ ಈ ಸಭೆ ಏರ್ಪಟ್ಟಿದೆ.

ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಆಡಳಿತದಲ್ಲಿ 40% ಕಮಿಷನ್, ಕೋವಿಡ್–19 ಸೇರಿದಂತೆ 21 ಹಗರಣಗಳ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಅವರು ವಿಧಾನಸಭೆಯಲ್ಲೇ ಘೋಷಣೆ ಮಾಡಿದ್ದರು.

ಈ ಹಗರಣಗಳಿಗೆ ಸಂಬಂಧಿಸಿದಂತೆ ಯಾವ ಮಟ್ಟದಲ್ಲಿ ತನಿಖೆ ನಡೆದಿದೆ ಮತ್ತು ಅದರ ಪ್ರಗತಿ ಏನು ಎಂಬ ಬಗ್ಗೆ ಪರಾಮರ್ಶೆ ನಡೆಸಿ ವರದಿ ನೀಡಲು ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಐವರು ಸಚಿವರ ಸಂಪುಟ ಉಪಸಮಿತಿ ರಚಿಸಿದ್ದರು. ಸಮಿತಿ ಕಳೆದ ವಾರ ಸಭೆ ಸೇರಿ 4 ಹಗರಣಗಳಿಗೆ ಸಂಬಂಧಿಸಿದಂತೆ ಆರೋಪ ಪಟ್ಟಿ ಸಲ್ಲಿಸಲು ಸಂಪುಟಕ್ಕೆ ಶಿಫಾರಸು ಮಾಡಿದ್ದಾರೆ. ನಾಲ್ಕು ಹಗರಣಗಳಿಗೆ ಸಂಬಂಧಿಸಿದಂತೆ ▶ 9ನೇ ಪುಟಕ್ಕೆ

ಶೇ. 50:50, ಪ್ರೋತ್ಸಾಹದಾಯಕ, ಬದಲಿ ನಿವೇಶನ ಹಂಚಿಕೆ ಹಗರಣಗಳ ಹಿನ್ನೆಲೆ

ಮುಡಾ ಮೀಟಿಂಗ್ ನಡೆದು ಬರೋಬ್ಬರಿ 9 ತಿಂಗಳಾಯ್ತು!; ಅಭಿವೃದ್ಧಿ ಕಾರ್ಯಕ್ಕೆ ಗ್ರಹಣ

■ ಮೂರು ವರ್ಷದ ಬಜೆಟ್ ನಡಾವಳಿಗಳೇ ಸರ್ಕಾರದಿಂದ ಅನುಮೋದನೆಯಾಗದ ಕಾರಣ ಕ್ರಿಯಾ ಯೋಜನೆಯೂ ಆಗಿಲ್ಲ ■ ಕಬಿನಿ 2ನೇ ಹಂತದ ಯೋಜನೆ, ಗುಂಪು ಮನೆ ನಿರ್ಮಾಣ ಸೇರಿದಂತೆ ಎಲ್ಲಾ ಅಭಿವೃದ್ಧಿ ಯೋಜನೆಗೂ ಪ್ರಾಧಿಕಾರ ಎಳ್ಳು–ನೀರು ■ ನಿವೇಶನಗಳ ಅಕ್ರಮ ಹಂಚಿಕೆಯಲ್ಲಿ ಬ್ಯುಸಿಯಾಗಿ ಅಭಿವೃದ್ಧಿ ಕಾರ್ಯ ಮರೆತ ಮುಡಾ ಅಧಿಕಾರಿಗಳು



● *ಎಸ್.ಟಿ. ರವಿಕುಮಾರ್*

ಮೈಸೂರು, ಸೆ. 16– ಮುಖ್ಯಮಂತ್ರಿ ಸಿದ್ದರಾಮಯ್ಯ ತವರಲ್ಲಿ ಕಾನೂನು ಗಾಳಿಗೆ ತೂರಿ ಅಕ್ರಮವಾಗಿ ಶೇ. 50:50ರ ಅನುಪಾತ, ಪ್ರೋತ್ಸಾಹದಾಯಿಕ ಹಾಗೂ ಬದಲಿ ನಿವೇಶನಗಳನ್ನು ಮಂಜೂರು ಮಾಡಿ ಕ್ರಯಪತ್ರ, ಖಾತಾ, ಕಂದಾಯ ಮಾಡಿಕೊಡುವ ಕೆಲಸದಲ್ಲಿ ನಿರತರಾಗಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳು ಜನಸಾಮಾನ್ಯರಿಗೆ ಅನುಕೂಲವಾಗುವ ಅಭಿವೃದ್ಧಿ ಯೋಜನೆಗಳಿಗೆ ಎಳ್ಳು–ನೀರು ಬಿಟ್ಟಿದ್ದಾರೆ.

ಪರಸ್ಪರ ಒಪ್ಪಂದದ ಮೇರೆಗೆ ರೈತರ ಮನವೊಲಿಸಿ ಭೂಮಿ ಪಡೆದು ವಸತಿ ಬಡಾವಣೆ ಅಭಿವೃದ್ಧಿಪಡಿಸಿ, ಲಭ್ಯವಿರುವ ನಿವೇಶನಗಳನ್ನು ಭೂ ಮಾಲೀಕರು ಹಾಗೂ ವಸತಿ ರಹಿತ ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ಮಂಜೂರು ಮಾಡುವ ಮೂಲಕ ವಸತಿ ಸಮಸ್ಯೆ ಬಗೆಹರಿಸಿ ಯೋಜನಾಬದ್ಧವಾಗಿ ಮೈಸೂರು ನಗರವನ್ನು ಅಭಿವೃದ್ಧಿಪಡಿಸಬೇಕಾದ ಮುಡಾ ಅಧಿಕಾರಿಗಳು, ಇತ್ತೀಚಿನ ವರ್ಷಗಳಲ್ಲಿ ತಮ್ಮ ಮೂಲ ಉದ್ದೇಶವನ್ನೇ ಬದಿಗಿಟ್ಟು ಅಕ್ರಮವಾಗಿ ನಿವೇಶನ ಹಂಚಿಕೆ ಮಾಡುವ ದಂಧೆಯಲ್ಲಿ ತೊಡಗಿದ್ದುದು ವಿಪರ್ಯಾಸವೇ ಸರಿ.

ಮೈಸೂರಲ್ಲಿ ನಿವೇಶನ ಗಿಟ್ಟಿಸಿಕೊಂಡು ಸ್ವಂತ ಸೂರು ಹೊಂದಿ ಸ್ವಾಭಿಮಾನದಿಂದ ಬದುಕಬೇಕೆಂಬ ಆಸೆಯಿಂದ ನಿವೇಶನಕ್ಕಾಗಿ ಮುಡಾಗೆ ಅರ್ಜಿ ಸಲ್ಲಿಸಿ ಸುಮಾರು 80,000 ಮಂದಿ ಕಳೆದ 25–30 ವರ್ಷಗಳಿಂದ ಕಾಯುತ್ತಿದ್ದಾರೆ. ಕನಸು ನನಸಾಗದೇ ಎಷ್ಟೋ ಮಂದಿ ಆಕಾಂಕ್ಷಿಗಳು ತಮ್ಮ ಮಹಾ ಕನಸಿನೊಂದಿಗೇ ಇಹಲೋಕ ತ್ಯಜಿಸಿರುವುದೂ ಉಂಟು.

9 ತಿಂಗಳಿಂದ ಮಂಡಳಿ ಸಭೆ ಆಗಿಲ್ಲ: ಮುಡಾದಂತಹ ಪ್ರತಿಷ್ಠಿತ ಸಾರ್ವಜನಿಕ ಸಂಸ್ಥೆಯಲ್ಲಿ ಕಳೆದ 9 ತಿಂಗಳಿಂದ ಸಾಮಾನ್ಯ ಸಭೆಯೇ ನಡೆಯಲಿಲ್ಲವೆಂದ ಮೇಲೆ ಈ ಸಂಸ್ಥೆಯಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ. 2024ರ ಜನವರಿ 16ರಂದು ಅಂದಿನ ಜಿಲ್ಲಾಧಿಕಾರಿಗಳು ಹಾಗೂ ಮುಡಾ ಪ್ರಭಾರ ಅಧ್ಯಕ್ಷರಾಗಿದ್ದ ಡಾ. ಕೆ.ವಿ. ರಾಜೇಂದ್ರ ಸಾಮಾನ್ಯ ಸಭೆ ನಡೆಸಿದ್ದರು.

ಅಂದಿನ ಸಭೆಗೆ 180 ವಿಷಯಗಳನ್ನು ಮಂಡಿಸಲಾಗಿತ್ತಾದರೂ, ಆ ಪೈಕಿ ಕಾನೂನುಬದ್ಧವಾಗಿದ್ದ ಕೇವಲ 20 ವಿಷಯಗಳನ್ನು ಮಾತ್ರ ಅನುಮೋದಿಸಿ ನಿರ್ಣಯ ಕೈಗೊಳ್ಳಲಾಗಿತ್ತು. ಆ ಸಭೆಯ ನಂತರ ಈವರೆಗೆ ಪ್ರಾಧಿಕಾರದ ಸಾಮಾನ್ಯ ಸಭೆಯೇ ನಡೆದಿಲ್ಲ.

ಅಧ್ಯಕ್ಷರು ಮಾಡಿದ್ದು ಒಂದೇ ಸಭೆ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕೆ. ಮರೀಗೌಡರು 2024ರ ಮಾರ್ಚ್ 1ರಂದು ಅಧಿಕಾರ ವಹಿಸಿಕೊಂಡ ಬಳಿಕ ಮಾರ್ಚ್ 7ರಂದು 2024–25ನೇ ಸಾಲಿನ ಆಯ–ವ್ಯಯ ಸಭೆ ಮಾಡಿದ್ದನ್ನು ಹೊರತುಪಡಿಸಿದರೆ, ಅವರು ಈವರೆಗೆ ಒಂದೇ ಒಂದು ಸಾಮಾನ್ಯ ಸಭೆಯನ್ನೂ ನಡೆಸಲು ಸಾಧ್ಯವಾಗಲಿಲ್ಲ.

3 ವರ್ಷಗಳ ಬಜೆಟ್‌ಗಳೇ ಅನುಮೋದನೆಯಾಗಲಿಲ್ಲ: ಮುಡಾ ಅಧ್ಯಕ್ಷರಾಗಿದ್ದ ಹೆಚ್.ವಿ. ರಾಜೀವ್ ಅಧ್ಯಕ್ಷತೆಯಲ್ಲಿ 2022ರ ಮಾರ್ಚ್ 31, 2023ರ ಮಾರ್ಚ್ 13ರಂದು ಯಶಸ್ವಿ ಎಸ್. ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಹಾಗೂ 2024ರ ಮಾರ್ಚ್ 7ರಂದು ಕೆ. ಮರೀಗೌಡರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಆಯ–ವ್ಯಯ ಸಭೆಯ ನಡಾವಳಿಗಳನ್ನು ಅಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿ ಅನುಮೋದನೆಯನ್ನೇ ಪಡೆದಿಲ್ಲ. ▶ 9ನೇ ಪುಟಕ್ಕೆ

ಫ್ಲೋರಿಡಾ ಗಾಲ್ಫ್ ಕ್ಲಬ್‌ನಲ್ಲಿ ಮತ್ತೆ ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹತ್ಯೆಗೆ ಯತ್ನ

ಫ್ಲೋರಿಡಾ: ಅಮೆರಿಕ ಮಾಜಿ ಅಧ್ಯಕ್ಷ, ಈ ಬಾರಿಯ ಅಧ್ಯಕ್ಷೀಯ




ಚುನಾವಣೆಯ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರು ಫ್ಲೋರಿಡಾದ ವೆಸ್ಟ್ ಪಾಮ್ ಬೀಚ್‌ನಲ್ಲಿರುವ ಅವರ ಗಾಲ್ಫ್ ಕ್ಲಬ್‌ನಲ್ಲಿ ಭಾನುವಾರ ಮತ್ತೆ ಹತ್ಯೆ ದಾಳಿಗೆ ಒಳಗಾಗಿದ್ದಾರೆ ಎಂದು ಎಫ್‌ಬಿಐ ತಿಳಿಸಿದೆ.

ಒಂಬತ್ತು ವಾರಗಳ ಹಿಂದೆ ಡೊನಾಲ್ಡ್ ಟ್ರಂಪ್ ಅವರ ಮೇಲೆ ದಾಳಿ ನಡೆದಿತ್ತು ಕೂದಲೆಳೆ ಅಂತರದಲ್ಲಿ ಬಚಾವಾಗಿದ್ದರು. ಇದೀಗ ಮತ್ತೊಮ್ಮೆ ಅದೇ ರೀತಿ ಅವರು ಬಚಾವಾಗಿದ್ದು, ಸುರಕ್ಷಿತವಾಗಿ ಆರೋಗ್ಯವಾಗಿ ಇದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಘಟನೆ ▶ 6ನೇ ಪುಟಕ್ಕೆ

ಜಿಪಂ, ತಾಪಂ ಸೇರಿದಂತೆ ಇತರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಹೆಚ್‌ಡಿಕೆ ಒತ್ತಾಯ

ಬೆಂಗಳೂರು, ಸೆ.16(ಕೆಎಂಶಿ)– ಜಿಲ್ಲಾ, ತಾಲೂಕು ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವಂತೆ ಕೇಂದ್ರ ಸಚಿವ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.




ಸ್ಥಳೀಯ ಸರ್ಕಾರಗಳ ಕತ್ತು ಹಿಸುಕಿ ನೀವು ವಿಧಾನಸೌಧದಲ್ಲಿ ಮೆರೆದರೆ ಭಾಗ್ಯ ಬರುವುದಿಲ್ಲ, ಮೊದಲು ಅವರಿಗೆ ಅಧಿಕಾರ ನೀಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.

ನೀವು ಅಧಿಕಾರಕ್ಕೆ ಬಂದು ವರ್ಷದ ಮೇಲೆ ನಾಲ್ಕು ತಿಂಗಳು ಕಳೆಯಿತು. ಈವರೆಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ನಿಮ್ಮಿಂದ ಸಾಧ್ಯವಾಗಿಲ್ಲ. ಅಧಿಕಾರದ ನಿಮ್ಮ ▶ 9ನೇ ಪುಟಕ್ಕೆ

ನಾಳೆವರೆಗೆ HSRP ನಂಬರ್ ಪ್ಲೇಟ್ ಅಳವಡಿಕೆಗೆ ಗಡುವು

ಕಾಲಾವಕಾಶ ಸೆ.15ಕ್ಕೆ ಅಂತ್ಯಗೊಂಡರೂ ಮೂರು ದಿನ ದಂಡ ವಿಧಿಸದಿರಲು ಸಾರಿಗೆ ಇಲಾಖೆ ನಿರ್ಧಾರ



ಬೆಂಗಳೂರು: ವಾಹನಗಳಿಗೆ ಹೈ ಸೆಕ್ಯುರಿಟಿ ನಂಬರ್ ಪ್ಲೇಟ್ (ಎಚ್‌ಎಸ್‌ಆರ್‌ಪಿ) ಅಳವಡಿಸುವ ಅಂತಿಮ ಗಡುವು ಭಾನುವಾರಕ್ಕೆ ಮುಕ್ತಾಯವಾಗಿದ್ದು, ಈ ನಡುವೆ ಸೆ.18ರವರೆಗೂ ದಂಡವೂ ಸೇರಿದಂತೆ ಯಾವ ಕಠಿಣ ಕ್ರಮ ಕೈಗೊಳ್ಳದಂತೆ ಪೊಲೀಸರಿಗೆ ಸಾರಿಗೆ ಇಲಾಖೆ ಸೂಚನೆ ನೀಡಿದೆ.

ಸಾರಿಗೆ ಇಲಾಖೆ ಸೂಚನೆ ಹಿನ್ನೆಲೆಯಲ್ಲಿ ನೋಂದಣಿ ಮಾಡಿಸಿಕೊಳ್ಳದವರಿಗೆ ನೋಂದಣಿ ಮಾಡಿಸಿಕೊಳ್ಳುವ ಅವಕಾಶ ಸಿಕ್ಕಂತಾಗಿದೆ. ಸೆಪ್ಟೆಂಬರ್ 18ರಂದು ಎಚ್‌ಎಸ್‌ಆರ್‌ಪಿ ಅಳವಡಿಕೆ ಸಂಬಂಧಿಸಿದ ಅರ್ಜಿ ವಿಚಾರಣೆ ಹೈಕೋರ್ಟ್‌ನಲ್ಲಿ ಬರಲಿದೆ. ಹೀಗಾಗಿ, ಅಲ್ಲಿಯವರೆಗೆ ವಾಹನ ಮಾಲೀಕರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳುವುದು ಬೇಡ ಎಂದು ಸಾರಿಗೆ ಇಲಾಖೆ ಆಯುಕ್ತ ▶ 9ನೇ ಪುಟಕ್ಕೆ

ನಾಗಮಂಗಲದಲ್ಲಿ ಸರ್ವಧರ್ಮೀಯರ ಗಣಪತಿ ಪೂಜೆ



ನಾಗಮಂಗಲದಲ್ಲಿ ಸೋಮವಾರ ನಡೆದ ಗಣೇಶೋತ್ಸವದಲ್ಲಿ ಮುಸ್ಲಿಮರು ಸೇರಿದಂತೆ ಸರ್ವಧರ್ಮೀಯರು ಭಾಗವಹಿಸಿ, ಭಾವೈಕ್ಯತೆ ಮೆರೆದರು.

ನಾಗಮಂಗಲ: ನಾಗಮಂಗಲದಲ್ಲಿ ಇತ್ತೀಚೆಗೆ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಗಲಭೆ, ಅದರಿಂದ ಪ್ರಕ್ಷುಬ್ಧ ಪರಿಸ್ಥಿತಿ, ಹಲವರ ಬಂಧನ, ರಾಜಕಾರಣಿಗಳ ಮಾಮೂಲಿ ಆರೋಪ–ಪ್ರತ್ಯಾರೋಪದಿಂದ ಸ್ಥಳೀಯ ಜನರಲ್ಲಿ ಮತ್ತಷ್ಟು ಆತಂಕ. ಸದ್ಯ ಈ ಎಲ್ಲವೂ ಸುಧಾರಿಸಿದೆ. ಎಂದಿನಂತೆ ಮಾರುಕಟ್ಟೆಯಲ್ಲಿ ತರಕಾರಿ ವ್ಯಾಪಾರ ವಹಿವಾಟು ಸಾಗಿದ್ದರೆ, ದಿನಸಿ ಅಂಗಡಿಗಳು, ಬಟ್ಟೆ ಅಂಗಡಿಗಳು ತೆರೆದಿವೆ. ಭರ್ಜರಿ ವ್ಯಾಪಾರವೂ ನಡೆಯುತ್ತಿದೆ. ಯಾರೋ ಮಾಡಿದ್ದಕ್ಕೆ ನಮಗ್ಯಾಕಪ್ಪಾ ಈ ಸಂಕಷ್ಟ ಎಂಬಂತೆ ಜನ ನಿಟ್ಟುಸಿರು ಬಿಟ್ಟಿದ್ದಾರೆ.

ಈಗ ಮತ್ತೊಂದು ಸಂತಸದ ಸಂಗತಿ. ಇಂದು(ಸೋಮವಾರ) ಪಟ್ಟಣದ ಶ್ರೀ ವೀರಭದ್ರೇಶ್ವರ ಯುವಕರ ಸಂಘ ಹಾಗೂ ಟ್ಯಾಂಕ್ ಮೈದಾನದ ವಿಘ್ನೇಶ್ವರ ಯುವಕರ ಸಂಘದ ವತಿಯಿಂದ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನೆಯನ್ನು ಹಿಂದು–ಮುಸ್ಲಿಮರು ಒಳಗೊಂಡು ಸರ್ವ ಧರ್ಮಿಯರು ಒಟ್ಟಾಗಿ ನೆರವೇರಿಸುವ ಮೂಲಕ ಸೌಹಾರ್ದತೆ ಮೆರೆದಿದ್ದಾರೆ. ಪೊಲೀಸ್ ಬಂದೋಬಸ್ತ್ ಇದ್ದರೂ ಅದರ ಬಗ್ಗೆ ಯೋಚಿಸದ ಜನರು ಪಟ್ಟಣದ ಹಂಪೆ ಅರಸನ ಕೊಳದಲ್ಲಿ ಸಕಲ ಪೂಜೆ ಪುರಸ್ಕಾರದೊಂದಿಗೆ ಎರಡೂ ಸಂಘಗಳಿಂದ ಪೂಜಿಸಿದ್ದ ಎರಡೂ ಗಣಪತಿ ವಿಗ್ರಹಗಳನ್ನು ವಿಸರ್ಜನೆ ಮಾಡಲಾಯಿತು.

ಈ ಸಂದರ್ಭದಲ್ಲಿ ಟ್ಯಾಂಕ್ ಮೈದಾನದ ವಿಘ್ನೇಶ್ವರ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಮೂಳೆ ಮಂಜ, ವಿಜಯ್, ಲಕ್ಷ್ಮಣ, ಮಂಜು, ಸಂಚಾಲಕರಾದ ಯಶವಂತ ಇತರ ಸದಸ್ಯರು ಎಲ್ಲರನ್ನು ಒಳಗೊಂಡು ಭಕ್ತಿ–ಭಾವ, ಸಂಭ್ರಮದಿಂದ ಗಣಪತಿ ವಿಸರ್ಜನಾ ಕಾರ್ಯವನ್ನು ಯಶಸ್ವಿಗೊಳಿಸಿದರು.

ಅತ್ತ ತಾಲೂಕಿನ ಬೆಳ್ಳೂರು ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿಯೂ ಗಣೇಶನ ವಿಸರ್ಜನೆ ವೇಳೆ ಜೈನ, ಮುಸ್ಲಿಂ ಬಾಂಧವರು, ಗಣೇಶನ ಮೂರ್ತಿಗೆ ಪೂಜೆ ಸಲ್ಲಿಸಿ ಡಿವೈಎಸ್‌ಪಿ ಡಾ.ಎ.ಆರ್.ಸುಮಿತ್ ಹಾಗೂ ಎಸ್.ಐ ರವಿಕುಮಾರ್ ನೇತೃತ್ವದಲ್ಲಿ ವಿಸರ್ಜನೆ ಮಾಡಿದರು. ಈ ಸಂದರ್ಭದಲ್ಲಿ ಮುಸ್ಲಿಂ ಬಾಂಧವರಾದ ಮಹಮ್ಮದ್ ಯಾಸಿನ್, ಕಲಿಂ ಉಲ್ಲಾ, ಅಕ್ರಮ್, ತನ್ವೀರ್, ಬಿಯುಕೆ ಕಲೀಮ್, ರಫೀಕ್ ಹಾಗೂ ಜೈನ್ ಸಮುದಾಯದ ಅಧ್ಯಕ್ಷ ಪದ್ಮನಾಭ, ಪಾಪಣ್ಣ, ಸಿ.ರವಿ, ಭವರ್ ಲಾಲ್, ರಾವ್ ಲಾಲ್ ಇತರರು ಉಪಸ್ಥಿತರಿದ್ದರು.

ಘರ್ಷಣೆಯಿಂದ ನಲುಗಿದ್ದ ನಾಗಮಂಗಲದಲ್ಲಿ ಸರ್ವಧರ್ಮೀಯರ ಈ ಸೌಹಾರ್ದತೆ ಸಂದೇಶ ಕಹಿ ಘಟನೆ ಮರೆತು, ಸಮಭಾವ ಮೂಡಿಸಿರುವುದಂತೂ ನಿಜ. ಬೀದಿ ಬದಿ ವ್ಯಾಪಾರಿಗಳು ಎಂದಿನಂತೆ ವ್ಯಾಪಾರ–ವಹಿವಾಟು ನಡೆಸುತ್ತಿದ್ದಾರೆ.

ಕೊರಿಯಾ ಮಣಿಸಿ ದಾಖಲೆಯ 5ನೇ ಬಾರಿ ಫೈನಲ್‌ಗೇರಿದ ಹಾಲಿ ಚಾಂಪಿಯನ್ ಭಾರತ



ಮೋಕಿ (ಚೀನಾ): ಚೀನಾದಲ್ಲಿ ನಡೆಯುತ್ತಿರುವ ಏಷ್ಯನ್ ಹಾಕಿ ಚಾಂಪಿಯನ್ಸ್ ಟ್ರೋಫಿಯಲ್ಲಿ ತನ್ನ ಅಜೇಯ ಓಟವನ್ನು ಮುಂದುವರೆಸಿರುವ ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ಹಾಕಿ ತಂಡ ಇಂದು ನಡೆದ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ಕೊರಿಯಾ ತಂಡವನ್ನು 4–1 ಗೋಲುಗಳಿಂದ ಮಣಿಸಿ ದಾಖಲೆಯ 5ನೇ ಬಾರಿಗೆ ಫೈನಲ್‌ಗೇರಿದೆ.

ಈ ಟೂರ್ನಿಯಲ್ಲಿ ಹಾಲಿ ಚಾಂಪಿಯನ್ ಆಗಿರುವ ಟೀಂ ಇಂಡಿಯಾ ಪ್ರಶಸ್ತಿ ಪಂದ್ಯದಲ್ಲಿ ಆತಿಥೇಯ ಚೀನಾ ತಂಡವನ್ನು ಎದುರಿಸಲಿದೆ. ಈ ಪಂದ್ಯಕ್ಕೂ ಮುನ್ನ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಚೀನಾ ತಂಡ, ಪಾಕಿಸ್ತಾನವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 2–0 ಅಂತರದಲ್ಲಿ ಮಣಿಸಿ ▶ 6ನೇ ಪುಟಕ್ಕೆ

ಮೈಸೂರು ಟಾಯ್ಸ್ ಖ್ಯಾತಿಯ ಪ್ರಫುಲ್ಲ ಚಂದ್ರ ಇನ್ನಿಲ್ಲ

ಗೃಹ ಸಚಿವ ಡಾ.ಜಿ.ಪರಮೇಶ್ವರ್‌ರಿಂದ ಪಾರ್ಥಿವ ಶರೀರದ ಅಂತಿಮ ದರ್ಶನ



ಮೈಸೂರು, ಸೆ.16(ಆರ್‌ಕೆ)– ಮೈಸೂರು ಟಾಯ್ಸ್ ಖ್ಯಾತಿಯ ಉದ್ಯಮಿ ಪಿ.ಪ್ರಫುಲ್ಲ ಚಂದ್ರ (97) ಅವರು ಭಾನುವಾರ ಮಧ್ಯಾಹ್ನ ಮೈಸೂರಿನ ಜಯಲಕ್ಷ್ಮೀಪುರಂನ ಆಶ್ರಮ ರಸ್ತೆಯ ತಮ್ಮ ನಿವಾಸದಲ್ಲಿ ನಿಧನರಾದರು.

ಅವರು ಪುತ್ರ ಬೆಂಗಳೂರಿನ ಗ್ಲೋಬಲ್ ಟೆಕ್‌ಪಾರ್ಕ್ ಪ್ರೈವೇಟ್ ಲಿಮಿಟೆಡ್ ಮಾಲೀಕ ಸತೀಶ ಪಿ.ಚಂದ್ರ, ಪುತ್ರಿ ಭಾರತಿದೇವಿ, ಮೊಮ್ಮಕ್ಕಳು, ಅಳಿಯ, ಸೊಸೆ, ಸ್ನೇಹಿತರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

1935ರಲ್ಲಿ ತಂದೆ ಎಂ.ವೀರಪ್ಪ ಅವರು ಸ್ಥಾಪಿಸಿದ್ದ ಮೈಸೂರು ಟಾಯ್ಸ್ ಕಂಪನಿಯನ್ನು ಇವರು ಮುನ್ನಡೆಸಿಕೊಂಡು ಬಂದಿದ್ದರು. ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಘಟಕವೂ ಇತ್ತು. (ಈಗ ಬಂದ್ ಆಗಿದೆ). ನಂತರ ಪ್ರಫುಲ್ಲಚಂದ್ರ ಅವರು ಪುತ್ರ ಸತೀಶ ಚಂದ್ರರೊಂದಿಗೆ ನಂಜನಗೂಡು ರಸ್ತೆಯ ಕಡಕೊಳ ಬಳಿ ಮರದ ಬೊಂಬೆಗಳನ್ನು ತಯಾರಿಸುವ ಘಟಕವನ್ನು ಸ್ಥಾಪಿಸಿದ್ದರು.

ಇವರು ಅಂತಾರಾಷ್ಟ್ರೀಯ ಗುಣಮಟ್ಟದ ಗೊಂಬೆಗಳನ್ನು ತಯಾರಿಸುತ್ತಿದ್ದು, ಅವರ ಉತ್ಪನ್ನಗಳನ್ನು ಪೂರೈಸುವಂತೆ ಯೂನಿಸೆಫ್ ಕೋರಿತ್ತು. ಸ್ವೀಡನ್ ಮೂಲಕ ಐಕೆಇಎ ಇವರ ಉತ್ಪನ್ನಗಳನ್ನು ಖರೀದಿಸುತ್ತಿತ್ತು. ಹಿರಿಯ ರೋಟೇರಿಯನ್ ಆಗಿದ್ದ ಪ್ರಫುಲ್ಲಚಂದ್ರ ಅವರು, ರೋಟರಿ ಕ್ಲಬ್ ಆಫ್ ಮೈಸೂರು (ಪಶ್ಚಿಮ) ಅಧ್ಯಕ್ಷರಾಗಿ ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು.

ಅವರ ಕುಟುಂಬವು ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಎಂ.ವೀರಪ್ಪ ಹೆಸರಿನ ದತ್ತಿ ಸ್ಥಾಪಿಸಿ, ಪ್ರತೀ ವರ್ಷ ಸಾಧನೆಗೈದ ಕಲಾವಿದರಿಗೆ ಗೌರವಿಸುತ್ತಾ ಬಂದಿದೆ. ಇಂದು ಮಧ್ಯಾಹ್ನ ಗೋಕುಲಂ ಚಿರಶಾಂತಿ ಧಾಮದಲ್ಲಿ ಪ್ರಫುಲ್ಲಚಂದ್ರ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಪತ್ನಿ ಶ್ರೀಮತಿ ಕನ್ನಿಕಾ ಪರಮೇಶ್ವರಿ ಅವರೊಂದಿಗೆ ಇಂದು ಬೆಳಗ್ಗೆ ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಪ್ರಫುಲ್ಲಚಂದ್ರ ಅವರ ನಿವಾಸಕ್ಕೆ ಆಗಮಿಸಿ, ಅಗಲಿದ ಸ್ನೇಹಿತ ಪ್ರಫುಲ್ಲಚಂದ್ರ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ತೀವ್ರ ಸಂತಾಪ ಸೂಚಿಸಿದರು.



ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಪತ್ನಿ ಶ್ರೀಮತಿ ಕನ್ನಿಕಾ ಪರಮೇಶ್ವರಿ ಅವರೊಂದಿಗೆ ಜಯಲಕ್ಷ್ಮೀಪುರಂನಲ್ಲಿರುವ ಪ್ರಫುಲ್ಲಚಂದ್ರ ಅವರ ನಿವಾಸಕ್ಕೆ ಆಗಮಿಸಿ, ಅಗಲಿದ ಸ್ನೇಹಿತ ಪ್ರಫುಲ್ಲಚಂದ್ರ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಾಳೆ ಬೆಳದಿಂಗಳ ಸಂಗೀತ


ಎಂ.ಎಸ್.ಜಯರಾಂ


ವಿದುಷಿ ಪಾವನಿ


ವಿದ್ವಾನ್ ರತ್ನತೇಜ


ವಿದ್ವಾನ್ ಶಿವಶಂಕರಸ್ವಾಮಿ

ಮೈಸೂರು, ಸೆ. 16–ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಸೆ.18ರಂದು ಸಂಜೆ 6 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–271ರ ಅಂಗವಾಗಿ ವಿದುಷಿ ಪಾವನಿ ಭಾರದ್ವಾಜ್‌ರವರಿಂದ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ.


ವಿದುಷಿ ಪಾವನಿ ಭಾರದ್ವಾಜ್, ಸಂಗೀತದ ಕೌಟುಂಬಿಕ ಹಿನ್ನೆಲೆಯುಳ್ಳವರು. ಸುಪ್ರಸಿದ್ಧ ಹಾರ್ಮೋನಿಯಂ ವಾದಕರಾಗಿದ್ದ ವಿದ್ವಾನ್ ಅರುಣಾಚಲಪ್ಪನವರು ಇವರ ಮುತ್ತಾತ. ತಾತ ಗಾನಕಲಾ ಭೂಷಣ ವಿದ್ವಾನ್ ಎ.ವೀರಭದ್ರಯ್ಯನವರು. ಹಿರಿಯ ಪಿಟೀಲು ವಾದಕರಾಗಿದ್ದವರು ಮತ್ತು ಸಂಗೀತವಾದ್ಯಗಳನ್ನು ತಯಾರಿಸುವ ಅರುಣ ಮ್ಯೂಸಿಕಲ್ಸ್‌ನ ಸಂಸ್ಥಾಪಕರು. ತಂದೆ ವಿದ್ವಾನ್ ಎ.ವಿ.ಕಾಶೀನಾಥ್‌ರವರು, ಖ್ಯಾತ ಲಯವಾದ್ಯ ಕಲಾವಿದರು ಮತ್ತು ವಾದ್ಯಗಳ ತಯಾರಕರಾಗಿದ್ದರು. ತಾಯಿ ವಿದುಷಿ ಪುಷ್ಪಾ ಕಾಶೀನಾಥ್‌ರವರು ಆಕಾಶವಾಣಿಯ 'ಎ' ಶ್ರೇಣಿ ವೀಣಾವಾದಕರು.

ವಯೋಲಿನ್ ಸಹಕಾರ ನೀಡಲಿರುವ ವಿದ್ವಾನ್ ರೂಪನಗುಡಿ ರತ್ನತೇಜ ಅವರು ಪ್ರಾರಂಭಿಕ ಸಂಗೀತ ಶಿಕ್ಷಣವನ್ನು ವಿದ್ವಾನ್ ಅಶೋಕ್ ಗುರುಜಾಲೆಯವರ ಬಳಿ ಪಡೆದರು. ಅನಂತರ ದಿವಂಗತ ಶ್ರೀಪೇರಿ ಶ್ರೀರಾಮಮೂರ್ತಿಯವರಲ್ಲಿ ಶಿಷ್ಯವೃತ್ತಿಯನ್ನು ಮುಂದುವರಿಸಿದರು. ಪ್ರಸ್ತುತ ಡಾ.ಮೈಸೂರು ಮಂಜುನಾಥ್ ಅವರ ಬಳಿ ಉನ್ನತ ವಾದನದ ಸೂಕ್ಷ್ಮತೆಗಳನ್ನು ಅಭ್ಯಾಸ ಮಾಡುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಎಂಎ (ಮ್ಯೂಸಿಕ್) ಪದವೀಧರರು.

ಮೃದಂಗ ವಾದನ ನೀಡಲಿರುವ ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿಯವರು ಸಂಗೀತ ಕ್ಷೇತ್ರದ ದಿಗ್ಗಜರಿಗೆ ಸಾಥ್ ನೀಡಿರುವರು. ಜುಗಲ್‌ಬಂದಿ ಕಾರ್ಯಕ್ರಮಗಳನ್ನೂ ನೀಡಿದ್ದಾರೆ. ಕರ್ನಾಟಕ ಗಾನಕಲಾ ಪರಿಷತ್ತಿನಿಂದ 'ಉತ್ತಮ ಮೃದಂಗ ಕಲಾವಿದರು' ಎಂದು ಪುರಸ್ಕೃತರಾಗಿರುವವರು.

ಘಟಂ ಸಹಕಾರ ವಿದ್ವಾನ್ ಎಂ.ಎಸ್. ಜಯರಾಂ, ಮೈಸೂರಿನ ತಾಳವಾದ್ಯ ಕಲಾವಿದರಲ್ಲಿ ಒಬ್ಬರಾಗಿದ್ದ ವಿದ್ವಾನ್ ಎಂ.ಎಸ್. ಶೇಷಪ್ಪನವರ ಸುಪುತ್ರರು; ಲಯವಾದ್ಯದ ಕಡೆ ಸಹಜವಾಗಿಯೇ ಇವರ ಆಸಕ್ತಿ ಬೆಳೆಯಿತು. ತಂದೆ ಹಾಗೂ ದೊಡ್ಡಪ್ಪ ಎಂ.ಎಸ್. ರಾಮಯ್ಯನವರ ಬಳಿ ಮೃದಂಗ, ತಬಲಾ ಮತ್ತು ಘಟಂ ವಾದ್ಯಗಳನ್ನು ಅಭ್ಯಾಸ ಮಾಡಿದ್ದಾರೆ. ಅರಮನೆಯ ವಾದ್ಯಗೋಷ್ಠಿಯಲ್ಲಿ 32 ವರ್ಷ ತಬಲಾ ಕಲಾವಿದರಾಗಿ ಎರಡು ವರ್ಷ ಬ್ಯಾಂಡ್ ಮಾಸ್ಟರ್ ಆಗಿ ಸೇವೆ ಸಲ್ಲಿಸಿದ್ದಾರೆ. ಆಕಾಶವಾಣಿಯ ಬಿ–ಹೈ ಶ್ರೇಣಿಯ ಕಲಾವಿದರು.

ವೈದ್ಯರು, ಇಂಜಿನಿಯರ್ಸ್, ಶಿಕ್ಷಕರ ದಿನಾಚರಣೆ



ಮೈಸೂರ್ ಸೆಂಟ್ರಲ್ ಲಯನ್ ಸಂಸ್ಥೆ ವತಿಯಿಂದ ಶಿಕ್ಷಕರು, ವೈದ್ಯರು ಹಾಗೂ ಅಭಿಯಂತರರ ದಿನಾಚರಣೆ ಅಂಗವಾಗಿ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಸೆ.16(ಎಸ್‌ಪಿಎನ್)– ಮೈಸೂರ್ ಸೆಂಟ್ರಲ್ ಲಯನ್ ಸಂಸ್ಥೆ ವತಿಯಿಂದ ಶಿಕ್ಷಕರು, ವೈದ್ಯರು ಹಾಗೂ ಅಭಿಯಂತರರ ದಿನ ಆಚರಿಸಲಾಯಿತು.

ಅಂತರರಾಷ್ಟ್ರೀಯ ಲಯನ್ ಸಂಸ್ಥೆಯ ಲಯನ್ಸ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ವತಿಯಿಂದ ಕುಂಬಾರಕೊಪ್ಪಲು ಸರ್ಕಾರಿ ಪ್ರೌಢಶಾಲೆಯ ಆಂಗ್ಲಭಾಷಾ ಶಿಕ್ಷಕ ಎಂ.ಅರುಣ್‌ಕುಮಾರ್, ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಲೋಹಿತೇಶ್, ಮೇಟಗಳ್ಳಿ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಮೀನಾ ಹಾಗೂ ಮೈಸೂರು ನಗರಪಾಲಿಕೆ ಅಭಿಯಂತರ ಕೆ.ಜೆ.ಸಿಂಧು ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಲಯನ್ಸ್ ಸಂಸ್ಥೆ ಲಯನ್ ಕೆ.ದೇವೇಗೌಡ, ಲಯನ್ ಎಂ.ಸಿದ್ದೇಗೌಡ, ಲಯನ್ ಕೆ.ಬಿ.ಲಿಂಗರಾಜು, ಸಂಸ್ಥೆಯ ಅಧ್ಯಕ್ಷ ಬಿ.ಎಸ್.ಪ್ರಸಾದ್, ಕಾರ್ಯದರ್ಶಿ ಸುನಿಲ್, ಖಜಾಂಚಿ ಆರ್.ಸಿದ್ದೇಗೌಡ ಹಾಗೂ ಇತರೆ ಸದಸ್ಯರಿದ್ದರು.

ಮೈಸೂರಲ್ಲಿ ಅರ್ಥಪೂರ್ಣ ಈದ್ ಮಿಲಾದ್ ಆಚರಣೆ

ಮೈಸೂರು, ಸೆ.16(ಬಿಎಲ್‌ಐು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಂದು ಈದ್ ಮಿಲಾದ್ ಹಬ್ಬವನ್ನು ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಗರದ ಎಲ್ಲಾ ಮಸೀದಿಗಳಲ್ಲಿ ನಮಾಜ್ ಮಾಡಲಾಯಿತು. ಈ ವೇಳೆ ಧರ್ಮ ಗುರುಗಳು, ದೇಶದಲ್ಲಿ ಶಾಂತಿ ಸೌಹಾರ್ದತೆಯ ವಾತಾವರಣ ನಿರ್ಮಾಣವಾಗಬೇಕು. ಜಾತಿ, ಧರ್ಮದ ಭೇದವಿಲ್ಲದೆ ಎಲ್ಲರೂ ಸಹಬಾಳ್ವೆಯಿಂದ ಬಾಳಬೇಕು ಎಂದು ಕರೆ ನೀಡಿದರು. ಇಂದು ಸಂಜೆ ನಗರದ ಅಶೋಕ ರಸ್ತೆಯ ಮಿಲಾದ್ ಬಾಗ್‌ನಿಂದ ಆರಂಭವಾದ ಮೆರವಣಿಗೆ ಸಾಡೆ ರಸ್ತೆ, ಮಿಷನ್ ಆಸ್ಪತ್ರೆ ವೃತ್ತ, ಪುಲಕೇಶಿ ರಸ್ತೆ, ಸೈಂಟ್ ಫಿಲೋಮಿನಾ ಚರ್ಚ್ ಮೂಲಕ ಮತ್ತೆ ಮಿಲಾದ್ ಪಾರ್ಕ್ ತಲುಪಿತು. ತರುವಾಯ ಮಿಲಾದ್ ಪಾರ್ಕ್‌ನಲ್ಲಿ ಧಾರ್ಮಿಕ ಸಭೆ ನಡೆಯಿತು.



ಮೈಸೂರಿನಲ್ಲಿ ಸೋಮವಾರ ಈದ್ ಮಿಲಾದ್ ಹಬ್ಬವನ್ನು ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಾಸಕ ಮುನಿರತ್ನಗೆ ಜಯದೇವದಲ್ಲಿ ಚಿಕಿತ್ಸೆ

ಬೆಂಗಳೂರು, ಸೆ.16– ಗುತ್ತಿಗೆದಾರನಿಗೆ ಜೀವ ಬೆದರಿಕೆ ಹಾಗೂ ಜಾತಿ ನಿಂದನೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ರಾಜರಾಜೇಶ್ವರಿ ನಗರ ಬಿಜೆಪಿ ಶಾಸಕ ಮುನಿರತ್ನ ಅವರಿಗೆ ವಿಚಾರಣೆ ವೇಳೆ ತೀವ್ರ ಎದೆನೋವು ಕಾಣಿಸಿಕೊಂಡಿದ್ದು, ಸೋಮವಾರ ರಾತ್ರಿ ಅವರನ್ನು ಜಯದೇವ ಆಸ್ಪತ್ರೆಗೆ ಕರೆದೊಯ್ದು, ಚಿಕಿತ್ಸೆ ನಂತರ ಅಶೋಕನಗರ ಪೊಲೀಸ್ ಠಾಣೆಗೆ ಕರೆತರಲಾಯಿತು. ಮುನಿರತ್ನ ಅವರ ಪೊಲೀಸ್ ಕಸ್ಟಡಿ ಸೋಮವಾರ ಮುಕ್ತಾಯವಾಗಲಿದ್ದು, ಮಂಗಳವಾರ ಅವರನ್ನು ಪೊಲೀಸರು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಿದ್ದಾರೆ.



ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಅಂತರ ಶಾಲಾ ವಾಲಿಬಾಲ್; ಥ್ರೋಬಾಲ್ ಪಂದ್ಯಾವಳಿ



ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿದ್ದ ಅಂತರ ಶಾಲಾ ವಾಲಿಬಾಲ್, ಥ್ರೋಬಾಲ್ ಪಂದ್ಯಾವಳಿಗೆ ಪೊಲೀಸ್ ಇನ್ಸ್‌ಪೆಕ್ಟರ್ ಮೋಹಿತ್ ಸಹದೇವ್ ಚಾಲನೆ ನೀಡಿದರು.

ಮೈಸೂರು, ಸೆ. 16–ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಪ್ರೌಢಶಾಲಾ ಬಾಲಕ ಮತ್ತು ಬಾಲಕಿಯರ ಅಂತರ ಶಾಲಾ ವಾಲಿಬಾಲ್ ಮತ್ತು ಥ್ರೋಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.


ಮುಖ್ಯ ಅತಿಥಿಗಳಾಗಿ ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮೋಹಿತ್ ಸಹದೇವ್ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸಂಸ್ಥೆಯ ವ್ಯವಸ್ಥಾಪಕ ವಿಶ್ವಸ್ಥ ಡಾ॥ ಭವಾನಿಶಂಕರ್ ವಹಿಸಿದ್ದರು.

ಥ್ರೋಬಾಲ್ ಬಾಲಕ ವಿಭಾಗ: ಸಿಟಿಜನ್ಸ್ ಪ್ರೌಢಶಾಲೆ (ಪ್ರಥಮ), ವಿಜಯ ವಿಠಲ ಪ್ರೌಢಶಾಲೆ ಶಾಲೆ (ದ್ವಿತೀಯ), ಮಹಾವೀರ್ ಪ್ರೌಢಶಾಲೆ (ತೃತೀಯ)

ಥ್ರೋಬಾಲ್ ಬಾಲಕಿಯರ ವಿಭಾಗ : ಗೀತಶಿಶು ಶಿಕ್ಷಣ ಸಂಸ್ಥೆ (ಪ್ರಥಮ),. ಕ್ರೈಸ್ಟ್ ಪಬ್ಲಿಕ್ ಸ್ಕೂಲ್ (ದ್ವಿತೀಯ), ಸಿಟಿಜನ್ಸ್ ಶಾಲೆ (ತೃತೀಯ)

ವಾಲಿಬಾಲ್ ಬಾಲಕರ ವಿಭಾಗ: ಪೊಲೀಸ್ ಪಬ್ಲಿಕ್ ಸ್ಕೂಲ್ (ಪ್ರಥಮ), ಸೆಂಟ್ ರೆಸೆಲೋ ಸೆಂಟ್ರಲ್ ಸ್ಕೂಲ್ (ದ್ವಿತೀಯ), ಸರ್ಕಾರಿ ಪ್ರೌಢಶಾಲೆ ಕುಕ್ಕರಹಳ್ಳಿ (ತೃತೀಯ). ಈ ವೇಳೆ ಮಹರ್ಷಿ ವಿದ್ಯಾಸಂಸ್ಥೆಯ ಸಂಯೋಜಕ ತೇಜಸ್ ಬಿ.ಶಂಕರ್, ಕಾಲೇಜು ಪ್ರಾಚಾರ್ಯ ಮಹದೇವಸ್ವಾಮಿ, ಸಂಸ್ಥೆಯ ಹಿರಿಯ ಪ್ರಾಚಾರ್ಯ ಗೋಪಾಲಸ್ವಾಮಿ, ಪ್ರಾಚಾರ್ಯರಾದ ವಿಜಯಾ ನರಸಿಂಹಮ್, ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಪುರಸ್ಕಾರ ಪಡೆದ ಉಪನ್ಯಾಸಕ ಎಚ್.ಎನ್.ಗಿರೀಶ್ ಅವರಿಗೆ ಕೇಂದ್ರ ಸಚಿವ ವಿ.ಸೋಮಣ್ಣರಿಂದ ಸನ್ಮಾನ



ಉತ್ತಮ ಶಿಕ್ಷಕ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ಉಪನ್ಯಾಸಕ ಹೆಚ್.ಎನ್.ಗಿರೀಶ್ ಅವರನ್ನು ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಕೇಂದ್ರ ರೈಲ್ವೇ ರಾಜ್ಯ ಸಚಿವ ವಿ.ಸೋಮಣ್ಣ ಅಭಿನಂದಿಸಿದರು. ಪ್ರಶಸ್ತಿ ಪಡೆಯಲು ದೆಹಲಿಗೆ ತೆರಳಿದ್ದ ವೇಳೆ ಗಿರೀಶ್ ಅವರಿಗೆ ತಮ್ಮ ನಿವಾಸದಲ್ಲೇ ಸಚಿವ ವಿ.ಸೋಮಣ್ಣ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದರು. ಈ ವೇಳೆ ಶಾಸಕ ಶ್ರೀವತ್ಸ, ಮಾಜಿ ಶಾಸಕ ನಾಗೇಂದ್ರ ಇನ್ನಿತರರಿದ್ದರು.

ಎತ್ತಿನಹೊಳೆ ಯೋಜನೆ ಪೈಪ್‌ಲೈನ್ ಸೋರಿಕೆ

ಬೆಳೆಗಳಿಗೆ ನುಗ್ಗಿದ ನೀರು, ರೈತರು ಕಂಗಾಲು



ಸಕಲೇಶಪುರ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆಯ ಪೈಪ್‌ಲೈನ್ ಸೋರಿಕೆಯಾಗಿದ್ದು, ಬೆಳೆ, ರಸ್ತೆ ಹಾಗೂ ಕಟ್ಟಡಗಳಿಗೆ ನೀರು ನುಗ್ಗಿ ಹಾನಿಯುಂಟಾಗಿದೆ. 15 ದಿನಗಳ ಹಿಂದೆಯೂ ಇದೇ ಸ್ಥಳದಲ್ಲಿ ಸೋರಿಕೆಯಾಗಿತ್ತು. ಮತ್ತೆ ಸೋರಿಕೆಯಿಂದ ಅಪಾರ ನಷ್ಟ ಉಂಟಾಗಿದೆ.

ಸೆ.6ರಂದು ಮೊದಲ ಹಂತದ ನೀರೆತ್ತುವ ಏತ ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದ್ದರು. ನಂತರ 5 ಚೆಕ್‌ಡ್ಯಾಂಗಳಿಂದ ನಿರಂತರವಾಗಿ ನೀರನ್ನು ಹೆಬ್ಬನಹಳ್ಳಿ ಚೆಕ್ ಡ್ಯಾಂಗೆ ಹರಿಸಲಾಗುತ್ತಿದೆ. ಸತತವಾಗಿ ಹರಿಯುತ್ತಿರುವ ನೀರಿನ ಒತ್ತಡದಿಂದ ಪೈಪ್‌ಲೈನ್ ಒಡೆದಿದ್ದು, ತಗ್ಗು ಪ್ರದೇಶದ ಮನೆ, ಜಮೀನು ಹಾಗೂ ಎಸ್ಟೇಟ್‌ಗೆ ನೀರು ನುಗ್ಗಿದೆ. ಇದರಿಂದಾಗಿ ಅಪಾರ ಪ್ರಮಾಣದ ಹಾನಿಯುಂಟಾಗಿದೆ. ಈ ನಡುವೆ ಕಳಪೆ ಕಾಮಗಾರಿಯಿಂದ ಪೈಪ್‌ಲೈನ್ ಒಡೆದಿದೆ ಎಂದು ಸ್ಥಳೀಯರು ಆರೋಪಿಸಿದ್ದು, ನಷ್ಟಕ್ಕೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಈ ಹಿಂದೆ ಯೋಜನೆ ಉದ್ಘಾಟನೆಗೂ ಮುನ್ನವೇ ಪೈಪ್‌ಲೈನ್ ಹಾಳಾಗಿತ್ತು. ಕಳಪೆ ಕಾಮಗಾರಿಯಿಂದ ಪೈಪ್‌ಲೈನ್ ಪದೇ ಪದೆ ಹಾಳಾಗುತ್ತಿದೆ. ನಿರಂತರವಾಗಿ ನೀರು ಪಂಪ್ ಮಾಡಿದ್ದರಿಂದ ಪೈಪ್‌ಲೈನ್ ಹಾಳಾಗಿದೆ ಎಂದು ಮೂಲಗಳು ತಿಳಿಸಿವೆ.

ಸಭಿಕರ ಮನಸೂರೆಗೊಂಡ ಕೊಳಲು–ವಯೋಲಿನ್ ವಾದನ



'ಪಾರಂಪರಿಕ ಸಂಗೀತೋತ್ಸವ'ದಲ್ಲಿ ವಿದ್ವಾನ್ ಶ್ರುತಿಸಾಗರ್ ಕೊಳಲು ಮತ್ತು ವಿದುಷಿ ಚಾರುಮತಿ ರಘುರಾಮನ್ ವಯೋಲಿನ್ ನುಡಿಸುತ್ತಿರುವ ದೃಶ್ಯ.

ಮೈಸೂರು, ಸೆ.16(ಎಸ್‌ಪಿಎನ್)– ವಿದ್ವಾನ್ ಶ್ರುತಿಸಾಗರ್ ನುಡಿಸಿದ ಕೊಳಲು ಮತ್ತು ವಿದುಷಿ ಚಾರುಮತಿ ರಘುರಾಮನ್ ನುಡಿಸಿದ ವಯೋಲಿನ್ ವಾದನ ಸಭಿಕರ ಮನಸೂರೆಗೊಂಡಿತು.

ನಗರದ ವಾಣಿವಿಲಾಸ ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ 'ಶ್ರೀಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟೆಬಲ್ ಟ್ರಸ್ಟ್' (ಎಸ್‌ಪಿವಿಜಿಎಂಸಿ) ಏರ್ಪಡಿಸಿರುವ 63ನೇ 'ಪಾರಂಪರಿಕ ಸಂಗೀತೋತ್ಸವ'ದ 9ನೇ ದಿನದ ಕಾರ್ಯಕ್ರಮದಲ್ಲಿ ವಿದ್ವಾನ್ ಶ್ರುತಿ ಸಾಗರ್ ನುಡಿಸಿದ ಕೊಳಲು ವಾದನ ವಿದುಷಿ ಚಾರುಮತಿ ರಘುರಾಮನ್ ನುಡಿಸಿದ ವಯೋಲಿನ್ ವಾದನ ಮೆರಗು ತಂದುಕೊಟ್ಟಿತು. ವಿದ್ವಾನ್ ಅನಂತಕೃಷ್ಣನ್ ಮೃದಂಗ ಹಾಗೂ ಮತ್ತೊಬ್ಬರು ಘಟಂ ನುಡಿಸಿ ಸಂಗೀತ ಕಛೇರಿಗೆ ಮೆರಗು ತಂದರು.

ಇದಕ್ಕೂ ಮುನ್ನ ಕನ್ನಡ ಭಾಗವತ್‌ವನ್ನು ವಿದುಷಿ ಡಿ.ಎನ್.ಸ್ವಾತಿ ವಾಚನ ಮಾಡಿದರು. ವಿದ್ವಾನ್ ಶ್ರೀನಿವಾಸ ಫಣಿ ವ್ಯಾಖ್ಯಾನಿಸಿದರು. ಬೆಳಗ್ಗೆ ಶ್ರೀ ಗಣಪತಿ ಮತ್ತು ಶ್ರೀ ಭೂ ಸೂಕ್ತ ಹೋಮವನ್ನು ಚಳ್ಳಕರೆ ಸಹೋದರರು ನಡೆಸಿಕೊಟ್ಟರು. ನಂತರ ಶ್ರೀ ಅಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ್ಯ ಪರಕಾಲ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹೋಮಕ್ಕೆ ಪೂರ್ಣಾಹುತಿ ನೀಡಲಾಯಿತು.

ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಸೆ.16–ಪ್ರಧಾನ ಮಂತ್ರಿ–ಬೀದಿಬದಿ ವ್ಯಾಪಾರಿಗಳ ಆತ್ಮನಿರ್ಭರ್ ನಿಧಿ (ಪಿ.ಎಂ.ಸ್ವನಿಧಿ) ಯೋಜನೆಯಡಿ, ಕಡಿಮೆ ಬಡ್ಡಿದರದಲ್ಲಿ ಬ್ಯಾಂಕ್ ಮೂಲಕ ಸಾಲ ಸೌಲಭ್ಯ ಕಲ್ಪಿಸಲು ಬೋಗಾದಿ, ಶ್ರೀರಾಂಪುರ, ರಮ್ಮನಹಳ್ಳಿ ಮತ್ತು ಕಡಕೊಳ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ Ministry of Housing and Urban Affairsನ https://pmsva nidhi.mohua.gov.in ನಲ್ಲಿ ಬೀದಿಬದಿ ವ್ಯಾಪಾರಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಕೆವೈಸಿ. ದಾಖಲೆಗಳೊಂದಿಗೆ ನಿಮ್ಮ ಹತ್ತಿರದ ಸಿ.ಎಸ್.ಸಿ ಕಂಪ್ಯೂಟರ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಬೀದಿಬದಿ ವ್ಯಾಪಾರಿಗಳು ತಾವು ವ್ಯಾಪಾರ ಮಾಡುತ್ತಿರುವ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳನ್ನು ಭೇಟಿ ಮಾಡಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.09.2024 ಮಂಗಳವಾರ, ಮಳೆ ನಕ್ಷತ್ರ: ಉತ್ತರಾ, 13.09.2024 ರಿಂದ 26.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ ನಕ್ಷತ್ರ: ಶತಭಿಷ, ರಾಹುಕಾಲ : ಮಧ್ಯಾಹ್ನ 3 ರಿಂದ 4.30 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮದಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಗಂಟುಗಳು, ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳು, ಉಸಿರಾಟದ ಸಮಸ್ಯೆಗಳು ಮತ್ತು ಹಲ್ಲು ನೋವು, ಹುಳುಕು ಹಲ್ಲು, ಬಾಯಿಂದ ದುರ್ವಾಸನೆ, ವಸಡಿನಿಂದ ರಕ್ತಸ್ರಾವ ಮುಂತಾದ ದಂತ ಮತ್ತು ಬಾಯಿ ರೋಗಗಳಿಗೆ ಪ್ರತ್ಯೇಕ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.
- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಅವಧೂತ ದತ್ತಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ದತ್ತಪೀಠ ಉತ್ತರಾಧಿಕಾರಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರ 2ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರೀ ಸಂತಾನ ಗೋಪಾಲ ಯಾಗ, ಸ್ಥಳ: ಆಶ್ರಮದ ಆವರಣ, ನಂಜನಗೂಡು ರಸ್ತೆ, ಬೆಳಗ್ಗೆಯಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಕತ್ತು ಮತ್ತು ಭುಜದ ನೋವಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.
- **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಗಣಪತಿ ಹೋಮ ಮತ್ತು ಅನ್ನಸಂತರ್ಪಣೆ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.
- **ಮೈಸೂರು ಜಿಲ್ಲಾ ವಿಶ್ವಕರ್ಮ ಜಯಂತ್ಯುತ್ಸವ ಸಮಿತಿ, ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ** : ವಿಶ್ವಕರ್ಮ ಜಯಂತಿ, ಸಾನ್ನಿಧ್ಯ : ಶ್ರೀ ನೀಲಕಂಠಚಾರ್ಯ ಮಹಾಸ್ವಾಮಿಗಳು, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಸನ್ಮಾನ : ಖ್ಯಾತ ಶಿಲ್ಪಿ ಡಾ. ಅರುಣ್ ಯೋಗಿರಾಜ್, ಪದ್ಮಶ್ರೀ ಪುರಸ್ಕೃತರಾದ ಡಾ. ಕೆ.ಎಸ್. ರಾಜಣ್ಣ, ಡಾ. ಸಿ.ಆರ್. ಚಂದ್ರಶೇಖರ್, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಸಿ. ನಾಗಣ್ಣ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 10.30ಕ್ಕೆ.
- **ಹೀಲ್ ಸೌಹಾರ್ದ ವಿವಿಧೋದ್ದೇಶ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷೆ ಶ್ರೀಮತಿ ಎಸ್.ಎನ್. ರೇಣುಕ, ಸ್ಥಳ: ಸಹಕಾರಿ ಸಂಘದ ಕಚೇರಿ ಆವರಣ, ತಿಬ್ಬಾದೇವಿ ಸರ್ಕಲ್ ಹತ್ತಿರ, ವಿವೇಕಾನಂದ ರಸ್ತೆ, ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ.
- **ಮೈಸೂರು ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್ :** ಕರ್ನಾಟಕ ರಾಜ್ಯ ಅಂತರ–ಜಿಲ್ಲಾ ಜೂನಿಯರ್ ಮತ್ತು 23 ವಯೋಮಾನದ ಅಥ್ಲೆಟಿಕ್ ಕ್ರೀಡಾಕೂಟದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ಜಿ.ಡಿ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ ಮಾಜಿ ಶಾಸಕ ಸಾ.ರಾ. ಮಹೇಶ್, ಪಾಲಿಕೆ ಮಾಜಿ ಸದಸ್ಯ ಸತ್ಯರಾಜ್, ಭಾಸ್ಕರ್ ನಾಯಕ್, ಶ್ರೀಮತಿ ಡಿ.ಇ. ಸಂಗೀತಾ, ರಾಮಚಂದ್ರೇಗೌಡ, ಎಸ್. ರಾಜಶೇಖರ್, ಅಶೋಕ್ ಬಿ. ಶಿಂತ್ರಿ, ಬಿ.ಎಲ್. ಜಗದೀಶ್, ಚೈನ್ ಸಿಂಗ್ ರಾಜ್ ಪುರೋಹಿತ್, ಜಗನ್ನಾಥ್ ಸುರೇಶ್, ಸಂಪಂಗಿ ರಾಮಶೆಟ್ಟಿ, ಎಂ. ಉಮೇಶ್, ಬಿ. ಶ್ರೀಕಾಂತ್, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ಸಂಜೆ 4ಕ್ಕೆ.
- **ಎಸ್‌ಪಿವಿಜಿಎಂಸಿ ಟ್ರಸ್ಟ್:** 63ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ವಿದ್ವಾನ್ ಕಿರಾಸೂರು ರಾಜಪ್ಪ ಮತ್ತು ತಂಡದವರಿಂದ ರಂಗಗೀತೆಗಳು, ಸಂಜೆ 6.45 ರಿಂದ ವಿದುಷಿ ಅಕ್ಕರೈ ಶುಭಲಕ್ಷ್ಮಿ, ಅಕ್ಕರೈ ಸ್ವರ್ಣಲತಾ ಅವರಿಂದ ದ್ವಂದ್ವ ವಯೋಲಿನ್ ವಾದನ, ವಿದ್ವಾನ್ ಸುಮೇಶ್ ನಾರಾಯಣನ್ –ಮೃದಂಗ, ವಿದ್ವಾನ್ ಸುಂದರ್‌ಕುಮಾರ್–ಖಂಜಿರಾ, ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಟ್ರಸ್ಟ್, ವಿವಿ ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಸತ್ಯನಾರಾಯಣ ಮಲ್ಲಿಪಟ್ನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ–ಡಾ. ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು ಪ್ರಸ್ತುತಿ : ಉಮೇಶ್ ಎಸ್.ಎಸ್., 8.30 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್, 8.40 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 9.05 ಮಕ್ಕಳ ಕ್ಯಾನ್ಸರ್ ಜಾಗೃತಿ ಕುರಿತು ಪ್ರಾಯೋಜಿತ ಕಾರ್ಯಕ್ರಮ ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.10 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕಮಲಾ. ಜಿ.ಎಸ್ ಮತ್ತು ರಾಜಲಕ್ಷ್ಮಿ. ಜಿ. ಎಸ್–ಯುಗಳ ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ; 12.05 ವನಿತಾ ವಿಹಾರ 'ಸ್ತ್ರೀಚೇತನ' ಪರ್ವತಾರೋಹಿ ಜಮ್ಮದ ಪ್ರೀತ್ ಅಪ್ಪಯ್ಯ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಸಹನ, 12.30 ದೇವರನಾಮ, 12.45 Talk in Kannada: ಆಲೂರು ದೊಡ್ಡನಿಂಗಪ್ಪ ಅವರಿಂದ ಭಾಷಣ, ವಿಷಯ : ಅನುಭವ ಮತ್ತು ಸಾಹಿತ್ಯ, 1.00 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ: ಸದಾನಂದ. ಆರ್, 1.20 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೆ.ಸತ್ಯನಾರಾಯಣ–ಕೀಬೋರ್ಡ್ ವಾದನ, 4.00 ಕಥಾ ಕಾಲಕ್ಷೇಪ–ಮಯೂರ ಧ್ವಜ, ಪ್ರಸ್ತುತಿ –ವಿದ್ವಾನ್. ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ, ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಹಿಪ್ಪುನೇರಳೆ ರೋಗಗಳ ಸಮಗ್ರ ನಿರ್ವಹಣೆ. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಜಿ.ಎಸ್. ಅರುಣ್ ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 ಕ್ರೀಡಾಲೋಕ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ.ಎಸ್. ಶೀಲಾ– ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ. ವಾಚನ: ಹೆಚ್.ಎಲ್.ಶ್ರೀಕಂಠ, ವ್ಯಾಖ್ಯಾನ: ಹೆಚ್. ಎಸ್. ಗೋಪಾಲ್, ಪ್ರಸ್ತುತಿ: ಡಾ. ಎ. ಎಸ್. ಶಂಕರನಾರಾಯಣ.

ಮೈಸೂರು ಮಿತ್ರ



ದಸರಾಗೆ ಸಿದ್ಧತೆ: ಅರಮನೆ ಪಾರ್ಕ್ ವಿದ್ಯುತ್ ದೀಪಗಳ ದುರಸ್ತಿ

ಸದ್ಯದಲ್ಲೇ ಕಂಗೊಳಿಸಲಿದೆ ಗುಲಾಬಿ ತೋಟ


ಅರಮನೆ ಆವರಣದಲ್ಲಿನ ಗುಲಾಬಿ ಗಿಡದ ಪಾರ್ಕ್‌ನಲ್ಲಿ ಬೆಳೆಸಿರುವ ಗುಲಾಬಿ ಗಿಡಗಳಿಗೆ ನೀರುಣಿಸುತ್ತಿರುವುದು.


ಅರಮನೆ ಆವರಣದ ಪಾರ್ಕ್‌ಗಳಲ್ಲಿರುವ ಅಲಂಕಾರಿಕ ವಿದ್ಯುತ್ ದೀಪಗಳ ದುರಸ್ತಿ ಕಾರ್ಯ


ಅರಮನೆಯ ಜಯಮಾರ್ತಾಂಡ ದ್ವಾರದ ಸಮೀಪದ ಗೋಡೆಗಳಿಗೆ ಬಣ್ಣ ಬಳಿಯುತ್ತಿರುವುದು.

ಮೈಸೂರು, ಸೆ.16(ಎಂಟಿವೈ)– ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿ ಸಿದ್ಧತಾ ಕಾರ್ಯ ಭರದಿಂದ ಸಾಗಿದ್ದು, ಅರಮನೆ ಮುಂಭಾಗದ ಪಾರ್ಕ್‌ನಲ್ಲಿರುವ ಅಲಂಕಾರಿಕ ವಿದ್ಯುತ್ ದೀಪಗಳ ದುರಸ್ತಿ ಕಾರ್ಯ ಬಿರುಸಾಗಿ ಸಾಗುತ್ತಿದೆ.

ನವರಾತ್ರಿ ಆರಂಭಕ್ಕೆ 16 ದಿನ ಬಾಕಿಯಿದ್ದು, ಅರಮನೆಯಲ್ಲಿ ದಸರಾ ಮಹೋತ್ಸವದ ಅಂಗವಾಗಿ ನಡೆಯುವ ಧಾರ್ಮಿಕ ಕಾರ್ಯಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಈಗಾಗಲೇ ಅರಮನೆ ಕಾಂಪೌಂಡ್ ಗೋಡೆಗೆ ಬಣ್ಣ ಬಳಿಯುವ ಕಾರ್ಯ ಅಂತಿಮ ಹಂತಕ್ಕೆ ತಲುಪಿದ್ದು, ಅರಮನೆ ಒಳಾಂಗಣದಲ್ಲಿ ರಾಜವಂಶಸ್ಥರ ಧಾರ್ಮಿಕ ಕಾರ್ಯ ನಡೆಯುವ ದರ್ಬಾರ್ ಹಾಲ್ ಸೇರಿದಂತೆ ವಿವಿಧೆಡೆ ಅಲಂಕಾರಿಕ ತೂಗುದೀಪಗಳ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ.

ನವರಾತ್ರಿ ವೇಳೆ ಅರಮನೆಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಹಾಗೂ ಅರಮನೆ ಮುಂದೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವುದರಿಂದ ಅರಮನೆ ಆವರಣ ಕಿಕ್ಕಿರಿದು ತುಂಬಿರುತ್ತದೆ. ಈ ಹಿನ್ನೆಲೆಯಲ್ಲಿ ಅರಮನೆ ಆವರಣದ ಉದ್ಯಾನವನಗಳಲ್ಲೂ ದಸರಾ ಸಿದ್ಧತೆ ಜೋರಾಗಿ ಸಾಗುತ್ತಿದ್ದು, ಉದ್ಯಾನವನದ ವಿವಿಧೆಡೆಯಿರುವ ಅಲಂಕಾರಿಕ ವಿದ್ಯುತ್ ದೀಪದ ಕಂಬಗಳಿಗೆ ಸಿಲ್ವರ್ ಬಣ್ಣ ಹೊಡೆಯಲಾಗುತ್ತಿದೆ. ಅಲಂಕಾರಿಕ ವಿದ್ಯುತ್ ದೀಪಗಳಿಗೆ ಬಲ್ಬ್ ಬದಲಿಸುವುದು, ಹಾನಿಯಾಗಿದ್ದ ಡೂಮ್ ಬದಲಿಸುವ ಕಾರ್ಯ ನಡೆಯುತ್ತಿದೆ.

ಗುಲಾಬಿ ತೋಟ: ವರಹಸ್ವಾಮಿ ದೇವಾಲಯದ ಮುಂಭಾಗದ ಪಾರ್ಕ್‌ನಲ್ಲಿ ಬೆಳೆಸಿರುವ ಗುಲಾಬಿ ಗಿಡ ಹೂವು ಬಿಡುವ ಹಂತ ತಲುಪಿದ್ದು, ಮುಂದಿನ 15 ದಿನದೊಳಗೆ ಎಲ್ಲಾ ಗಿಡಗಳು ಹೂವಿನಿಂದ ಕಂಗೊಳಿಸಲಿವೆ. ಈ ಹಿನ್ನೆಲೆಯಲ್ಲಿ ಗಿಡಗಳಿಗೆ ನೀರುಣಿಸಿ, ಆರೈಕೆ ಮಾಡಲಾಗುತ್ತಿದೆ. ಅಲ್ಲದೆ, ಪಾರ್ಕ್‌ನಲ್ಲಿ ಬೆಳೆದಿರುವ ಕಳೆಗಿಡ ತೆರವು ಕಾರ್ಯ ನಡೆಸಲಾಗುತ್ತಿದೆ.

ಸ್ವಾಗತ ಫಲಕ: ಅರಮನೆಯ ಬಲರಾಮ ದ್ವಾರದ ಬಳಿ ತೋಟಗಾರಿಕಾ ಇಲಾಖಾ ಕಚೇರಿ ಹಿಂಭಾಗ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಇರುವ ಇಳಿಜಾರಿನ ವಿನ್ಯಾಸದಲ್ಲಿ 'ದಸರಾ ಮಹೋತ್ಸವ–2024' ಎಂದು ಗಿಡಗಳಿಂದಲೇ ಸ್ವಾಗತ ಫಲಕ ರಚಿಸಲಾಗುತ್ತಿದ್ದು, ಎರಡು ದಿನದ ಹಿಂದಷ್ಟೇ ಅಕ್ಷರದ ಮಾದರಿಯಲ್ಲಿ ಗಿಡ ನೆಡಲಾಗಿದೆ. ವಾರದೊಳಗೆ ಅಕ್ಷರ ರೂಪ ಬರಲಿದ್ದು, ನವರಾತ್ರಿ ಆರಂಭದ ವೇಳೆಗೆ ಗಿಡಗಳಿಂದಲೇ ಸ್ವಾಗತ ಕೋರುವ ಫಲಕ ಅರಮನೆ ಪ್ರವೇಶಿಸುವವರನ್ನು ಬರಮಾಡಿಕೊಳ್ಳಲಿದೆ.

ದಸರಾಗೆ ದಿನಗಣನೆ ಆರಂಭವಾದರೂ ಅಂದಗೊಳ್ಳದ ಅರಮನೆ ನಗರಿ

●ಮಾಜಿ ಮೇಯರ್ ಶಿವಕುಮಾರ್ ಬೇಸರ ●ರಸ್ತೆ, ವೃತ್ತಗಳಲ್ಲಿ ಕಸದ ರಾಶಿ; ರಾರಾಜಿಸಿರುವ ಗುಂಡಿಗಳು



ಮೈಸೂರು, ಸೆ.16(ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಸಮೀಪಿಸುತ್ತಿದ್ದರೂ ಎಚ್ಚೆತ್ತುಕೊಳ್ಳದ ನಗರಪಾಲಿಕೆ ಅಧಿಕಾರಿಗಳು, ವಿಶ್ವ ಮನ್ನಣೆ ಪಡೆದ ಮೈಸೂರಿನ ಪಾರಂಪರಿಕ ಇತಿಹಾಸಕ್ಕೆ ಧಕ್ಕೆ ತರುವ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂದು ಮಾಜಿ ಮೇಯರ್ ಶಿವಕುಮಾರ್ ತೀವ್ರ ಬೇಸರ ವ್ಯಕ್ತಪಡಿಸಿದರು.

ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮೈಸೂರು ದಸರಾ ವೀಕ್ಷಣೆಗೆ ದೇಶ–ವಿದೇಶಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಪಾರಂಪರಿಕ ನಗರಿ, ಅರಮನೆ ನಗರಿ, ಸ್ವಚ್ಛ ನಗರಿ, ಯೋಗ ನಗರಿ ಎಂಬಿತ್ಯಾದಿ ಬಿರುದುಗಳನ್ನು ಪಡೆದಿರುವ ಮೈಸೂರಿನಲ್ಲಿ ಎಲ್ಲೆಂದರಲ್ಲಿ ಕಸ ಬಿದ್ದಿದ್ದು, ಅನೈರ್ಮಲ್ಯತೆ ತಾಂಡವವಾಡುತ್ತಿದೆ. ಇಷ್ಟೊತ್ತಿಗೆ ಮೈಸೂರಲ್ಲಿ ಹಬ್ಬದ ವಾತಾವರಣ ಮಡುಗಟ್ಟಬೇಕಿತ್ತು. ವೃತ್ತಗಳು, ಉದ್ಯಾನವನಗಳ ಸೌಂದರ್ಯೀಕರಣ ಆಗಬೇಕಿತ್ತು. ಆದರೆ ಇನ್ನೂ ಯಾವುದೇ ಅಭಿವೃದ್ಧಿ ಕೆಲಸಗಳಾಗಿಲ್ಲ. ರಸ್ತೆ ಗುಂಡಿ ಮುಚ್ಚುವುದು ಪೂರ್ಣವಾಗಿಲ್ಲ. ಸ್ವಚ್ಛತೆ ಎಂಬುದಂತೂ ಮರೀಚಿಕೆಯಾಗಿದೆ. ಪ್ರಶ್ನಿಸಲು ಜನಪ್ರತಿನಿಧಿಗಳಿಲ್ಲವೆಂಬ ಕಾರಣಕ್ಕೆ ಅಧಿಕಾರಿಗಳು ಮನಸೋ ಇಚ್ಛೆ ನಡೆದುಕೊಳ್ಳುತ್ತಿದ್ದಾರೆ. ಸಾರ್ವಜನಿಕರ ಯಾವುದೇ ಸಮಸ್ಯೆಗೂ ಸ್ಪಂದಿಸುತ್ತಿಲ್ಲ. ಮೈಸೂರಿನ ಪರಂಪರೆಗೆ ಧಕ್ಕೆ ಬರುವಂತೆ ನಡೆದುಕೊಳ್ಳುತ್ತಾರೆ ಎಂದು ಕಿಡಿಕಾರಿದರು.

ದಸರಾ ಉದ್ಘಾಟನೆಗೆ ಇನ್ನೇನು ಕೆಲ ದಿನಗಳಷ್ಟೇ ಬಾಕಿ ಇದ್ದು, ಪಾಲಿಕೆ ಅಧಿಕಾರಿಗಳು ಕೂಡಲೇ ಎಚ್ಚೆತ್ತು ಕಾರ್ಯಪ್ರವೃತ್ತರಾಗದಿದ್ದರೆ ಪ್ರವಾಸಿಗರ ಮುಂದೆ ಮರ್ಯಾದೆ ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಬಾಕಿ ಉಳಿದ ಅಭಿವೃದ್ಧಿ ಕಾಮಗಾರಿಗಳು ತ್ವರಿತವಾಗಿ ಪೂರ್ಣಗೊಳಿಸಿ, ಮೈಸೂರನ್ನು ದಸರಾ ಮಹೋತ್ಸವಕ್ಕೆ ಸಜ್ಜುಗೊಳಿಸಿ ಎಂದು ತಾಕೀತು ಮಾಡಿದರು.

ಅ.3ರಿಂದ 6ರವರೆಗೆ ರಾಜ್ಯಮಟ್ಟದ ದಸರಾ ಕ್ರೀಡಾಕೂಟ

ಸೆ.30ರೊಳಗೆ ಸ್ಪರ್ಧಿಗಳು ಅರ್ಜಿ ಸಲ್ಲಿಸಲು ಅವಕಾಶ

ಮೈಸೂರು, ಸೆ.16(ಎಸ್‌ಪಿಎನ್)– 2024–25ನೇ ಸಾಲಿನ ದಸರಾ ಕ್ರೀಡಾಕೂಟದ ಸ್ಪರ್ಧೆಗಳನ್ನು ಪುರುಷ ಮತ್ತು ಮಹಿಳೆಯರಿಗಾಗಿ ತಾಲೂಕು, ಜಿಲ್ಲಾ, ವಿಭಾಗೀಯ ಹಾಗೂ ರಾಜ್ಯದ ಮಟ್ಟದಲ್ಲಿ ಸರ್ಕಾರದ ನಿರ್ದೇಶನದ ಮೇರೆಗೆ ಆಯೋಜಿಸಲು ನಿರ್ಧರಿಸಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ರಾಜ್ಯಮಟ್ಟದ ಸ್ಪರ್ಧೆಗಳನ್ನು ಮೈಸೂರಲ್ಲಿ ಅ.3ರಿಂದ ಅ.6ರವರೆಗೆ ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗುವುದು. ಅಲ್ಲದೆ, ತಾಲೂಕು ಮಟ್ಟದಲ್ಲಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಿ ಜಿಲ್ಲಾಮಟ್ಟದ ಸ್ಪರ್ಧೆಗಳಿಗೆ ದಿನಾಂಕಗಳನ್ನು ನಿಗದಿಪಡಿಸಿದ್ದಾರೆ.

ಜಿಲ್ಲಾ ಮಟ್ಟದ ದಸರಾ ಕ್ರೀಡಾ ಸ್ಪರ್ಧೆಗಳನ್ನು ಸೆ.20ರೊಳಗೆ, ವಿಭಾಗದ ಮಟ್ಟದ ದಸರಾ ಕ್ರೀಡಾ ಸ್ಪರ್ಧೆಗಳನ್ನು ಸೆ.28ರೊಳಗೆ, ವಿಭಾಗಮಟ್ಟದ ದಸರಾ ಕ್ರೀಡಾಕೂಟವನ್ನು ಬೆಂಗಳೂರು ನಗರ ವಿಭಾಗ, ಬೆಂಗಳೂರು ಗ್ರಾಮಾಂತರ, ಕಲಬುರಗಿ ವಿಭಾಗ, ಮೈಸೂರು ವಿಭಾಗ ಹಾಗೂ ಬೆಳಗಾವಿ ವಿಭಾಗ ಎಂಬುದಾಗಿ 5 ವಿಭಾಗಗಳಾಗಿ ವಿಂಗಡಿಸಿ ಕ್ರೀಡಾ ಪಟುಗಳಿಗೆ ಸೆ.30ರೊಳಗಾಗಿ ಸಹಾಯಕ ನಿರ್ದೇಶಕರು, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಹಾಗೂ ಆಯುಕ್ತರು, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಂಗಳೂರು ಇಲ್ಲಿಗೆ ಅರ್ಜಿಗಳನ್ನು ಕಳುಹಿಸಬೇಕು ಎಂದು ಕ್ರೀಡಾಪಟುಗಳಲ್ಲಿ ಮನವಿ ಮಾಡಿದ್ದಾರೆ.

ಸಿಎಂ ಕಪ್ ಕ್ರೀಡಾಕೂಟ: ತಾಲೂಕು ಮತ್ತು ವಿಭಾಗ ಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟದ ಸ್ಪರ್ಧೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸಲು ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಓ ಅವರ ಮಾರ್ಗದರ್ಶನದಂತೆ ದಸರಾ ಕ್ರೀಡಾ ಸಮಿತಿ ಮೂಲಕ ಆಯೋಜಿಸಬೇಕು. 2024–25ನೇ ಸಾಲಿನ ಸಿಎಂ ಕಪ್ ಕ್ರೀಡಾಕೂಟದ ಆಯೋಜನೆಗೆ ಬಿಡುಗಡೆಯಾದ ಅನುದಾನ ಕಡಿಮೆಯಿದ್ದು, ಈ ಅನುದಾನವನ್ನು ಕ್ರೀಡಾಪಟುಗಳ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ಯೋಜನೆಯಡಿ ಭರಿಸತಕ್ಕದ್ದು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅಥ್ಲೆಟಿಕ್ ಸ್ಪರ್ಧೆಗಳು(ಪುರುಷರು ಮತ್ತು ಮಹಿಳೆಯರು): 100 ಮೀ, 200 ಮೀ, 400 ಮೀ, 1500 ಮೀ, 5000 ಮೀ ಓಟ(ಮಹಿಳೆಯರಿಗೆ 3000 ಮೀ ಓಟ), ಉದ್ದ ಮತ್ತು ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 100 ಮೀ ಹರ್ಡಲ್ಸ್, 4X100 ಮೀ ರಿಲೇ, 4X400 ಮೀ ರಿಲೇ ಆಯೋಜಿಸಬೇಕು.

ಈಜು ಸ್ಪರ್ಧೆಗಳು (ಪುರುಷರು ಮತ್ತು ಮಹಿಳೆಯರಿಗೆ): ಈಜು ಸ್ಪರ್ಧೆಗಳಲ್ಲಿ 1). 100, 200, 400 ಮೀ–ಫ್ರೀ ಸ್ಟೈಲ್ 2) 100,200, ಬ್ಯಾಕ್ ಸ್ಟ್ರೋಕ್, 3)100,200 ಮೀ–ಬ್ರೆಸ್ಟ್, 4)100 ಮೀ–ಬಟರ್‌ಫ್ಲೈ, 5)200 ಮೀ–ಇಂಡಿವಿಜುಯಲ್ ಮಿಡ್ಲೆ, 6) 4X100 ಮೀ–ಸ್ಟೈಲ್ ರಿಲೇ ಪುರುಷ ಮತ್ತು ಮಹಿಳೆಯರಿಗೆ ಆಯೋಜಿಸುವುದು.

ಸಾಂಪ್ರದಾಯಿಕ ಯೋಗಾಸನ ಸ್ಪರ್ಧೆ: ತಾಲೂಕು ಮಟ್ಟದಲ್ಲಿ ವೀರಭದ್ರಾಸನ, ಜಾನು ಶಿರಶಾಸನ, ಹಲಾಸನ, ಧನುರಾಸನ, ಜಿಲ್ಲಾಮಟ್ಟದಲ್ಲಿ ಪಾದ ಹಲಾಸನ, ಆಕರ್ಣ ಧನುರಾಸನ, ಊರ್ಧ್ವಧನುರಾಸನ, ಅರ್ಧಮತ್ಸೇಂದ್ರಿಯ ಆಸನ, ವಿಭಾಗ ಮಟ್ಟದಲ್ಲಿ ಕಾರ್ಮಾಸನ, ಬಕಾಸನ, ರಾಜಕಪೋಸನ, ನಟರಾಸನ, ರಾಜ್ಯಮಟ್ಟದಲ್ಲಿ ಊರ್ಧ್ವಮುಖ ಪಶ್ಚಿಮೋತ್ತಾನಾಸನ, ಟಿಟ್ಟಿಭಾಸನ, ಶಲಭವೃಶ್ಚಿಕಾಸನ, ಪೂರ್ಣಮತ್ಸೇಂದ್ರಿಯಾನ ಆಸನಗಳನ್ನು, ನೋಂದಾಯಿಸಿಕೊಂಡ ಯೋಗಪಟುಗಳು ಕ್ರೀಡಾ ಇಲಾಖೆ ಸೂಚಿಸಿರುವ ಈ ನಾಲ್ಕು ಆಸನಗಳ ಕಡ್ಡಾಯವಾಗಿ ಪ್ರದರ್ಶಿಸಬೇಕು.

ಕಲಾತ್ಮಕ ಯೋಗಾಸನ (ವೈಯುಕ್ತಿ)ವನ್ನು ಆರ್ಟಿಸ್ಟಿಕ್ ಯೋಗಾಸನ ಸಿಂಗಲ್ ಸ್ಪರ್ಧೆ ವಿಭಾಗದಲ್ಲಿ ಸಮಯ 150 ಸೆಕೆಂಡ್‌ಗಳಿಂದ 180 ಸೆಕೆಂಡ್‌ಗಳ ಒಳಗಾಗಿ ಪ್ರದರ್ಶಿಸಬೇಕು. ಯೋಗಾಸನಕ್ಕೆ ಕ್ರೀಡಾ ಇಲಾಖೆ ನಿಗದಿಪಡಿಸುವ ನಿಯಮಗಳನ್ನು ಸ್ಪರ್ಧಿಗಳು ತಪ್ಪದೇ ಪಾಲಿಸಬೇಕು.


ತಾಲೂಕು ಮಟ್ಟದ ಕ್ರೀಡೆಗಳ ವಿವರ: ಅಥ್ಲೆಟಿಕ್ಸ್, ವಾಲಿಬಾಲ್, ಫುಟ್‌ಬಾಲ್, ಖೋ–ಖೋ, ಕಬಡ್ಡಿ, ಥ್ರೋಬಾಲ್, ಯೋಗ ಸ್ಪರ್ಧೆಗಳನ್ನು ಆಯೋಜಿಸುವುದು.

ಜಿಲ್ಲಾ ಮತ್ತು ವಿಭಾಗಮಟ್ಟದಲ್ಲಿ ಅಥ್ಲೆಟಿಕ್ಸ್, ವಾಲಿಬಾಲ್, ಫುಟ್‌ಬಾಲ್, ಖೋ–ಖೋ, ಕಬಡ್ಡಿ, ಥ್ರೋಬಾಲ್, ಬ್ಯಾಸ್ಕೆಟ್ ಬಾಲ್, ಕುಸ್ತಿ, ಬ್ಯಾಡ್ಮಿಂಟನ್, ಹಾಕಿ, ಹ್ಯಾಂಡ್ ಬಾಲ್, ಈಜು, ಟೇಬಲ್ ಟೆನ್ನಿಸ್, ನೆಟ್‌ಬಾಲ್, ಟೆನ್ನಿಸ್, ಬಾಲ್ ಬ್ಯಾಡ್ಮಿಂಟನ್, ಯೋಗ ಸ್ಪರ್ಧೆಗಳನ್ನು ಆಯೋಜಿಸಬೇಕು ಹಾಗೂ **ವಿಭಾಗ ಮಟ್ಟದ ಕ್ರೀಡೆಗಳಲ್ಲಿ** ಆರ್ಚರಿ (ಬಿಲ್ಲುಗಾರಿಕೆ), ಭಾರ ಎತ್ತುವಿಕೆ, ವುಶು, ಜಿಮ್ನಾಸ್ಟಿಕ್ಸ್, ಫೆನ್ಸಿಂಗ್, ಜೂಡೋ, ಬಾಕ್ಸಿಂಗ್, ಟೆಕ್ವಾಂಡೋ ಆಯೋಜಿಸಬೇಕು.

ರಾಜ್ಯಮಟ್ಟದ ಕ್ರೀಡೆಗಳು: ಅಥ್ಲೆಟಿಕ್ಸ್, ವಾಲಿಬಾಲ್, ಫುಟ್‌ಬಾಲ್, ಖೋ–ಖೋ, ಕಬಡ್ಡಿ, ಥ್ರೋಬಾಲ್, ಬ್ಯಾಸ್ಕೆಟ್ ಬಾಲ್, ಕುಸ್ತಿ, ಬ್ಯಾಡ್ಮಿಂಟನ್, ಹಾಕಿ, ಹ್ಯಾಂಡ್ ಬಾಲ್, ಜೂಡೋ, ಈಜು, ಟೇಬಲ್ ಟೆನ್ನಿಸ್, ಜಿಮ್ನಾಸ್ಟಿಕ್, ವುಶು, ಟೆಕ್ವಾಂಡೋ, ಆರ್ಚರಿ, ಭಾರ ಎತ್ತುವುದು, ನೆಟ್ ಬಾಲ್, ಟೆನ್ನಿಸ್, ಫೆನ್ಸಿಂಗ್(ಕತ್ತಿವರಸೆ), ಬಾಲ್ ಬ್ಯಾಡ್ಮಿಂಟನ್, ಶೂಟಿಂಗ್ ಸ್ಪರ್ಧೆಗಳನ್ನು ಆಯೋಜಿಸುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ದಸರಾ ಬರುತ್ತಿದ್ದಂತೆ ಗರಡಿಗಳಲ್ಲಿ ಸಡಗರ

ಕುಸ್ತಿ ಅಭ್ಯಾಸಕ್ಕೂ ಮುನ್ನ ಶ್ರೀ ಅಂಬಾ ತಾಯಿಗೆ ಪೂಜೆ, ಶಕ್ತಿ ದೇವರುಗಳ ಆರಾಧನೆ





ಕೆ.ಜಿ.ಕೊಪ್ಪಲಿನ ಬೋರಯ್ಯ ಬಸವಯ್ಯ ಮೊಟ್ಟೆ ಗರಡಿ ಹಾಗೂ ಉಸ್ತಾದ್ ಲಿಂಗೇಗೌಡರ(ಬೇವಿನ ಗರಡಿ) ಗರಡಿಯಲ್ಲಿ ಶ್ರೀ ಅಂಬಾ ತಾಯಿ ಪೂಜೆ ನೆರವೇರಿಸಿರುವುದು.

ಮೋಹನ್ ಕಾಯಕ

ಮೈಸೂರು, ಸೆ.16– ಶ್ರೀ ಅಂಬಾ (ಚಾಮುಂಡೇಶ್ವರಿ) ತಾಯಿಗೆ ಜಯವಾಗಲಿ... ಜೈ ಶ್ರೀರಾಮ್... ಜೈ ಆಂಜನೇಯ... ಎಂಬಿತ್ಯಾದಿ ಜಯಘೋಷಗಳಿಂದ ಧೈರ್ಯ–ಸ್ಥೈರ್ಯ, ಸಾಹಸದ ಪ್ರೇರಣಾ ಶಕ್ತಿ ಕೇಂದ್ರವಾಗಿ ರೂಪುಗೊಂಡಿರುವ ಗರಡಿ ಮನೆಗಳು ಪೈಲ್ವಾನರ ಕಟ್ಟುನಿಟ್ಟಿನ ಕುಸ್ತಿ ಅಭ್ಯಾಸಕ್ಕೆ ಅಣಿಯಾಗಿವೆ...!

ಹೌದು! ವಿಶ್ವ ವಿಖ್ಯಾತ ಮೈಸೂರು ದಸರಾ ಸಮೀಪಿಸುತ್ತಿದೆ ಎಂದರೆ ಗರಡಿ ಮನೆಗಳಲ್ಲಿ ನವೋಲ್ಲಾಸ ಚಿಗುರೊಡೆಯುತ್ತದೆ. ಸುಪ್ರಸಿದ್ಧ ನಾಡಕುಸ್ತಿ ಪಂದ್ಯಾವಳಿಯಲ್ಲಿ ತೊಡೆ ತಟ್ಟುವ, ಚಿತ್‌ಗೆ ಪ್ರತಿ ಚಿತ್ ಹಾಕಿ ಎದುರಾಳಿಗೆ ಮಣ್ಣು ಮುಕ್ಕಿಸುವ ಜಟ್ಟಿಗಳು, ಮಾತೃ ದೇವೋಭವ... ಆಚಾರ್ಯ(ಗುರು) ದೇವೋಭವ... ಎನ್ನುತ್ತಾ ಆಶೀರ್ವದಿಸುವ, ಆತ್ಮಸ್ಥೈರ್ಯ ತುಂಬುವ ಶಕ್ತಿಗಳಿಗೆ ಶರಣಾಗಿ ನಮಿಸುವ, ಪೂಜಿಸುವ ಪ್ರತೀತಿ ಸದ್ಯ ಮೈಸೂರಿನ ಗರಡಿ ಮನೆಗಳಲ್ಲಿ ಶ್ರದ್ಧಾ–ಭಕ್ತಿಯಿಂದ ನೆರವೇರುತ್ತಿದೆ.

ದಸರಾ ಕುಸ್ತಿ ಪಂದ್ಯಾವಳಿಗೂ ಮುನ್ನ ಗರಡಿ ಮನೆಗಳಲ್ಲಿ ಅರಿಸಿನ ಮತ್ತು ಕುಂಕುಮದಿಂದ ಅಲಂಕೃತ ಮಟ್ಟಿ(ಕೆಮ್ಮಣ್ಣು)ಗೆ ಪೂಜೆ ಸಲ್ಲಿಸಿ, ಕುಸ್ತಿ ಅಭ್ಯಾಸದಲ್ಲಿ ತಲ್ಲೀನರಾಗುವ ಪೈಲ್ವಾನರಲ್ಲಿ ಹೊಸ ಚೈತನ್ಯ, ಉತ್ಸಾಹ, ಗೆಲ್ಲುವ ಹಂಬಲ ತುಂಬುವ ನಿಟ್ಟಿನಲ್ಲಿ ಹಿಂದಿನಿಂದಲೂ ನಡೆಸಿಕೊಂಡು ಬಂದಿರುವ ಶ್ರೀ ಅಂಬಾ(ಚಾಮುಂಡೇಶ್ವರಿ) ತಾಯಿ, ಶ್ರೀರಾಮ ಮತ್ತು ಆಂಜನೇಯ ಇತ್ಯಾದಿ ಶಕ್ತಿ ದೇವತೆಗಳ ಸಾಂಪ್ರದಾಯಿಕ ಪೂಜೆ ಮತ್ತು ಆರಾಧನೆ ನಡೆಯುತ್ತಿದೆ.

ಮಟ್ಟಿಯನ್ನು ಕದಲಿಸುವುದರೊಂದಿಗೆ (ಮಟ್ಟಿಯೊಡೆಯುವುದು) ಅಭ್ಯಾಸಕ್ಕೆ ಸಿದ್ಧರಾಗುವಲ್ಲಿ ಉತ್ಸುಕರಾಗಿರುವ ಕುಸ್ತಿ ಪೈಲ್ವಾನರು ಸದ್ಯ ಆರಾಧನೆಯಲ್ಲಿದ್ದಾರೆ. ತಂದೆ–ತಾಯಿ, ಗುರು–ಹಿರಿಯರು, ಹಿರಿಯ ಪೈಲ್ವಾನರು, ಗರಡಿ ಮನೆಗಳ ಯಜಮಾನರು, ಉಸ್ತಾದರು, ಖಲೀಫರ ಆಶೀರ್ವಾದದೊಂದಿಗೆ ನಾಡ ಕುಸ್ತಿಯಲ್ಲಿ ಧೂಳೆಬ್ಬಿಸಲು ಸಜ್ಜಾಗುತ್ತಿದ್ದಾರೆ.


ಸಾಂಪ್ರದಾಯಿಕ ಪೂಜಾ ಕೈಂಕರ್ಯ: ಹಿಂದಿನಿಂದಲೂ ವರ್ಷಕ್ಕೊಮ್ಮೆ ವರಮಹಾಲಕ್ಷ್ಮಿ ಹಬ್ಬದ ದಿನ ಊರಿನ ಹೊರ ಭಾಗದಿಂದ ಗರಡಿ ಮನೆಗಳಿಗೆ ಮೂರು ಮಂಕರಿ (ಬಿದಿರಿನ ಬುಟ್ಟಿ)ಯಲ್ಲಿ ಮಟ್ಟಿ(ಕೆಮ್ಮಣ್ಣು)ಯನ್ನು ಅಲಂಕರಿಸಿ, ಶಾಸ್ತ್ರೋಕ್ತವಾಗಿ ಮಂಗಳವಾದ್ಯದೊಂದಿಗೆ ಮೆರವಣಿಗೆ ಮೂಲಕ ಗರಡಿ ಮನೆಗೆ ಕುಸ್ತಿ ಪಟುಗಳು ತೆಗೆದುಕೊಂಡು ಬರುತ್ತಾರೆ. ಆಯಾ ಗರಡಿಗಳ ಯಜಮಾನರು, ಉಸ್ತಾದರು, ಖಲೀಫರು ಹಾಗೂ ಹಿರಿಯ ಪೈಲ್ವಾನರುಗಳ ಸಮ್ಮುಖದಲ್ಲಿ ಗರಡಿಯ ಅಖಾಡದಲ್ಲಿನ ಮಟ್ಟಿ(ಹಳೆ ಮಣ್ಣು)ಯ ಮೇಲೆ ಇಟ್ಟು ಪೂಜೆ ಮಾಡಲಾಗುತ್ತದೆ. ಇದೆಲ್ಲವೂ ಸಾಂಪ್ರದಾಯಿಕ ಪೂಜಾ ಕೈಂಕರ್ಯವಾಗಿದೆ ಎಂದು ಹಿರಿಯ ಕುಸ್ತಿ ಪೈಲ್ವಾನ್, ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಅಧ್ಯಕ್ಷ ಎಸ್.ಮಹದೇವು ತಿಳಿಸಿದರು.

ವರಮಹಾಲಕ್ಷ್ಮಿ ಹಬ್ಬದಲ್ಲಿ ಮಟ್ಟಿ ತರಲು ಅನಾನುಕೂಲವಾದರೆ, ಜನಿವಾರ (ಉಪಕರ್ಮ) ದಿನ ಮಟ್ಟಿ ತರುವ ಸಂಪ್ರದಾಯ ಇದೆ. ನಂತರ ನವರಾತ್ರಿಗೂ ಮುಂಚಿತವಾಗಿ ಮೂರು ಮಂಕರಿಯಲ್ಲಿ ತಂದಂತಹ ಮಟ್ಟಿಯನ್ನು, ಗರಡಿಯ ಪ್ರಮುಖರುಗಳ ಉಪಸ್ಥಿತಿಯಲ್ಲಿ ಗರಡಿಯಲ್ಲಿರುವ ಮಟ್ಟಿಗೆ ಧರಿಸುತ್ತಾರೆ (ಬೆರೆಸುತ್ತಾರೆ). ಈ ಸಂದರ್ಭದಲ್ಲಿ 1 ತೆಂಗಿನ ಕಾಯಿ ಹಾಗೂ 1 ನಿಂಬೆ ಹಣ್ಣನ್ನು ಮಟ್ಟಿಯೊಳಗೆ ಹೂಳಲಾಗುತ್ತದೆ. ಬಳಿಕ ಒಂದು ಶುಭದಿನ ಶ್ರೀ ಅಂಬಾ (ಪಿರಮಿಡ್ ರೀತಿಯಲ್ಲಿ ಅಲಂಕೃತಗೊಂಡ ಮಟ್ಟಿ) ಪೂಜೆಯನ್ನು ಏರ್ಪಡಿಸಿ ವಿರೋಧಿ ಗರಡಿಯವರೆಗೂ ಹಾಗೂ ಸ್ಥಳೀಯ ನಿವಾಸಿಗಳಿಗೆ ಆಹ್ವಾನವನ್ನು ನೀಡಿ ಪೂಜೆಯನ್ನು ನೆರವೇರಿಸಿ, ಸಿಹಿ ಹಂಚಲಾಗುತ್ತದೆ ಎಂದರು.

ಮಾತೆಯರ ಆಶೀರ್ವಾದ: ಶ್ರೀ ಅಂಬಾ ಪೂಜೆಯ ಮಾರನೆಯ ದಿನ ಮಾತೆ (ಮುತ್ತೈದೆ)ಯರನ್ನು ಗರಡಿ ಮನೆಗೆ ಆಹ್ವಾನಿಸಿ, ಮಟ್ಟಿಗೆ ಪೂಜೆ ಮಾಡಿ ಉಪಸ್ಥಿತಿಯಲ್ಲಿರುವ ಎಲ್ಲಾ ಮಾತೆಯರ ಪಾದ ಮುಟ್ಟಿ ಪೈಲ್ವಾನರು ಆಶೀರ್ವಾದ ಪಡೆಯುತ್ತಾರೆ. ಈ ವೇಳೆಯೂ ಶಕ್ತಿ ದೇವರುಗಳ ಜೈಕಾರ ಮೊಳಗಿಸಿ ಪ್ರೇರಣೆ ಪಡೆಯಲಾಗುತ್ತದೆ ಎಂದು ತಿಳಿಸಿದರು.

ವಿಶೇಷ ಬಹುಮಾನ: ಶ್ರೀ ಅಂಬಾ ಪೂಜೆ ನೆರವೇರಿದ ಐದು ದಿನಕ್ಕೆ ಗರಡಿಯ ಯಜಮಾನರು, ಉಸ್ತಾದರು, ಖಲೀಫರು ಹಾಗೂ ಹಿರಿಯ ಪೈಲ್ವಾನರ ಸಮ್ಮುಖದಲ್ಲಿ ಗರಡಿಯಲ್ಲೇ ವರಸೆ ತೋರಿಸಲು ಪೈಲ್ವಾನರ ಸಮ ಜೋಡಿಗಳನ್ನು ಗುರ್ತಿಸಿ ಸ್ಪರ್ಧೆಗೆ ಬಿಡಲಾಗುತ್ತದೆ. ಇದಕ್ಕೂ ಮುನ್ನ ಪೈಲ್ವಾನರು ಅವರ ಹಸ್ತದಿಂದ ಯಾವುದೇ ಆಯುಧ(ಗುದ್ದಲಿ)ಗಳನ್ನು ಬಳಸದೆ ಏರಾಕಿರುವ(ಪಿರಮಿಡ್ ಆಕಾರದಲ್ಲಿದ್ದ) ಮಟ್ಟಿಯನ್ನು ಕದಲಿಸುತ್ತಾರೆ(ಮಟ್ಟಿ ಹೊಡೆಯುವುದು). ಈ ವೇಳೆ ಪೂಜೆಗೂ ಮುನ್ನವೇ ಮಟ್ಟಿಯೊಳಗೆ ಹೂತಿದ್ದ ತೆಂಗಿನಕಾಯಿ ಮತ್ತು ನಿಂಬೆಹಣ್ಣು ಹೊರ ತೆಗೆಯುವ ಪೈಲ್ವಾನರಿಗೆ ವಿಶೇಷ ಬಹುಮಾನವನ್ನು ನೀಡಲಾಗುತ್ತದೆ ನಂತರ ಸ್ಪರ್ಧೆಗಳು ಏರ್ಪಟ್ಟು ನಾಡಕುಸ್ತಿ ಪಂದ್ಯಾವಳಿಗೆ ಸೂಕ್ತ ಪೈಲ್ವಾನರನ್ನು ಕಳುಹಿಸುವ ಪ್ರತೀತಿ ನಡೆದುಕೊಂಡು ಬಂದಿದೆ ಎಂದು ವಿವರಿಸಿದರು.

ಪೈಲ್ವಾನರಲ್ಲಿ ಉತ್ಸಾಹ, ಶಕ್ತಿ ತುಂಬುವ ಸದುದ್ದೇಶ...



ಗರಡಿ ಮನೆಗಳಲ್ಲಿ ಶ್ರೀ ಅಂಬಾ ತಾಯಿ ಪೂಜೆ ನೆರವೇರಿಸುವುದೇ ಪೈಲ್ವಾನರಲ್ಲಿ ಉತ್ಸಾಹ ಮತ್ತು ಶಕ್ತಿ ತುಂಬಲು. ಪೂಜೆ ನಂತರ ಕುಸ್ತಿ ಪಂದ್ಯಾವಳಿ ಮುಗಿಯುವವರೆಗೂ ಪೈಲ್ವಾನರು ಕಟ್ಟುನಿಟ್ಟಿನ ಅಭ್ಯಾಸ ನಡೆಸಬೇಕು. ನಿರಂತರ ವ್ಯಾಯಾಮ ಅತೀ ಮುಖ್ಯ. ಗುರು–ಹಿರಿಯರಿಗೆ ಗೌರವ ಕೊಡುವ ಭಾವನೆ ಪೈಲ್ವಾನರಲ್ಲಿ ಬರಲೆಂದೇ ಗರಡಿ ಮನೆಯ ಮುಖ್ಯದ್ವಾರ ಚಿಕ್ಕದಾಗಿರುತ್ತದೆ. ಹಾಗೆಯೇ ಹೊರಗಿನ ತಣ್ಣನೆ ಗಾಳಿಯಿಂದ ಪೈಲ್ವಾನರಿಗೆ ಅನಾರೋಗ್ಯ ಉಂಟಾಗಬಾರದೆಂದು ಕಿಟಕಿಗಳು ಸಹ ಚಿಕ್ಕದಾಗಿರುತ್ತವೆ. ಪೈಲ್ವಾನರಿಗೆ ಬೆನ್ನು ತಟ್ಟುವಾಗಲೂ ಅವರಿಗೆ ರೋಷ ಬರಲೆಂದೇ ಜೋರಾಗಿ ಬಡಿಯುವುದಾಗಿದೆ. ನಿಂಬೆಹಣ್ಣು ಕಚ್ಚಿ ಅಥವಾ ಕಾಲಿನಲ್ಲಿ ತುಳಿದು ಎರಡು ಭಾಗ ಮಾಡಿ ಅಖಾಡಕ್ಕೆ ಇಳಿಯುವ ಪೈಲ್ವಾನರು ಗೆಲುವು ಸಾಧಿಸಲೆಂದೇ ಆಯಾ ಗರಡಿ ಮನೆಯ ಯಜಮಾನರು, ಉಸ್ತಾದರು, ಖಲೀಫರ ಉದ್ದೇಶವಾಗಿದೆ.

- ಪೈಎಸ್.ಮಹದೇವು, ಹಿರಿಯ ಕುಸ್ತಿ ಪೈಲ್ವಾನ್ ಹಾಗೂ ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಅಧ್ಯಕ್ಷರು

ಕೆ.ಜಿ.ಕೊಪ್ಪಲಿನ ಆರು ಗರಡಿ ಮನೆಗಳಲ್ಲಿ ಶ್ರದ್ಧಾಭಕ್ತಿಯಿಂದ ಶ್ರೀ ಅಂಬಾ ತಾಯಿ ಪೂಜೆ...

ಮೈಸೂರಿನಲ್ಲಿ ಕುಸ್ತಿ ಪೈಲ್ವಾನರಿಂದಲೇ ಖ್ಯಾತಿ ಪಡೆದಿರುವ ಕೆ.ಜಿ.ಕೊಪ್ಪಲಿನಲ್ಲಿರುವ ಆರು ಗರಡಿ ಮನೆಗಳಲ್ಲಿಯೂ ಈ ವರ್ಷ ಶ್ರದ್ಧಾಭಕ್ತಿಯಿಂದ ಶ್ರೀ ಅಂಬಾ ತಾಯಿ ಪೂಜೆ ನೆರವೇರಿಸಲಾಗಿದೆ. ಬೋರಯ್ಯ ಬಸವಯ್ಯ ಮೊಟ್ಟೆ ಗರಡಿ, ಉಸ್ತಾದ್ ಲಿಂಗೇಗೌಡರ(ಬೇವಿನ ಗರಡಿ) ಗರಡಿ, 2ನೇ ಕ್ರಾಸ್ 10 ಹತ್ತು ಜನಗಳ ಗರಡಿ, ಪೈಲ್ವಾನ್ ಬಸಮ್ಮ ಗರಡಿ, ಪೈಲ್ವಾನ್ ಹುಚ್ಚಯ್ಯ ಗರಡಿ ಹಾಗೂ ಜಯನಗರದ ಪೈಲ್ವಾನ್ ಬಸಮ್ಮ ಚಿಕ್ಕ ಗರಡಿಯಲ್ಲಿ ಶ್ರೀ ಬಂದಂತಮ್ಮ ಕಾಳಮ್ಮ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಅದ್ಧೂರಿಯಾಗಿ ಸಾಂಪ್ರದಾಯಿಕ ಪೂಜಾ ಕೈಂಕರ್ಯ ನೆರವೇರಿಸಲಾಗಿದೆ.

- ಪೈದೇವರಾಜು, ಕೆ.ಜಿ.ಕೊಪ್ಪಲು

ಮೈಸೂರಲ್ಲಿ ದಸರಾ ದೀಪಾಲಂಕಾರ ಆಕರ್ಷಣೆ ಆರಂಭ...


ದಸರಾ ಉತ್ಸವಕ್ಕೆ ದಿನ ಗಣನೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಸಯ್ಯಾಜಿರಾವ್ ರಸ್ತೆ, ಜೆಎಲ್‌ಬಿ ರಸ್ತೆ ಸೇರಿದಂತೆ ಹಲವು ರಸ್ತೆಗಳಲ್ಲಿ ದೀಪಾಲಂಕಾರ ಮಾಡಲಾಗುತ್ತಿದ್ದು, ಕೆಲವೆಡೆ ವಿದ್ಯುತ್ ದೀಪಗಳನ್ನು ಪ್ರಾಯೋಗಿಕವಾಗಿ ಬೆಳಗಿಸಿ, ಪರಿಶೀಲಿಸಲಾಗುತ್ತಿದೆ.



ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ನಿಜವಾದ ಕನ್ನಡಿಗರು ಎಂದರೆ ಯಾರು?
ವಿದ್ಯಾರ್ಥಿ : ಯಾರು ಇಂಗ್ಲಿಷ್‌ನಲ್ಲಿ ಫೇಲ್ ಆಗ್ತಾರೋ ಅವರೇ ನಿಜವಾದ ಕನ್ನಡಿಗರು ಮೇಷ್ಟ್ರೇ...!

ಮೈಸೂರು ಮಿತ್ರ

ಮಂಗಳವಾರ, 17 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನೀವು ಏನು ಮಾಡುತ್ತಿದ್ದೀರಿ ಮತ್ತು ಅದು ನಿಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತದೆ ಎಂದು ನಿಮಗೆ ತಿಳಿದಿದ್ದರೆ ಜೀವನವು ಆಸಕ್ತಿದಾಯಕವಾಗಿರುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಗ್ಗಟ್ಟಿಲ್ಲದ ಊರಲ್ಲಿ ಒಪ್ಪತ್ತೂ ಇರಬೇಡ.

ನಿಮ್ಮ ಪತ್ರಗಳು

■ ಇಂತಹವರನ್ನು ಜನಪ್ರತಿನಿಧಿಗಳು ಎಂದು ಕರೆಯಬೇಕೇ?

ಮಾನ್ಯರೆ,

ಬೆಂಗಳೂರು ರಾಜರಾಜೇಶ್ವರಿ ನಗರದ ಬಿಜೆಪಿ ಶಾಸಕ ಮುನಿರತ್ನ ಅವರು ಗುತ್ತಿಗೆದಾರರೊಬ್ಬರ ಮೇಲೆ ಬಳಸಿದ್ದಾರೆಂದು ಹೇಳಲಾಗಿರುವ ಭಾಷೆ ಅತ್ಯಂತ ಹೊಲಸಾಗಿದ್ದು, ಅಶ್ಲೀಲವಲ್ಲದೇ ಕೀಳು ಅಭಿರುಚಿಯಿಂದ ಕೂಡಿದೆ. ಮುನಿರತ್ನ ಸೇರಿದಂತೆ ಹಲವಾರು ಜನಪ್ರತಿನಿಧಿಗಳು ಆಗಿಂದಾಗ್ಗೆ ಈ ರೀತಿಯ ಭಾಷಾ ಪ್ರಯೋಗ ಮಾಡಿ ತಮ್ಮ ಭಾಷಾ ಪಾಂಡಿತ್ಯವನ್ನು ಒರೆಗೆ ಹಚ್ಚುತ್ತಿರುವುದನ್ನು ಜನ ಗಮನಿಸದೇ ಇಲ್ಲ. ಇವರ ಜೊತೆ ದೊಡ್ಡ ಸೆಲೆಬ್ರಿಟಿಗಳೆನಿಸಿಕೊಂಡವರೂ ಅತ್ಯಂತ ಕೆಟ್ಟ ರೀತಿಯಲ್ಲಿ ಮಾತನಾಡಿ, ತಮ್ಮ ಮಾನ ಮರ್ಯಾದೆಗಳನ್ನು ತಾವೇ ಹರಾಜಿಗೆ ಹಾಕಿಕೊಳ್ಳುತ್ತಿದ್ದಾರೆ. ಇನ್ನು ಶಾಸನ ಸಭೆಗಳಲ್ಲಿ ಸಹ ಈ ಜನಪ್ರತಿನಿಧಿಗಳು ಮರ್ಯಾದೆಯಿಂದ ನಡೆದುಕೊಳ್ಳದೇ ಕೀಳು ಅಭಿರುಚಿಯ ಭಾಷಾ ಪ್ರಯೋಗದಲ್ಲಿ ತೊಡಗಿಕೊಳ್ಳುತ್ತಾರೆ. ಜನಪ್ರತಿನಿಧಿಗಳು ಎಂದು ಹೇಳಿಕೊಳ್ಳಲು ಅವರಿಗೆ ನಾಚಿಕೆ ಇಲ್ಲದಿರಬಹುದು. ಆದರೆ ಇಂತಹವರನ್ನು ಜನ ಪ್ರತಿನಿಧಿಗಳು ಎಂದು ಕರೆಯಲು ನಮಗೆ ನಾಚಿಕೆಯಾಗುತ್ತದೆ ಅಲ್ಲವೇ?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ದಸರಾದಲ್ಲಿ ಚುಟುಕು ಕವಿಗೋಷ್ಠಿ ಏರ್ಪಡಿಸಿ

ಮಾನ್ಯರೇ

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಜನಪ್ರಿಯ ಕಾರ್ಯಕ್ರಮಗಳಲ್ಲಿ ಕವಿಗೋಷ್ಠಿ ಒಂದು. ಈ ಹಿಂದೆಲ್ಲಾ ಚಿಗುರು ಕವಿಗೋಷ್ಠಿ, ದಸರಾ ಕವಿಗೋಷ್ಠಿ, ಅರಳು ಕವಿಗೋಷ್ಠಿ, ಚುಟುಕು ಕವಿಗೋಷ್ಠಿ, ಹಾಸ್ಯಮೇಳ ಇರುತ್ತಿದ್ದವು. ಇವುಗಳಲ್ಲಿ ಚುಟುಕು ಕವಿಗೋಷ್ಠಿ ಆಕರ್ಷಣೆಯ ಗೋಷ್ಠಿಯಾಗಿತ್ತು. ಇತ್ತೀಚೆಗೆ ಈ ಕವಿಗೋಷ್ಠಿಯನ್ನು ರದ್ದು ಮಾಡಲಾಗಿದೆ. ಇದರಿಂದ ಚುಟುಕು ಪ್ರಿಯರಿಗೆ ನಿರಾಸೆಯಾಗಿದೆ. ಈ ಕವಿಗೋಷ್ಠಿ ಏರ್ಪಡಿಸುವುದರಿಂದ ದಸರೆಗೂ ಕಳೆ ಬರಲಿದೆ. ಚುಟುಕು ಹೆಸರಿಗೆ ತಕ್ಕಂತೆ ಚುಟುಕಾಗಿದ್ದರೂ ಅದರ ಮಹತ್ವ ಬಹಳ ದೊಡ್ಡದು. ಚುಟುಕು ಕೇಳುಗರಿಗೆ ಖುಷಿ ಕೊಡುವ ಜತೆಗೆ ಕೇಳುಗರನ್ನು ಚಿಂತೆಗೆ ಒಳಪಡಿಸುತ್ತದೆ. ಇಂತಹ ಚುಟುಕು ಕವಿಗೋಷ್ಠಿಯನ್ನು ರದ್ದು ಮಾಡಿರುವುದು ಚುಟುಕು ಸಾಹಿತಿಗಳಿಗೆ ಮತ್ತು ಚುಟುಕು ಪ್ರಿಯರಿಗೆ ಬಹಳ ನಿರಾಸೆಯಾಗಿದೆ. ಚುಟುಕು ಸಾಹಿತ್ಯದಲ್ಲಿ ಬದುಕಿನ ಲಾಲಿತ್ಯವಿದೆ. ಆದ್ದರಿಂದ ದಯವಿಟ್ಟು ಕವಿಗೋಷ್ಠಿ ಸಮಿತಿಯವರು ಈ ದಸರಾ ಮಹೋತ್ಸವದಲ್ಲಿ ಚುಟುಕು ಕವಿಗೋಷ್ಠಿಯನ್ನು ಏರ್ಪಡಿಸಲಿ.

– ಅಹಲ್ಯ ಸಿ.ನಾ.ಚಂದ್ರ, ಜನತಾನಗರ, ಮೈಸೂರು

■ ಮಳೆ ನೀರು ಮೋರಿಗೆ ಗಲೀಜು ನೀರು ಸೇರ್ಪಡೆ; ದುರ್ವಾಸನೆ

ಮಾನ್ಯರೇ,

ಮೈಸೂರಿನ ಹೂಟಗಳ್ಳಿ ಹೌಸಿಂಗ್ ಬೋರ್ಡ್‌ನ ಕೃಷ್ಣ ಬೇಕರಿ ಬಳಿ ಎನ್‌ಹೆಚ್‌ಬಿ ಬಡಾವಣೆಯಲ್ಲಿ ಮಳೆ ನೀರು ಮೋರಿಯಲ್ಲಿ ಹರಿಯುತ್ತಿದ್ದು, ಇದಕ್ಕೆ ಸಮೀಪದ ಬೆಳವಾಡಿ ಅಂಚಿನ ಬಡಾವಣೆಯಿಂದ ಗಲೀಜು ನೀರು ಸೇರ್ಪಡೆಯಾಗುತ್ತಿದೆ. ಹಾಗಾಗಿ ಭಾರಿ ದುರ್ವಾಸನೆ. ಅಕ್ಕಪಕ್ಕದ ಮನೆಗಳವರು ಬಾಗಿಲು ತೆರೆಯಲು ಸಾಧ್ಯವಾಗುತ್ತಿಲ್ಲ. ಈಗಾಗಲೇ ನಗರದಲ್ಲಿ ಡೆಂಗ್ಯೂ ಸಮಸ್ಯೆ ಉಲ್ಬಣಗೊಂಡಿದ್ದು, ಸ್ಥಳೀಯ ನಗರಸಭೆ ಅಧಿಕಾರಿಗಳು ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ಜನಪ್ರತಿನಿಧಿಗಳು ಈ ಬಗ್ಗೆ ಗಮನ ಹರಿಸಬೇಕು. –ಎಲ್.ಜೆ.ಅಶೋಕ್, ಹೂಟಗಳ್ಳಿ, ಮೈಸೂರು.

■ ಚಾಮುಂಡಿಬೆಟ್ಟದಲ್ಲಿ ಮಂಗಗಳ ಹಾವಳಿ

ಮಾನ್ಯರೆ,

ಮೈಸೂರಿನ ಪ್ರೇಕ್ಷಣೀಯ ಹಾಗೂ ಧಾರ್ಮಿಕ ಸ್ಥಳವಾದ ಚಾಮುಂಡಿ ಬೆಟ್ಟದಲ್ಲಿ ಮಂಗಗಳ ಹಾವಳಿಯಿಂದಾಗಿ ಭಕ್ತಾದಿಗಳಿಗೆ ದೇವರ ಮೇಲಿನ ಭಕ್ತಿಗಿಂತ ಮಂಗಗಳ ಭಯವೇ ಹೆಚ್ಚಾಗಿ ಕಾಡುತ್ತಿದೆ. ಭಕ್ತಾದಿಗಳು ತಾಯಿ ಚಾಮುಂಡೇಶ್ವರಿ ಪೂಜೆಗಾಗಿ ಹಣ್ಣು, ಕಾಯಿ ಹಿಡಿದು ಸರತಿ ಸಾಲಿನಲ್ಲಿ ನಿಂತಿದ್ದಾಗ ಅಲ್ಲಿಗೆ ಬರುವ ಮಂಗಗಳು ಅವುಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತವೆ. ಅಲ್ಲದೇ ಭಕ್ತಾದಿಗಳ ಮೇಲೆರಗಿ ಪರಚಿ ಗಾಯವುಂಟು ಮಾಡುತ್ತಿವೆ. ಇದರಿಂದಾಗಿ ಹಿರಿಯ ನಾಗರಿಕರು, ಮಕ್ಕಳು, ಮಹಿಳೆಯರು ಆತಂಕಕ್ಕೆ ಒಳಗಾಗಿದ್ದಾರೆ. ಕೆಲವೊಮ್ಮೆ ಭಕ್ತಾದಿಗಳ ಪರ್ಸ್‌ಗಳನ್ನು ಎಗರಿಸಿ ಫಜೀತಿಗೊಳಪಡಿಸುತ್ತಿವೆ. ಆದುದರಿಂದ ದೇವಸ್ಥಾನ ಆಡಳಿತ ಮಂಡಳಿಯವರು, ಅಧಿಕಾರ ವರ್ಗದವರು, ಧಾರ್ಮಿಕ ದತ್ತಿ ಇಲಾಖೆಯವರು ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಬೇಕಾಗಿ ಮನವಿ.

–ಉಷಾರಾಣಿ, ಸಹಾಯಕ ಪ್ರಾಧ್ಯಾಪಕಿ, ಪದವಿ ಕಾಲೇಜು, ಬಾಗಲಕೋಟೆ ಜಿಲ್ಲೆ.

■ ರಸ್ತೆ ಅಭಿವೃದ್ಧಿಗೆ ಮುಂದಾಗಿ

ಮಾನ್ಯರೆ,

ಕೊಳ್ಳೇಗಾಲ ತಾಲೂಕಿನ ಧನಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉಗನಿ ಗ್ರಾಮದ ರಸ್ತೆಗಳು ತೀರಾ ಹದಗೆಟ್ಟು ಹಳ್ಳ ಕೊಳ್ಳಗಳಿಂದ ಕೂಡಿವೆ. ಸಾರ್ವಜನಿಕರು ಅದರಲ್ಲೂ ವಿದ್ಯಾರ್ಥಿಗಳು, ಕೂಲಿ, ಕಾರ್ಮಿಕರು ಹೆಚ್ಚಾಗಿ ಈ ರಸ್ತೆಯನ್ನು ಬಳಸುತ್ತಾರೆ. ಆದರೆ ಗರ್ಭಿಣಿಯರು, ಅನಾರೋಗ್ಯ ಪೀಡಿತ ಜನರು ಹಾಗೂ ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ತೆರಳುವಾಗ ಗ್ರಾಮಸ್ಥರು ನರಕಯಾತನೆ ಅನುಭವಿಸುವಂತಾಗಿದೆ. ಇಲ್ಲಿನ ಗ್ರಾಮ ಪಂಚಾಯಿತಿಯವರು ಈ ಬಗ್ಗೆ ಪ್ರಶ್ನಿಸಿದರೆ ಶಾಸಕ, ಸಂಸದರ ಅನುದಾನಗಳು ಬಿಡುಗಡೆಯಾಗಿಲ್ಲ ಎಂಬ ಸಬೂಬು ನೀಡಲಾಗುತ್ತಿದೆ. ಗ್ರಾಪಂನ ಕೆಲ ಸದಸ್ಯರು, ಅಧಿಕಾರಿಗಳ ನಿರ್ಲಕ್ಷ್ಯತನದಿಂದಾಗಿ ರಸ್ತೆಗೆ ಅಭಿವೃದ್ಧಿ ಭಾಗ್ಯ ಇಲ್ಲದಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆ ಅಭಿವೃದ್ಧಿಗೆ ಮುಂದಾಗಬೇಕು.

–ಎಂ. ಮಾದೇಶ್, ಉಗನಿಯ, ಕೊಳ್ಳೇಗಾಲ

■ ಇಲ್ಲಿ ಸಂಚಾರ ಸಂಚಾರಿಗಳಿಗೆ ಸಂಚಕಾರ

ಮಾನ್ಯರೆ,

ಮೈಸೂರಿನ ಜಯಲಕ್ಷ್ಮಿಪುರಂನ ಪೋಲಾರ್ ಬೇರ್ ಐಸ್ ಕ್ರೀಂ ಪಾರ್ಲರ್ ಬಳಿ ಗ್ರಾಹಕರು ಕಂಡ ಕಂಡಲ್ಲಿ ವಾಹನ ನಿಲುಗಡೆ ಮಾಡುತ್ತಿರುವುದರಿಂದ ಇನ್ನಿತರೆ ವಾಹನ ಚಾಲಕರು ಸಮಸ್ಯೆ ಎದುರಿಸುವಂತಾಗಿದೆ. ಇಲ್ಲಿ ಮುಖ್ಯ ರಸ್ತೆಯಿಂದ ರಾಘವೇಂದ್ರ ಮಠದ ಕಡೆ ತಿರುವು ಇದ್ದು, ಅಲ್ಲೇ ವಾಹನ ನಿಲ್ಲಿಸಿ ಐಸ್ ಕ್ರೀಂ ಪಾರ್ಲರ್‌ಗೆ ಹೋಗುವುದರಿಂದ ಆ ತಿರುವಿನಲ್ಲಿ ಇತರೆ ವಾಹನ ಸಂಚಾರ ಕಷ್ಟದಾಯಕ. ಅಪಘಾತವಾಗುವ ಸಾಧ್ಯತೆಯೂ ಇದೆ. ಜೊತೆಗೆ ಅಲ್ಲಿಂದ ಬರುವ ಗ್ರಾಹಕರು ರಸ್ತೆಯಲ್ಲಿ ಅಡ್ಡಾಡಿಕೊಂಡು ರಸ್ತೆಯನ್ನೇ ಆವರಿಸಿಕೊಳ್ಳುವುದರಿಂದಲೂ ಇತರರು ಸಮಸ್ಯೆಗೀಡಾಗುವಂತಾಗಿದೆ. ಈ ಐಸ್ ಕ್ರೀಂ ಪಾರ್ಲರ್‌ನವರು ಒಬ್ಬ ಸೆಕ್ಯೂರಿಟಿ ಇರಿಸಿಕೊಂಡು ಗ್ರಾಹಕರ ವಾಹನಗಳ ನಿಯಂತ್ರಿಸುವ ವ್ಯವಸ್ಥೆ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳಲಿ.

– ರಮೇಶ್, ವಿಜಯನಗರ 2ನೇ ಹಂತ, ಮೈಸೂರು.

ಮೈಸೂರಲ್ಲೇ ಹುಟ್ಟಿ, ಮೈಸೂರಲ್ಲೇ ಮರೆಯಾದ ಮಹಾನ್ ನಟ ವಿಷ್ಣುವರ್ಧನ್



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167



ಸೆ.18, ಸಾಹಸಸಿಂಹ ನಟ ಡಾ.ವಿಷ್ಣುವರ್ಧನ್ ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

> “ ಚಿತ್ರರಂಗ ಪ್ರವೇಶಿಸಿದ್ದ ಕಾಲದಲ್ಲಿ ಕನ್ನಡ ಚಿತ್ರರಂಗದಲ್ಲಿ ಘಟಾನುಘಟಿ ನಟರುಗಳ ದಂಡೇ ಇತ್ತು. ಇವರೆಲ್ಲರ ನಡುವೆ ಪ್ರತ್ಯೇಕವಾಗಿ ಗುರುತಿಸಿಕೊಂಡು ಬೆಳೆಯುವುದು ಅಷ್ಟು ಸುಲಭವಾಗಿರಲಿಲ್ಲ. ಅಂತಹುದರಲ್ಲಿ ತಮ್ಮ ಪ್ರತಿಭೆ ಮಾತ್ರದಿಂದಲೇ ಚಿತ್ರರಸಿಕರನ್ನು ಸೂಜಿಗಲ್ಲಿನಂತೆ ಆಕರ್ಷಿಸಿ ಆರಂಭದಿಂದ ಅಂತ್ಯದವರೆಗೂ ಏಕಮುಖವಾಗಿ ಬೆಳ್ಳಿತೆರೆಯಲ್ಲಿ ಬೆಳೆದು ನಿಂತದ್ದು ಸಾಮಾನ್ಯ ಸಾಧನೆ ಏನೂ ಅಲ್ಲ.

ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಅವರು ಖ್ಯಾತಿಯ ತುತ್ತ ತುದಿಯಲ್ಲಿದ್ದ ಕಾಲವದು. ಆಗ ಪುಟ್ಟಣ್ಣನವರ ಮೇಲೆ ಒಂದು ಆಪಾದನೆಯಿತ್ತು. ಅದೇಂದರೆ ಅವರು ಬರೀ ನಾಯಕಿ ಪ್ರಧಾನ ಚಿತ್ರಗಳನ್ನು ನಿರ್ಮಿಸುತ್ತಾರೆಂಬುದು. ಪುಟ್ಟಣ್ಣನವರಿಗೆ ನಾಯಕ ಪ್ರಧಾನ ಚಿತ್ರಗಳು ಒಗ್ಗುವುದಿಲ್ಲ. ಅವರು ಹೀರೋಯಿನ್‌ಗಳನ್ನು ಮೆರೆಸು ತ್ತಾರೆಯೇ ವಿನಃ ಹೀರೋಗಳತ್ತ ಗಮನವಿಲ್ಲವೆಂಬ ಮಾತುಗಳು ಪುಟ್ಟಣ್ಣನವರ ಬೆನ್ನ ಹಿಂದೆ ವ್ಯಂಗ್ಯ ಮಾಡುತ್ತಿದ್ದವು. ಇದನ್ನು ಗಮನಿಸುತ್ತಲೇ ಬಂದಿದ್ದ ಪುಟ್ಟಣ್ಣ ಒಂದು ಸಲ ತುಸು ಸಿಟ್ಟಿನಿಂದಲೇ “ಈ ಸಲ ನಾನೊಂದು ಚಿತ್ರವನ್ನು ಮಾಡುತ್ತೇನೆ. 'ನಾಗರಹಾವು' ಎಂಬ ಈ ಚಿತ್ರದ ನಾಯಕನ ಪಾತ್ರವು ದಶಕಗಳ ಕಾಲ ಚಿತ್ರಪ್ರೇಮಿಗಳ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. ಆ ಪಾತ್ರವನ್ನು ಯಾರು ಮಾಡಿದರೂ ಆತ ಖಾಯಂ ಆಗಿ ಬೆಳ್ಳಿತೆರೆಯಲ್ಲಿ ನಿಲ್ಲುತ್ತಾನೆ” ಎಂದು ಗುಡುಗಿದ್ದರು. ಚಿತ್ರಬ್ರಹ್ಮನ ಮಾತು ಹುಸಿಯಾಗಲಿಲ್ಲ. 'ನಾಗರಹಾವು' ಚಿತ್ರದ ನಾಯಕನ ಪಾತ್ರ ನಿರ್ವಹಿಸಿದ ಅಂದಿನ ಸಂಪತ್‌ಕುಮಾರ್ ಎಂಬ ಸಾಮಾನ್ಯ ಹುಡುಗ ಆ ನಂತರ ಅಸಾಮಾನ್ಯ ಕಲಾವಿದನಾಗಿ ಬೆಳೆದು ಸುಮಾರು ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಕನ್ನಡ ಚಿತ್ರರಂಗವನ್ನು ಆಳಿದ್ದು ಈಗ ಇತಿ ಹಾಸ. ಆ ಹುಡುಗನೇ ಸಾಹಸಸಿಂಹ, ಅಭಿನವ ಭಾರ್ಗವ, ಮೈಸೂರು ರತ್ನ ಎಂಬೆಲ್ಲಾ ವಿಶೇಷಣಗಳನ್ನು ಅಭಿಮಾನಿಗಳಿಂದ ಪಡೆದು ಕನ್ನಡ ಚಿತ್ರಜಗತ್ತಿನಲ್ಲಿ ಶಾಶ್ವತಗೊಂಡು ಈಗ (ನಿಧನ ಡಿಸೆಂಬರ್ 30, 2009) ಅಮರರಾಗಿರುವ ಭಾವಪೂರ್ಣ ಕಲಾವಿದ ಡಾ.ವಿಷ್ಣುವರ್ಧನ್!

ಹೀಗೆ ಪುಟ್ಟಣ್ಣ ಸೃಷ್ಟಿಸಿದ ಅಪೂರ್ವ ಕಲಾ ರತ್ನವಾಗಿ 'ನಾಗರಹಾವು' ಮೂಲಕ ನಾಯಕನಟರಾಗಿ 1972ರಲ್ಲಿ ತಮ್ಮ ಚಿತ್ರಯಾತ್ರೆಯನ್ನು ಆರಂಭಿಸಿದ ವಿಷ್ಣುವರ್ಧನ್ ಅವರು ಮೊದಲ ಚಿತ್ರದಲ್ಲೇ ಮಹದದ್ಭುತ ಕಂಡವರು. ಒಂದು ರೀತಿ ನೂರು ಚಿತ್ರಗಳ ಯಶಸ್ಸನ್ನು ಒಂದೇ ಚಿತ್ರದಲ್ಲಿ ಕಂಡ ಅನುಭವ. 'ನಾಗರಹಾವು ಚಿತ್ರಕ್ಕೆ ದೇವರಾಜ ಅರಸು ಕೈಲಿ ಪ್ರಶಸ್ತಿ ಸ್ವೀಕರಿಸಿದೆ. ರಾಜ್‌ಕುಮಾರ್ ಜತೆ ಫಿಲಂಫೇರ್ ಪ್ರಶಸ್ತಿ ಬಂತು. ಶಿವಾಜಿ ಗಣೇಶನ್ ಜತೆ ಸಿನಿ ಎಕ್ಸ್‌ಪ್ರೆಸ್ ಪ್ರಶಸ್ತಿ ಸಿಕ್ಕಿದೆ. ನಾಗರಹಾವು ಚಿತ್ರಕ್ಕಿಂತ ಬೇರೆ ಸಿನಿಮಾ ಬೇಕೆ? ಆ ಚಿತ್ರ ನೀಡಿದ ಯಶಸ್ಸಿಗಿಂತ ಇನ್ನೇನು ಬೇಕು? ಏನೂ ಗೊತ್ತಿಲ್ಲದೇ ಇದ್ದಾಗ ಅಂತಹ ಚಿತ್ರ ಕೊಟ್ಟಿದ್ದೇನೆ. ಅದು ಬದುಕಿನಲ್ಲಿ ಕಂಡ ದೊಡ್ಡ ಯಶಸ್ಸು' ಎಂದು ಸ್ವತಃ ವಿಷ್ಣುವರ್ಧನ್ ಅವರೇ ಅವರು ಬದುಕಿರುವ ತನಕವೂ ಆಗಾಗ್ಗೆ ಹೇಳುತ್ತಿದ್ದುದುಂಟು.

ಅವತ್ತು ಏನೇನೂ ಅಲ್ಲದ ಮೈಸೂರಿನ ಹುಡುಗ ಹೀರೋ ಆಗಿ ನಟಿಸಿದ್ದ 'ನಾಗರಹಾವು' ಒಮ್ಮೆಗೇ ಎಂಟು ರಾಜ್ಯ ಪ್ರಶಸ್ತಿಗಳನ್ನು ಬಾಚಿಕೊಂಡಿತ್ತು. ಗಳಿಕೆಯಲ್ಲೂ ಅಷ್ಟೇ, ನಿರ್ಮಾಪಕನ ಬೊಕ್ಕಸಕ್ಕೆ ಹಣದ ಹೊಳೆಯನ್ನೇ ಹರಿಸಿತ್ತು. ಆ್ಯಂಗ್ರಿ ಯಂಗ್ ಮ್ಯಾನ್ ವಿಷ್ಣುವರ್ಧನ್ ದಿನಬೆಳಗಾಗುವುದರೊಳಗೆ ಏಕಮಾತ್ರ ಚಿತ್ರದಿಂದಲೇ ತಾರೆಯಾಗಿ ಬಿಟ್ಟಿದ್ದರು. ಪುಟ್ಟಣ್ಣನಂತಹ ಅಪ್ರತಿಮ ನಿರ್ದೇಶಕನ ಶಕ್ತಿ ಮತ್ತು ವಿಷ್ಣುವರ್ಧನ್ ಅವರ ಅಭಿನಯದ ತಾಕತ್ತು ಇಂಥ ಯಶಸ್ಸಿನ ಮೂಲಧಾತುವಾಗಿತ್ತು. ತಮ್ಮ ಪ್ರಥಮ ಹಂತದಲ್ಲೇ ಇಂಥ ಯಶಸ್ಸು ಕಂಡವರಲ್ಲಿ ಬಹುಶಃ ವಿಷ್ಣು ವರ್ಧನ್ ಅವರೇ ಮೊದಲಿಗರೆನ್ನಬಹುದು. ಅದೇ ಯಶಸ್ಸನ್ನು ತಮ್ಮ ಚಿತ್ರ ಬದುಕಿನ ಕೊನೆ ತನಕವೂ ಉಳಿಸಿಕೊಂಡು ಬಂದ ಹೆಗ್ಗಳಿಕೆಯ ವಿಷ್ಣು 200 ಚಿತ್ರಗಳಲ್ಲಿ ನಟಿಸಿ ತಮ್ಮ ಭಾವಪೂರ್ಣ ಅಭಿನಯದಿಂದ ಶ್ರೇಷ್ಠ ನಟರೆನಿಸಿದ್ದರು. ಅವರು ಚಿತ್ರರಂಗ ಪ್ರವೇಶಿಸಿದ್ದ ಕಾಲದಲ್ಲಿ ಕನ್ನಡ ಚಿತ್ರರಂಗದಲ್ಲಿ ಘಟಾನುಘಟಿ ನಟರುಗಳ ದಂಡೇ ಇತ್ತು. ಇವರೆಲ್ಲರ ನಡುವೆ ಪ್ರತ್ಯೇಕವಾಗಿ ಗುರುತಿಸಿಕೊಂಡು ಬೆಳೆಯುವುದು ಅಷ್ಟು ಸುಲಭವಾಗಿರಲಿಲ್ಲ. ಅಂತಹುದರಲ್ಲಿ ತಮ್ಮ ಪ್ರತಿಭೆ ಮಾತ್ರದಿಂದಲೇ ಚಿತ್ರರಸಿಕರನ್ನು ಸೂಜಿಗಲ್ಲಿನಂತೆ ಆಕರ್ಷಿಸಿ ಆರಂಭದಿಂದ ಅಂತ್ಯದವರೆಗೂ ಏಕಮುಖವಾಗಿ ಬೆಳ್ಳಿತೆರೆಯಲ್ಲಿ 'ಬಳ್ಳಾರಿ ನಾಗ' ವಿಷ್ಣು ಬದುಕಿದ್ದಾಗ ಬಿಡುಗಡೆಗೊಂಡ ಅವರ ಕೊನೆಯ ಚಿತ್ರವಾದರೆ, ಚಿತ್ರೀಕರಣ ಪೂರೈಸಿ ಬಿಡುಗಡೆಗೆ ಸಿದ್ಧವಾಗಿದ್ದ ಚಿತ್ರಗಳು 'ಸ್ಕೂಲ್ ಮಾಸ್ಟರ್' ಮತ್ತು ವಿಷ್ಣು ಅವರ ಮಹತ್ವಾಕಾಂಕ್ಷೆಯ ಚಿತ್ರ 'ಆಪ್ತರಕ್ಷಕ'. ವಿಷ್ಣುವರ್ಧನ್‌ರ 200 ನೇ ಚಿತ್ರವಾಗಿ 'ಆಪ್ತರಕ್ಷಕ' ಬಿಡುಗಡೆಗೊಂಡು ಎಲ್ಲಾ ರೀತಿಯಿಂದಲೂ ಕನ್ನಡ ಚಿತ್ರರಂಗದಲ್ಲೊಂದು ಹೊಸ ದಾಖಲೆ ಬರೆದದ್ದು ಈಗ ಇತಿಹಾಸ.

ಅಭಿನಯದ ವಿಷಯಕ್ಕೆ ಬಂದರೆ ವಿಷ್ಣುವಿಗೆ ವಿಷ್ಣುವೇ ಸಾಟಿ. ನಾಗರಹಾವಿನ ರಾಮಾಚಾರಿ, ಭೂತಯ್ಯನ ಮಗ ಅಯ್ಯುವಿನ ಗುಳ್ಳ, ಗಂಧದ ಗುಡಿಯ ಕುಮಾರ್, ಬಂಧನದ ಡಾಕ್ಟರ್ ಹರೀಶ್, ಮಾತಾಡ್ ಮಾತಾಡ್ ಮಲ್ಲಿಗೆಯ ಹೂವಯ್ಯ, ವೀರಪ್ಪನಾಯಕನ ನಾಯಕ, ಪೊಲೀಸ್ ಮತ್ತು ದಾದಾದ ಇನ್‌ಸ್ಪೆಕ್ಟರ್ ಧನುಷ್ ಇವರನ್ನು ಮರೆಯಲಾದೀತೆ? ಈ ಪಾತ್ರಗಳಿಗೆ ಜೀವತುಂಬಿದ ವಿಷ್ಣುವರ್ಧನ್ ಅವರ ಅಭಿನಯದ ಸುಗಂಧ ಸರ್ವಕಾಲಕ್ಕೂ ಸುವಾಸನೆ ಬೀರುವಂತಾದ್ದು, ಹಾಗೆಯೇ ಮುತ್ತಿನಹಾರದ ಸೈನಿಕ, ನಿಷ್ಕರ್ಷದ ಕಮಾಂಡರ್, ಕಳ್ಳಕುಳ್ಳದ ಕಳ್ಳ, ದಿಗ್ಗಜರುವಿನ ಕುಚುಕು ಗೆಳೆಯ, ಜಿಮ್ಮಿಗಲ್ಲಿನ ಕೈದಿ, ಹೊಂಬಿಸಿಲಿನ ವೈದ್ಯ, ಲಾಲಿಯ ಪ್ರೇಮಮಯಿ ತಂದೆ, ಸುಪ್ರಭಾತದ ಪೆಟ್ರೋಲ್ ಬಂಕ್ ಮಾಲೀಕ, ಸಾಹಸಸಿಂಹದ ಪೊಲೀಸ್ ಅಧಿಕಾರಿ, ಜಯಸಿಂಹದ ಅರಣ್ಯಾಧಿಕಾರಿ, ಕೋಟಿ ಗೊಬ್ಬದ ಅಂಡರ್‌ವರ್ಲ್ಡ್ ಡಾನ್, ಗುರು–ಶಿಷ್ಯರು ವಿನ ಮಹಾರಾಜ, ಮಣಿಕಂಠನ ಮಹಿಮೆಯ ಮೂಗ, ವಿಷ್ಣುಸೇನಾದ ಪ್ರೊಫೆಸರ್, ಹೃದಯ ಗೀತೆಯ ಅಮರಪ್ರೇಮಿ, ಕರ್ಣನ ತ್ಯಾಗಿ, ಮಲೆಯ ಮಾರುತದ ಸಂಗೀತ ವಿದ್ವಾಂಸ ಮುಂತಾದವರನ್ನು ಮರೆತವರುಂಟೆ? ಇಂಥ ಅಭೂತಪೂರ್ವ ಕ್ಯಾರೆಕ್ಟರ್‌ಗಳನ್ನು ಹೊತ್ತುಬಂದ ಒಂದೊಂದು ಚಿತ್ರವೂ ಪಾತ್ರ ವೈವಿಧ್ಯತೆಯಿಂದ ವಿಷ್ಣುವರ್ಧನ್ ಅವರ ಅದ್ಭುತ ಪ್ರತಿಭೆಯ ಮೈಲೇಜನ್ನು ಹೇಳುವ ಮೈಲಿಗಲ್ಲುಗಳಾಗಿ ನಿಂತಿವೆ. ಪಾತ್ರ ಯಾವುದಾದರೂ ಸರಿಯೇ ಅದರ ಒಳಹೊಕ್ಕಿ ನಟಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದ ವಿಷ್ಣುವರ್ಧನ್ ಈ ಕಾರಣಕ್ಕಾಗಿಯೇ ಎಲ್ಲಾ ವರ್ಗದ ಪ್ರೇಕ್ಷಕರಿಗೂ ಇಷ್ಟವಾಗಿದ್ದರು.

ರೀಮೇಕ್ ಚಿತ್ರಗಳಲ್ಲೂ ತಮ್ಮದೇ ಆದ ಹೊಸತನದ ವಿಶಿಷ್ಟ ಅಭಿನಯ ನೀಡುತ್ತಿದ್ದದ್ದು ವಿಷ್ಣುವರ್ಧನ್ ಅವರ ವಿಶೇಷ. ಜೀವನ ಚಕ್ರ, ಸೂರ್ಯವಂಶ, ಯಜಮಾನ, ಆಪ್ತಮಿತ್ರದಂಥ ಸೂಪರ್ ಹಿಟ್ ಚಿತ್ರಗಳೇ ಇದಕ್ಕೆ ಸಾಕ್ಷಿ. ಅದರಲ್ಲೂ ಯಜಮಾನ ಮತ್ತು ಆಪ್ತಮಿತ್ರ ಚಿತ್ರಗಳು ಹಲವು ಹತ್ತು ದಾಖಲೆಗಳನ್ನು ಕನ್ನಡ ಚಿತ್ರಚರಿತ್ರೆಯಲ್ಲಿ ಬರೆದಿಟ್ಟಿವೆ. ಮತ್ತೆ ಹಾಡಿತು ಕೋಗಿಲೆ, ಮನೆ ಮನೆ ಕಥೆ, ಕರುಣಾಮಯಿ, ಅವಳ ಹೆಜ್ಜೆ, ಸಿಂಹಜೋಡಿ, ಬಿಳಿಗಿರಿಯ ಬನದಲ್ಲಿ, ಒಂದೇ ಗುರಿ, ನಾಗರಹೊಳೆ, ಸಹೋದರರ ಸವಾಲ್, ಭಾಗ್ಯಜ್ಯೋತಿ, ಕಿಲಾಡಿಜೋಡಿ, ದೇವರಗುಡಿ, ಪ್ರೊಫೆಸರ್ ಹುಚ್ಚೂರಾಯ, ಇಂದಿನ ರಾಮಾಯಣ, ನೀ ಬರೆದ ಕಾದಂಬರಿ, ಖೈದಿ, ಜಮೀನ್ದಾರ್ರು, ದೇವ, ಸೂರಪ್ಪ, ಕರುಳಿನ ಕುಡಿ, ಆಸೆಯ ಬಲೆ, ಸಾಮ್ರಾಟ್, ಧಣಿ, ಪರ್ವ, ತುಂಬಿದ ಮನೆ, ಕದಂಬ, ಕರ್ನಾಟಕ ಸುಪುತ್ರ, ನಂಯಜಮಾನ್ರು ಮುಂತಾದ ಚಿತ್ರಗಳು ಇವರ ಅಭಿನಯಕ್ಕೆ ಹೆಚ್ಚು ಮೆರಗನ್ನಿತ್ತಿವೆ. ಸಾಟಿಯಿಲ್ಲದ ಸವ್ಯಸಾಚಿ ಕಲಾವಿದ ಇವರೆಂದು ಈಗಲೂ ಸಾರಿ ಹೇಳುತ್ತವೆ. ನಾಗರಹಾವು (1972–73), ಹೊಂಬಿಸಿಲು (1977–78), ಬಂಧನ (1984–85), ಸುಪ್ರಭಾತ (1988–89), ಲಯನ್ ಜಗಪತಿರಾವ್ (1990–91), ಲಾಲಿ (1997–98), ವೀರಪ್ಪ ನಾಯಕ (1998–99) ಚಿತ್ರಗಳು ವಿಷ್ಣುವರ್ಧನ್ ಅವರಿಗೆ ಏಳು ಬಾರಿ ಕರ್ನಾಟಕ ಸರ್ಕಾರದ ಶ್ರೇಷ್ಠ ನಟ ರಾಜ್ಯ ಪ್ರಶಸ್ತಿಯನ್ನು ತಂದುಕೊಟ್ಟಿವೆ. 'ಸುಪ್ರಭಾತ' ಚಿತ್ರದ ಅಭಿನಯಕ್ಕಾಗಿ 1989ನೇ ಸಾಲಿನ ಪ್ರತಿಷ್ಠಿತ ಆರೆನ್ನಾರ್ ಪ್ರಶಸ್ತಿ, ತರಂಗಿಣಿ–ಬರ್ಕ್‌ಲೀ ಪ್ರಶಸ್ತಿ, ಮದ್ರಾಸ್ ಚಿತ್ರ ರಸಿಕರ ಪ್ರಶಸ್ತಿ, ಕೇರಳೀಯರ ಕಲಾವೇದಿ ಪ್ರಶಸ್ತಿ, ಜೀವಮಾನದ ಸಾಧನೆಗಾಗಿ 1990 ರಲ್ಲಿ ರಾಜ್ಯ ಸರ್ಕಾರದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2004 ರಲ್ಲಿ ಫಿಲಂ ಫೇರ್ ಲೈಫ್‌ಟೈಂ ಅಚೀವ್‌ಮೆಂಟ್ ಅವಾರ್ಡ್, 2005ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಸೇರಿದಂತೆ ನೂರಾರು ಪ್ರಶಸ್ತಿ–ಪುರಸ್ಕಾರ, ಬಿರುದು–ಬಾವಲಿಗಳಿಗೆ ಭಾಜನರಾಗಿದ್ದ ಅವರು ಏಳು ಬಾರಿ ಫಿಲಂಫೇರ್ ಪ್ರಶಸ್ತಿ ಪಡೆದಿದ್ದರಲ್ಲದೆ, ಇವೆಲ್ಲಕ್ಕೂ ಹೊನ್ನಕಳಶವಿಟ್ಟಂತೆ ತಮ್ಮ ಬಣ್ಣದ ಬದುಕಿನ ಸಮಗ್ರ ಸಾಧನೆಗಾಗಿ ರಾಜ್ಯ ಸರ್ಕಾರದಿಂದ 2008ನೇ ಸಾಲಿನ ಪ್ರತಿಷ್ಠಿತ ಡಾ.ರಾಜ್‌ಕುಮಾರ್ ಪ್ರಶಸ್ತಿಗೆ ವಿಷ್ಣುವರ್ಧನ್ ಅವರು ಭಾಜನರಾಗಿ ಸಮಸ್ತ ಕಲಾವಿದರಿಗೆ, ಅಭಿಮಾನಿಗಳಿಗೆ ಹರ್ಷ ತಂದಿದ್ದರು. ನಿಜಕ್ಕೂ ಇದು ವಿಷ್ಣುವರ್ಧನ್ ಅವರ ಮಹತ್ಸಾಧನೆಗೆ ಸಂದ ಮಹಾ ಗೌರವವೇ ಸರಿ. ಹಾಗೆಯೇ ವಿಷ್ಣು ಅವರ ಮಹದದ್ಭುತ ಅಭಿನಯದಿಂದಲೇ ಅರಳಿದ 'ಮಾತಾಡ್ ಮಾತಾಡ್ ಮಲ್ಲಿಗೆ' ಸಹ ಇದೇ ಸಂದರ್ಭದಲ್ಲಿ ಮೂರನೇ ಅತ್ಯುತ್ತಮ ಶ್ರೇಷ್ಠ ಚಿತ್ರ ಪ್ರಶಸ್ತಿಯ ಕಿರೀಟ ತೊಟ್ಟಿತ್ತು. ಇದರ ಸಂಪೂರ್ಣ ಕ್ರೆಡಿಟ್ ಸಹ ವಿಷ್ಣುವರ್ಧನ್ ಅವರ ಅಮೋಘ ನಟನೆಗೇ ಸಲ್ಲಬೇಕು.


ಇಂಥ ಪ್ರತಿಭೆಯ ಗಣಿ ಡಾ.ವಿಷ್ಣುವರ್ಧನ್ ಜನಿಸಿದ್ದು 1950ರ ಸೆಪ್ಟೆಂಬರ್ 18ರಂದು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ. ತಂದೆ ಎಚ್.ಎಲ್. ನಾರಾಯಣರಾವ್ ಪತ್ರಕರ್ತರೂ ಮತ್ತು ಚಿತ್ರಸಾಹಿತಿಗಳೂ ಆಗಿದ್ದು ಆ ಕಾಲದಲ್ಲೇ ಮಂಗಳಸೂತ್ರ, ವರದಕ್ಷಿಣೆ ಮುಂತಾದ ಚಿತ್ರಗಳಿಗೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದರು. ತಾಯಿ ಕಾಮಾಕ್ಷಮ್ಮ ಆಕಾಶವಾಣಿ ಕಲಾವಿದೆಯಾಗಿದ್ದರು. ಕಲೆ, ಸಾಹಿತ್ಯ, ಸಂಗೀತದ ಹಿನ್ನೆಲೆಯ ಇಂಥ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದ್ದ ವಿಷ್ಣುವರ್ಧನ್ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಮೈಸೂರಿನ ಗೋಪಾಲಸ್ವಾಮಿ ಶಿಶುವಿಹಾರದಲ್ಲಿ ಆರಂಭಿಸಿ ಪಿಯುಸಿ ತನಕ ಮೈಸೂರಿನಲ್ಲೇ ಕಲಿತು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿ ಮುಗಿಸಿದ್ದರು. ಅಂದಿನ ಖ್ಯಾತ ಪತ್ರಕರ್ತ ವೈಎನ್ಕೆ ಅವರಿಂದಾಗಿ ಗಿರೀಶ್ ಕಾರ್ನಾಡ್–ಬಿ.ವಿ. ಕಾರಂತ್ ಜೋಡಿಯ 'ವಂಶವೃಕ್ಷ' ಚಿತ್ರದಲ್ಲಿ ಅಭಿನಯಿಸುವ ಯೋಗ ಕೂಡಿ ಬಂದಾಗ ಮನೆಯವರು ವಿರೋಧಿಸಿದ್ದರಾದರೂ ವಿಷ್ಣುವರ್ಧನ್ ಅವರ ಅಭಿಮಾನದ ಗುರುಗಳಾಗಿದ್ದ ಎಚ್. ನರಸಿಂಹಯ್ಯ ಅವರು ತಿಳಿಹೇಳಿ ಮನೆಯವರನ್ನು ಒಪ್ಪಿಸಿದ್ದರಿಂದ 'ವಂಶವೃಕ್ಷ'ದಲ್ಲಿ ಅವರು ನಟಿಸಿದ್ದರು. ಹಾಗೆ ನೋಡಿದರೆ ವಿಷ್ಣು ಬಾಲನಟರಾಗಿ 1955 ರಲ್ಲೇ ಶಿವಶರಣೆ ನಂಬಿಯಕ್ಕ, ಕೋಕಿಲವಾಣಿ, ಸತಿಸುಕನ್ಯ ಚಿತ್ರಗಳಲ್ಲಿ ಅಭಿನಯಿಸಿದ್ದರು. ಸಂಪತ್‌ಕುಮಾರ್ ಎಂದಿದ್ದ ಅವರ ಮೂಲ ಹೆಸರು 'ವಂಶವೃಕ್ಷ'ಕ್ಕಾಗಿ ಕುಮಾರ್ ಆಗಿ ಮೊಟಕಾಗಿತ್ತು. ನಂತರ 'ನಾಗರಹಾವು' ಚಿತ್ರಕ್ಕಾಗಿ ಪುಟ್ಟಣ್ಣನಿಂದ ಅವರು ವಿಷ್ಣುವರ್ಧನ್ ಆದದ್ದು ಈಗ ಇತಿಹಾಸ.

1973ರಲ್ಲಿ 'ಮನೆ ಬೆಳಗಿದ ಸೊಸೆ' ಚಿತ್ರದಲ್ಲಿ ತಮಗೆ ನಾಯಕಿಯಾಗಿ ಅಭಿನಯಿಸಿದ್ದ ಅಂದಿನ ತಾರೆ ಭಾರತಿಯವರನ್ನೇ ಪ್ರೀತಿಸಿ 1975ರ ಫೆಬ್ರವರಿ 27 ರಂದು ಮದುವೆಯಾದ ವಿಷ್ಣುವರ್ಧನ್ ಅವರು ತಮ್ಮ ತಾರಾಪತ್ನಿ ಭಾರತಿ ಜೊತೆ ದತ್ತು ಪುತ್ರಿ ಕೀರ್ತಿ, ಅಳಿಯ ಅನಿರುದ್ಧ್, ಮೊಮ್ಮಗ ಜೇಷ್ಠ, ಮೊಮ್ಮಗಳು ಶ್ಲೋಕ, ಮತ್ತೊಬ್ಬ ದತ್ತು ಪುತ್ರಿ ಚಂದನಾ ಅವರೊಡನೆ ಕೌಟುಂಬಿಕವಾಗಿ ಸುಖೀ ಪುರುಷರಾಗಿದ್ದರು. ವೃತ್ತಿ ಜೀವನದಲ್ಲೂ ಅಷ್ಟೇ ಸಿಹಿ–ಕಹಿಗಳೆರಡನ್ನೂ ಸಮಚಿತ್ತದಿಂದ ಸ್ವೀಕರಿಸಿ ಕಲಾದೇವಿಯ ಸೇವೆ ಮಾಡುತ್ತಲೇ ಆನಂದ ಕಾಣುತ್ತಿದ್ದ, ಸಂತನಂಥ ಮನಸ್ಸಿನ ಮಹಾನ್ ಕಲಾವಿದ ಡಾ. ವಿಷ್ಣುವರ್ಧನ್ ಅವರು ಇಂದು ಇಲ್ಲವಾಗಿದ್ದರೂ ತಮ್ಮ ಚಿತ್ರ ಬದುಕಿನ ಸಾಧನೆ–ಸಿದ್ಧಿಗಳ ಮೂಲಕ ಅವರು ಶಿಖರಪ್ರಾಯವಾಗಿ ಎಂದೆಂದಿಗೂ ಅಜರಾಮರರಾಗಿದ್ದಾರೆ.

ದ್ರಾವಿಡರ ಅಸ್ಮಿತೆ ಪೆರಿಯಾರ್



ಪೆರಿಯಾರ್



– ಭರತ್ ರಾಮಸ್ವಾಮಿ
ಲೇಖಕ ಹಾಗೂ ಪ್ರಕಾಶಕರು,

ಸಮಾಜದಲ್ಲಿ ಅಸಮಾನತೆ ತಾರಕ್ಕೇರಿದಾಗಲೆಲ್ಲಾ ಪ್ರಕೃತಿಯೇ ಒಂದೊಂದು ಹೋರಾಟದ ಧ್ವನಿಯನ್ನು ಸೃಷ್ಟಿಸುತ್ತಾ ಬಂದಿದೆ. ಹಾಗೆಯೇ 'ಪೆರಿಯಾರ್', 19ನೇ ಶತಮಾನದ ಕೊನೆ ಮತ್ತು 20ನೇ ಶತಮಾನದ ಆದಿ ಕಾಲಘಟ್ಟದಲ್ಲಿ ಶೋಷಿತರ ಪರ ಮೊಳಗಿದ ಈ ನೆಲದ ಧ್ವನಿ. ತಮಿಳಿನಲ್ಲಿ ಪೆರಿಯಾರ್ ಎಂದರೆ 'ದೊಡ್ಡವರು' ಅಥವಾ 'ಹಿರಿಯರು' ಎಂದರ್ಥ. ಇದು ಲಕ್ಷಾಂತರ ಅಭಿಮಾನಿಗಳು ಪ್ರೀತಿಯಿಂದ ಕರೆದ ಹೆಸರು. 'ಈರೋಡ್ ವೆಂಕಟಪ್ಪ ರಾಮಸ್ವಾಮಿ ನಾಯಕರ್' ಎನ್ನುವುದು ಪೆರಿಯಾರ್ ಅವರ ಮೂಲನಾಮ. ಅಂದಿನ ಮದ್ರಾಸ್ ರಾಜ್ಯದ ಕೊಯಮತ್ತೂರು ಜಿಲ್ಲೆಯ ಈರೋಡ್‌ನ ಒಂದು ಶ್ರೀಮಂತ ಕುಟುಂಬದಲ್ಲಿ 1879ರ ಸೆಪ್ಟೆಂಬರ್ 17ರಂದು ಜನಿಸಿದ ಇವರು, ವಿದ್ಯಾಭ್ಯಾಸ ಮೊಟಕುಗೊಳಿಸಿ 12ನೇ ವಯಸ್ಸಿನಲ್ಲೇ ತಂದೆ ನಡೆಸುತ್ತಿದ್ದ ವ್ಯಾಪಾರದಲ್ಲಿ ನೆರವಾದರು.

ಅವರದು ಸಂಪ್ರದಾಯಸ್ಥ ಕುಟುಂಬ. ನಿತ್ಯ ಮನೆಯಲ್ಲಿ ಪೂಜೆ–ಪುನಸ್ಕಾರ, ಪುರಾಣ ಪ್ರವಚನ ನಡೆಯುತ್ತಿದ್ದವು. ಆದರೆ ಈರೋಡ್ ವೆಂಕಟಪ್ಪ ರಾಮಸ್ವಾಮಿ ನಾಯಕರ್ ಅರ್ಥಾತ್ ಪೆರಿಯಾರ್‌ಗೆ ಚಿಕ್ಕ ವಯಸ್ಸಿನಿಂದಲೂ ಅಸಾಧಾರಣ ಹಟ. ತಪ್ಪು ಕಂಡರೆ ನೇರವಾಗಿ ಪ್ರಶ್ನಿಸುವ ಸ್ವಭಾವ. 19ನೇ ವಯಸ್ಸಿನಲ್ಲಿ ಸಂಬಂಧಿಕರ ಮಗಳಾದ ನಾಗಮ್ಮಾಯಿ ಅವರೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ಕೆಲವು ವರ್ಷಗಳ ನಂತರ 1904ರಲ್ಲಿ ಯಾವುದೋ ವಿಚಾರಕ್ಕೆ ತಂದೆಯೊಂದಿಗೆ ಕಲಹವಾಗಿ ಪೆರಿಯಾರ್ ಮನೆಬಿಟ್ಟು ಹೋಗುತ್ತಾರೆ. ವಾರಣಾಸಿ(ಕಾಶಿ)ಯ ಧರ್ಮ ಛತ್ರದಲ್ಲಿ ಬ್ರಾಹ್ಮಣರಿಗೆ ಮಾತ್ರ ಊಟ ನೀಡಲಾಗುವುದು ಎಂದು ಪೆರಿಯಾರ್ ಅವರನ್ನು ಹೊರ ತಳ್ಳುತ್ತಾರೆ. ಕೊನೆಗೆ ಬಿಸಾಡಿದ್ದ ಮಿಕ್ಕ ಆಹಾರವನ್ನೇ ತಿನ್ನಬೇಕಾಗುತ್ತದೆ. ಈ ಪ್ರಸಂಗ ಅವರಿಗೆ ಅತೀವ ನೋವುಂಟು ಮಾಡುತ್ತದೆ.

ಒಂದು ದಿನ ತಮಗಾಗಿ ಹುಡುಕಾಟ ನಡೆಸುತ್ತಿದ್ದ ತಮ್ಮ ತಂದೆ ಎದುರಾಗುತ್ತಾರೆ. ಪೆರಿಯಾರ್ ಅವರನ್ನು ಮತ್ತೆ ಮನೆಗೆ ಕರೆದೊಯ್ದು, ಸಂಪೂರ್ಣ ವ್ಯಾಪಾರ–ವ್ಯವಹಾರದ ಜವಾಬ್ದಾರಿ ವಹಿಸಲಾಗುತ್ತದೆ. ವ್ಯಾಪಾರದ ಜೊತೆಗೆ ಸಾಮಾಜಿಕ ಕಾರ್ಯಗಳಲ್ಲೂ ತೊಡಗಿಸಿಕೊಂಡ ಪೆರಿಯಾರ್, 1918ರಲ್ಲಿ ಈರೋಡ್ ಮುನ್ಸಿಪಾಲಿಟಿ ಅಧ್ಯಕ್ಷರಾಗಿ ಸಾರ್ವಜನಿಕರ ಮೆಚ್ಚುಗೆ ಗಳಿಸುತ್ತಾರೆ. ಬ್ರಿಟಿಷ್ ಸರ್ಕಾರದಲ್ಲಿ ಗೌರವ ಮ್ಯಾಜಿಸ್ಟ್ರೇಟ್ ಆಗಿ ಕಾರ್ಯ ನಿರ್ವಹಿಸುತ್ತಾರೆ. ಇದೇ ವೇಳೆ ಗೌರ್ನರ್ ಆಗಿದ್ದ ರಾಜಗೋಪಾಲಚಾರಿ ಪ್ರೇರೇಪಣೆಯಿಂದ 1919ರಲ್ಲಿ ಈರೋಡ್ ಪುರಸಭಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಾಂಗ್ರೆಸ್ ಸೇರುತ್ತಾರೆ. ತಾವೂ ಖಾದಿ ಬಟ್ಟೆ ಧರಿಸಿ, ಇತರರನ್ನು ಪ್ರೇರೆಪಿಸುತ್ತಾರೆ. ಪಾನ ನಿರೋಧ ಕರೆ ನೀಡುತ್ತಾರೆ. ಸಾರಾಯಿ ಅಂಗಡಿಗಳ ಮುಂದೆ ಮುಷ್ಕರ ನಡೆಸಿ ಸೆರೆಮನೆ ವಾಸ ಅನುಭವಿಸುತ್ತಾರೆ.

1922ರಲ್ಲಿ ತಿರುಪೂರಿನಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಎಲ್ಲಾ ಅಸ್ಪೃಶ್ಯ ಸಮುದಾಯದವರಿಗೂ ದೇವಾಲಯಗಳಲ್ಲಿ ಮುಕ್ತ ಪ್ರವೇಶಕ್ಕೆ ಅವಕಾಶ ನೀಡುವಂತೆ ವಿಚಾರ ಮಂಡಿಸುತ್ತಾರೆ. ಜಸ್ಟೀಸ್ ಪಾರ್ಟಿಯ ಹಿಂದೂ ಧಾರ್ಮಿಕ ದತ್ತಿ ಮಂಡಲಿ ಸ್ಥಾಪನೆ ಮಸೂದೆ ಹಾಗೂ ಜಾತಿ ಆಧಾರಿತ ಮೀಸಲಾತಿ ನೀತಿಯನ್ನು ಮುಕ್ತವಾಗಿ ಸ್ವಾಗತಿಸುತ್ತಾರೆ. ಸರ್ಕಾರಿ ನೌಕರಿಯಲ್ಲಿ ಜಾತಿವಾರು ಮೀಸಲಾತಿ ಹಾಗೂ ಬ್ರಾಹ್ಮಣೇತರರಿಗೆ ಶೇ.50ರಷ್ಟು ಮೀಸಲಾತಿ ನೀಡಬೇಕೆಂದು ಆಗ್ರಹಿಸುತ್ತಾರೆ. ಆದರೆ ಕಾಂಗ್ರೆಸ್‌ನ ಬ್ರಾಹ್ಮಣ ಸದಸ್ಯರು ಇದನ್ನು ವಿರೋಧಿಸಿದ್ದರಿಂದ ಪೆರಿಯಾರ್, ಪಕ್ಷವನ್ನೇ ತ್ಯಜಿಸಿದರು.

ಜಸ್ಟೀಸ್ ಪಾರ್ಟಿಯ ಸರಣಿ ಪ್ರತಿಭಟನೆಗಳಿಗೆ ಕೈ ಜೋಡಿಸಿ, 2 ವರ್ಷ ಸೆರೆಮನೆ ವಾಸ ಅನುಭವಿಸಿದ ನಂತರ ದ್ರಾವಿಡ ಜನರಲ್ಲಿ ಜಾಗೃತಿ ಮೂಡಿಸಲು ಸ್ವಾಭಿಮಾನ ಸಮಾವೇಶ ಪ್ರಾರಂಭಿಸುತ್ತಾರೆ. ಮಾತೃಭಾಷೆಯಲ್ಲಿಯೇ ವೈವಾಹಿಕ ಘೋಷಣೆ ಮಾಡುವ 'ಸ್ವಾಭಿಮಾನ ವಿವಾಹ ಪದ್ಧತಿ' ಜೊತೆಗೆ ಅಂತರ್ಜಾತಿ ವಿವಾಹ ಮತ್ತು ವಿಧವಾ ವಿವಾಹ ಪ್ರೋತ್ಸಾಹಿಸಿದರು. ಮೊದಲಿಗೆ ತಮ್ಮ ತಂಗಿಯ ಮಗಳ(ಬಾಲ ವಿಧವೆ) ವಿವಾಹ ನೆರವೇರಿಸಿ, ಮಾದರಿಯಾದರು. ವಿರೋಧಿಸಿದವರಿಗೆ ನಯವಾಗಿಯೇ ತಕ್ಕ ಉತ್ತರ ನೀಡಿದ್ದರು. ಅಲ್ಲಾ ಸ್ವಾಮಿ, ನಾನೇನು ಮನುಷ್ಯ ಮತ್ತು ಪ್ರಾಣಿಗೆ ವಿವಾಹ ಮಾಡುತ್ತಿಲ್ಲ. ಇಲ್ಲಿ ನಡೆಯುತ್ತಿರುವುದು ಮನುಷ್ಯ ಜಾತಿಯ ಗಂಡು–ಹೆಣ್ಣಿನ ಮದುವೆ. ಇದು ಅಂತರ್ಜಾತಿ ವಿವಾಹ ಹೇಗಾಗುತ್ತದೆ ಎಂದು ಪ್ರಶ್ನಿಸಿ, ಅವರ ಬಾಯಿ ಮುಚ್ಚಿಸುತ್ತಿದ್ದರು. ಇದು ಪೆರಿಯಾರ್ ಅವರಲ್ಲಿದ್ದ ವೈಚಾರಿಕ ಪ್ರಜ್ಞೆಗೆ ಸಾಕ್ಷಿ.

ಬೌದ್ಧ ಧರ್ಮ ಪ್ರಪಂಚದಲ್ಲಿ ವೈಜ್ಞಾನಿಕತೆ ಹಾಗೂ ವೈಚಾರಿಕತೆಯನ್ನು ಸಾರುವ ಸಮಾನತೆಯ ತಳಹದಿಯ ಮೇಲೆ ನಿರ್ಮಾಣವಾಗಿದೆ ಎಂದು ಅವರು ಒಪ್ಪಿಕೊಂಡಿದ್ದರು. 1954ರಲ್ಲಿ ಬರ್ಮಾದಲ್ಲಿ ನಡೆದ ವಿಶ್ವ ಬೌದ್ಧ ಸಮ್ಮೇಳನದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಪೆರಿಯಾರ್ ಭೇಟಿಯಾಗಿದ್ದರು. ಆ ವೇಳೆ ಬೌದ್ಧ ಧರ್ಮಕ್ಕೆ ಸೇರುವ ಬಗ್ಗೆ ಇಬ್ಬರ ನಡುವೆ ಚರ್ಚೆಯಾಗಿತ್ತು. ಆಗ ಪೆರಿಯಾರ್ ನಾನು ಹಿಂದೂ ಧರ್ಮದಿಂದ ಹೊರಬಂದರೆ ನಮ್ಮ ಧರ್ಮವನ್ನು ಟೀಕಿಸಲು ನೀನ್ಯಾರು ಎಂದು ಪ್ರಶ್ನಿಸುತ್ತಾರೆ. ಹಾಗಾಗಿ ನಾನು ಇಲ್ಲೇ ಉಳಿದುಕೊಳ್ಳುವುದು ಸೂಕ್ತ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಪರಿಸ್ಥಿತಿ ವಿವರಿಸಿದ್ದರು. ಪೆರಿಯಾರ್ ಸೇವೆಯನ್ನು ಗಮನಿಸಿ, ಯುನೆಸ್ಕೋ 1970ರಲ್ಲಿ ಅವರನ್ನು ನವ ಯುಗದ ಪ್ರವಾದಿ, ಆಗ್ನೇಯ ಏಷ್ಯಾದ ಸಾಕ್ರಟಿಸ್, ಸಮಾಜ ಸುಧಾರಣಾ ಆಂದೋಲನದ ಪಿತಾಮಹ, ಅಜ್ಞಾನ, ಮೂಢ ನಂಬಿಕೆ ಅರ್ಥಹೀನ ಆಚರಣೆಗಳ ಕಡುವೈರಿ ಎಂದು ಬಿರುದು ನೀಡಿ, ಗೌರವಿಸಿತು.

ಅವರು ಪ್ರತಿಪಾದಿಸಿದ ಸಮಾನತೆಯ ತತ್ವಗಳನ್ನು ಬಲವರ್ಧನೆಗೊಳಿಸುವ ಉದ್ದೇಶದಿಂದ ತಮಿಳುನಾಡಿನ ಸ್ಟಾಲಿನ್ ನೇತೃತ್ವದ ಸರ್ಕಾರ ಪೆರಿಯಾರ್ ಹುಟ್ಟಿದ ದಿನವನ್ನು 'ಸಾಮಾಜಿಕ ನ್ಯಾಯ ದಿನ' ವೆಂದು ಘೋಷಣೆ ಮಾಡಿದೆ. ತಮ್ಮ ಜೀವನವನ್ನೇ ದ್ರಾವಿಡರ ಉದ್ಧಾರಕ್ಕಾಗಿ ಮುಡಿಪಿಟ್ಟ ಪೆರಿಯಾರ್‌ರವರು ಈ ದೇಶ ಕಂಡ ಬಹುದೊಡ್ಡ ಜನನಾಯಕರೆಂಬುದು ಚಾರಿತ್ರಿಕ ಸತ್ಯ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸೆ.19, ಮೈಸೂರಲ್ಲಿ 'ಡಾ.ವಿಷ್ಣು ಸಂಭ್ರಮ'



ಮೈಸೂರು, ಸೆ.16–ಮೈಸೂರಿನ ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಸತತ 4ನೇ ಬಾರಿಗೆ ಸಾಹಸಸಿಂಹ, ಅಭಿನಯ ಭಾರ್ಗವ ಡಾ.ವಿಷ್ಣುವರ್ಧನ್ ಅವರ ನೆನಪಿನಲ್ಲಿ ಸೆ.19ರಂದು ಗುರುವಾರ ಸಂಜೆ 5 ಗಂಟೆಗೆ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ 'ಡಾ.ವಿಷ್ಣು ಸಂಭ್ರಮ' ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಅಣ್ಣಾವ್ರ ಅಭಿಮಾನಿ ಮೈಸೂರು ಜಯರಾಂರವರ ನೇತೃತ್ವದಲ್ಲಿ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ಡಾ.ವಿಷ್ಣುವರ್ಧನ್ ಅಭಿನಯಿಸಿರುವ ಚಲನಚಿತ್ರಗಳ ವಿಶೇಷ ಗೀತೆಗಳನ್ನು ನೈಜ ವಾದ್ಯ ಸಂಗೀತ (ಲೈವ್ ಮ್ಯೂಸಿಕ್)ದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ಗಾಯಕರಾದ ಮೈಸೂರು ಜಯರಾಂ, ಜಗದೀಶ್, ಟಿ.ವಿ.ಎಸ್. ಕುಮಾರ್, ಸುರೇಶ್, ನಂದಕುಮಾರ್, ಡಾ.ಸುರೇಂದ್ರನ್, ಚಂದ್ರಶೇಖರ್, ಸರ್ವಮಂಗಳ, ಅಶ್ವಿನಿ ಶಾಸ್ತ್ರಿ, ಅನಿತ, ಶ್ವೇತ ಪಾಲ್ಗೊಳ್ಳಲಿದ್ದಾರೆ. ಅಂತರರಾಷ್ಟ್ರೀಯ ಕೀಬೋರ್ಡ್ ವಾದಕ ದೀಪಕ್ ಜಯಶೀಲನ್, ನಿತಿನ್ ಲಾರೆನ್ಸ್, ತಬಲಾ ವಾದಕರಾದ ರೋಷನ್ ಹಾಗೂ ಆತ್ಮಾರಾಂ, ಗಿಟಾರ್‌ನಲ್ಲಿ ಪ್ರವೀಣ್ ಕಿಗ್ಗಾಲ್, ರಿದಂ ಪ್ಯಾಡ್‌ನಲ್ಲಿ ವಿನಯ್ ರಂಗ ದೋಳ್ ವಾದ್ಯಗಳನ್ನು ನುಡಿಸಲಿದ್ದಾರೆ. ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಜ್ಯೂನಿಯರ್ ವಿಷ್ಣುವರ್ಧನ್ ಎಂದೇ ಖ್ಯಾತರಾಗಿರುವ ಜಯಶ್ರೀರಾಜ್ ಆಗಮಿಸಲಿದ್ದಾರೆ. ಮೇಲುಕೋಟೆ ವೆಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮವನ್ನು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಸ್.ಬಾಲರಾಜ್ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ನಾಗರಾಜ್ ವಿ.ಭೈರಿ ವಹಿಸಲಿದ್ದಾರೆ.

ಅಭಿನಂದನೆ...



ಖಾಸಗಿ ಕಾರ್ಯಕ್ರಮದ ನಿಮಿತ್ತ ಮೈಸೂರಿಗೆ ಆಗಮಿಸಿದ್ದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿನಂದಿಸಿದರು. ಈ ವೇಳೆ ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್, ಕಾಂಗ್ರೆಸ್ ಮುಖಂಡ ವಿಶ್ವನಾಥ್ (ವಿಶ್ವ) ಉಪಸ್ಥಿತರಿದ್ದರು.

ನಾಳೆ ಶನಿ ಮಹಾಶಾಂತಿ

ಮೈಸೂರು, ಸೆ.16– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ಸ್ವಾಮಿ ದೇವಾಲಯದಲ್ಲಿ ಹುಣ್ಣಿಮೆಯಂದು ಸೆ.18ರಂದು ಬುಧವಾರ ಕರ್ಕಾಟಕ, ತುಲಾ, ಮಕರ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಬಾಧಾ ನಿವಾರಕ ಸುದರ್ಶನ ಹೋಮ, ಮಹಾ ಮೃತ್ಯುಂಜಯ ಹೋಮ, ಕುಜದೋಷ ನಿವೃತ್ತಿ ಶಾಂತಿ, ರಾಹು ಕೇತು ಶಾಂತಿ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ಏರ್ಪಡಿಸಲಾಗಿದೆ ಬೆಳಗ್ಗೆ 9.30ಕ್ಕೆ ಪ್ರಾರಂಭವಾಗಿ 12.30ಕ್ಕೆ ಮಹಾ ಮಂಗಳಾರತಿ ಹಾಗೂ ಪ್ರತ್ಯೇಕ ಸಂಕಲ್ಪ ಮಾಡಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಿಜೆಪಿ ಸದಸ್ಯತ್ವ ಅಭಿಯಾನ



ಮೈಸೂರು ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಜಯಲಕ್ಷ್ಮಿಪುರಂನ 19ನೇ ವಾರ್ಡ್‌ನಲ್ಲಿ ಮನೆ ಮನೆ ಸಂಪರ್ಕದ ಮೂಲಕ ಬಿಜೆಪಿ ಸದಸ್ಯತ್ವ ಅಭಿಯಾನ–2024 ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನಗರ ಜಿಲ್ಲಾ ಕಾರ್ಯದರ್ಶಿ ಮೋನಿಕಾ, ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್‌ಗೌಡ, ಮಹಿಳಾ ಮೋರ್ಚಾ ಅಧ್ಯಕ್ಷೆ ಚಂದ್ರಕಲಾ, ಪ್ರಧಾನ ಕಾರ್ಯದರ್ಶಿ ಮಂಜುಳ, ಸುದಾಮನಿ, ನೇತ್ರಾ, ಶ್ಯಾಮ್, ಸುರೇಶ್, ಯಶಸ್, ಕಾರ್ತಿಕ್, ನಮಿತ್ ಮತ್ತಿತರರು ಉಪಸ್ಥಿತರಿದ್ದರು.

ಗಣೇಶೋತ್ಸವದಲ್ಲಿ ಹಿಂದೂ–ಮುಸ್ಲಿಮರಿಂದ ಭಾವೈಕ್ಯದ ಸಂದೇಶ

ಈದ್ ಮಿಲಾದ್ ಅಂಗವಾಗಿ ಮಕ್ಕಳಿಗೆ ಪುಸ್ತಕ, ಹೋಳಿಗೆ ವಿತರಣೆ



ಗಣೇಶೋತ್ಸವದಲ್ಲಿ ಮುಸ್ಲಿಂ ಸಮುದಾಯದ ಮುಖಂಡರು ಈದ್ ಮಿಲಾದ್ ಅಂಗವಾಗಿ ಮಕ್ಕಳಿಗೆ ಪುಸ್ತಕ, ಹೋಳಿಗೆ ವಿತರಿಸಿ ಶುಭಾಶಯ ಕೋರಿದರು.

ಮೈಸೂರು,ಸೆ.16–ಮೈಸೂರಿನ ಸುಣ್ಣದಕೇರಿ ಶ್ರೀ ವಿನಾಯಕ ಯುವಕರ ಬಳಗ ವತಿಯಿಂದ ಗಣೇಶೋತ್ಸವದಲ್ಲಿ ಮುಸಲ್ಮಾನ್ ಸಮುದಾಯದ ಮುಖಂಡರು ಈದ್ ಮಿಲಾದ್ ಅಂಗವಾಗಿ ಮಕ್ಕಳಿಗೆ ಪುಸ್ತಕ ಹಾಗೂ ಹೋಳಿಗೆ ವಿತರಿಸಿ ಶುಭಾಶಯ ವಿನಿಮಯ ಮಾಡಿಕೊಂಡರು.

ಕಾಂಗ್ರೆಸ್ ಮುಖಂಡ ಜಿ.ಶ್ರೀನಾಥ್ ಬಾಬು, ಬಳಗದ ಅಧ್ಯಕ್ಷ ಮಂಜುನಾಥ್, ಕಾಂಗ್ರೆಸ್ ಚಾಮುಂಡೇಶ್ವರಿ ಕ್ಷೇತ್ರದ ಅಲ್ಪಸಂಖ್ಯಾತ ಅಧ್ಯಕ್ಷ ಆರಿಫ್ ಪಾಷಾ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕಿಶೋರ್ ಕುಮಾರ್, ರಾಘವೇಂದ್ರ, ಬ್ಯಾಂಕ್ ಸಿದ್ದರಾಜು, ಸಿದ್ದರಾಮಯ್ಯ ಬ್ರಿಗೇಡ್ ಅಧ್ಯಕ್ಷ ಹಿನಕಲ್ ಉದಯ್, ಕಿರಣ್, ಚಕ್ರಪಾಣಿ, ಗುಲ್ಜನ್ ಪಾಷಾ, ಇರ್ಫಾನ್, ಸೈಯದ್, ಇಮ್ರಾನ್ ಪಾಷಾ, ಮಹಮ್ಮದ್, ಶಫಿ ಉಲ್ಲಾ ಖಾನ್, ಸ್ಥಳೀಯ ಮಕ್ಕಳು ಉಪಸ್ಥಿತರಿದ್ದರು.

ನಿಧನ

ವಿ.ಕೃಷ್ಣಮೂರ್ತಿ



ಮೈಸೂರು, ಸೆ.16– ಮೈಸೂರಿನ ಅಶೋಕ ರಸ್ತೆಯಲ್ಲಿರುವ ಶ್ರೀ ನಂಜುಂಡೇಶ್ವರ ಜ್ಯುವೆಲ್ಲರ್ಸ್ ಸ್ಥಾಪಕರಾದ ವಿ.ಕೃಷ್ಣಮೂರ್ತಿ (87) ಅವರು ಇಂದು ನಿಧನರಾದರು.

ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು, ಸ್ನೇಹಿತರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ರಾಮೇಗೌಡ



ಮೈಸೂರು ತಾಲೂಕಿನ ಲಕ್ಷ್ಮೀಪುರ ಗ್ರಾಮದ ನಿವಾಸಿ, ನಾಗನಹಳ್ಳಿ ಗ್ರಾಪಂ ಮಾಜಿ ಸದಸ್ಯ, ಜೆಡಿಎಸ್ ಮುಖಂಡ ಟಿ. ರಾಮೇಗೌಡ(63) ಇಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 12ಕ್ಕೆ ಲಕ್ಷ್ಮೀಪುರದಲ್ಲಿ ನೆರವೇರಿಸಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಈದ್ ಆಚರಣೆ ವೇಳೆ ವಿಎಚ್‌ಪಿ ಪ್ರತಿಭಟನೆ; ಬಿಸಿ ರೋಡ್ ಉದ್ವಿಗ್ನ



ಮಂಗಳೂರು ಹೊರವಲಯದ ಬಿಸಿ ರೋಡ್‌ನಲ್ಲಿ ವಿಹೆಚ್‌ಪಿ ಭಜರಂಗದಳದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಂಗಳೂರು,ಸೆ.16– ವಿಶ್ವ ಹಿಂದೂ ಪರಿಷತ್ ಮುಖಂಡ ಶರಣ್ ಪಂಪ್‌ವೆಲ್ ಹಾಗೂ ಬಂಟ್ವಾಳ ಟಿಎಂಸಿ ಮಾಜಿ ಅಧ್ಯಕ್ಷ ಮೊಹಮ್ಮದ್ ಶರೀಫ್ ಅವರ ಪ್ರಚೋದನಕಾರಿ ಹೇಳಿಕೆ ಹಿನ್ನೆಲೆಯಲ್ಲಿ ಮಂಗಳೂರು ಹೊರವಲಯದ ಬಿಸಿ ರೋಡ್‌ನಲ್ಲಿ ಸೋಮವಾರ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಗಣೇಶ ಚತುರ್ಥಿ ಮೆರವಣಿಗೆಯ ದಿನದಂದು ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ನಡೆದ ಕೋಮು ಘರ್ಷಣೆಯನ್ನು ಖಂಡಿಸಿ ತಾವು ಪ್ರತಿಭಟನೆ ನಡೆಸುತ್ತಿದ್ದು, ಈದ್ ಮಿಲಾದ್ ರ್‍ಯಾಲಿಗೆ ಕಡಿವಾಣ ಹಾಕುವಂತೆ ಒತ್ತಾಯಿಸಿದ್ದ ಶರಣ್ ಪಂಪ್‌ವೆಲ್, ಈದ್ ಮೆರವಣಿಗೆಯನ್ನು ಬೇಕಾದರೆ ನಿಲ್ಲಿಸಬಹುದು ಎಂದು ಹೇಳಿದ್ದರು.

ಶರಣ್ ಪಂಪ್‌ವೆಲ್ ಹೇಳಿಕೆಗೆ ಪ್ರತಿಕ್ರಿಯೆಯಾಗಿ, ವೈರಲ್ ಆದ ಆಡಿಯೋ ಸಂದೇಶದಲ್ಲಿ, ಶರಣ್ ಪಂಪ್‌ವೆಲ್ ಬಿ.ಸಿ.ರೋಡ್‌ಗೆ ಬಂದು ಸೋಮವಾರ ಈದ್ ರ್‍ಯಾಲಿಯನ್ನು ತಡೆಯಲಿ ಎಂದು ಶರೀಫ್ ಸವಾಲು ಹಾಕಿದ್ದರು. ಈ ಸವಾಲನ್ನು ಸ್ವೀಕರಿಸಿದ ಶರಣ್ ಪಂಪ್‌ವೆಲ್, ಪುನೀತ್ ಅತ್ತಾವರ್ ಸೇರಿದಂತೆ ಹಲವು ಹಿಂದೂತ್ವ ಕಾರ್ಯಕರ್ತರು ಬಿಸಿ ರೋಡ್ ಚಲೋ ನಡೆಸಿದರು.

ಇಂದು ಬೆಳಗ್ಗೆ ಬಿಸಿ ರೋಡ್‌ನ ರಕ್ತೇಶ್ವರಿ ದೇವಸ್ಥಾನದ ಬಳಿ ಜಮಾಯಿಸಿದ ಹಿಂದೂ ಕಾರ್ಯಕರ್ತರು, ಷರೀಫ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಆದರೆ ಹೆಚ್ಚಿನ ಸಂಖ್ಯೆಯಲ್ಲಿದ್ದ ಪೊಲೀಸ್ ಸಿಬ್ಬಂದಿ ಬ್ಯಾರಿಕೇಡ್‌ಗಳನ್ನು ಬಳಸಿ ಅವರನ್ನು ಮುಂದೆ ಸಾಗದಂತೆ ತಡೆದರು.

ನಾವು ಸವಾಲು ಸ್ವೀಕರಿಸಿ ಬಿಸಿ ರೋಡ್‌ಗೆ ಆಗಮಿಸಿದ್ದೇವೆ ಮತ್ತು ನಾವು ಈ ಹಿಂದೆಯೂ ಇಂತಹ ಸವಾಲುಗಳನ್ನು ಎದುರಿಸಿದ್ದೇವೆ. ಅನೇಕರು ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಯಾವುದೇ ಆಹ್ವಾನ ನೀಡದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಜಮಾಯಿಸಿರುವುದು ಹಿಂದುತ್ವದ ವಿಜಯವಾಗಿದೆ ಎಂದು ಶರಣ್ ಪಂಪ್‌ವೆಲ್ ಹೇಳಿದ್ದಾರೆ.

ಪಶ್ಚಿಮ ವಲಯದ ಉಪ ಪೊಲೀಸ್ ಮಹಾನಿರೀಕ್ಷಕ (ಡಿಐಜಿಪಿ) ಅಮಿತ್ ಸಿಂಗ್, ದಕ್ಷಿಣ ಕನ್ನಡ ಎಸ್ಪಿ ಯತೀಶ್ ಎನ್, ಸಹಾಯಕ ಆಯುಕ್ತ ಹರ್ಷವರ್ಧನ್ ಮತ್ತು ತಹಶೀಲ್ದಾರ್ ಅರ್ಚನಾ ಭಟ್ ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದಾರೆ.

ಪೊಲೀಸರು ಪರ್ಯಾಯ ಮಾರ್ಗದ ವ್ಯವಸ್ಥೆ ಮಾಡಿ, ಹಿಂದುತ್ವವಾದಿಗಳು ಜಮಾಯಿಸಿದ ಬಿಸಿ ರೋಡ್ ಮೂಲಕ ಈದ್ ಮಿಲಾದ್ ಮೆರವಣಿಗೆ ಹೋಗಲು ಅನುಮತಿ ನಿರಾಕರಿಸಿದರು. ನಂತರ ಕೆಲ ಯುವಕರು ಹಸಿರು ಬಾವುಟ ಹಿಡಿದು ಹೆದ್ದಾರಿಯಲ್ಲಿ ಎರಡು ಬಾರಿ ಬೈಕ್ ರ್‍ಯಾಲಿ ನಡೆಸಿದರು. ಈ ಮಧ್ಯೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಅವರು, ಬಂಟ್ವಾಳ ಟಿಎಂಸಿ ಮಿತಿಯಲ್ಲಿ ಮುಂದಿನ 48 ಗಂಟೆಗಳ ಕಾಲ ಮದ್ಯ ನಿಷೇಧ ಹೇರಿದ್ದಾರೆ. ಸ್ಥಳದಲ್ಲಿ ಆರು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ, 4 ಜಿಲ್ಲಾ ಸಶಸ್ತ್ರ ಮೀಸಲು ಪಡೆ ಮತ್ತು ಕ್ಷಿಪ್ರ ಕಾರ್ಯಾಚರಣೆ ಪಡೆಯ ತುಕಡಿಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ.

ಕಲ್ಲು ತೂರಾಟ, ಆರು ಮಂದಿ ಬಂಧನ

ಮಂಗಳೂರು ಹೊರವಲಯದ ಸುರತ್ಕಲ್‌ನಲ್ಲಿರುವ ಮಸೀದಿಯೊಂದಕ್ಕೆ ಭಾನುವಾರ ರಾತ್ರಿ ಕಲ್ಲು ತೂರಾಟ ನಡೆಸಿದ ಆರೋಪದ ಮೇಲೆ ಆರು ಮಂದಿಯನ್ನು ಮಂಗಳೂರು ನಗರ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಸುರತ್ಕಲ್‌ನ ಕಾನಕಟ್ಲ ನಿವಾಸಿ ಭರತ್ ಶೆಟ್ಟಿ(26), ಸುರತ್ಕಲ್‌ನ ಕಾನಕಟ್ಲ ನಿವಾಸಿ ಚೆನ್ನಪ್ಪ ಶಿವಾನಂದ ಚಲವಾದಿ(19), ನಿತಿನ್ ಹಡಪದ(22), ಸುರತ್ಕಲ್‌ನ ಚೇಳಾರು ನಿವಾಸಿ ಸುಜಿತ್ ಶೆಟ್ಟಿ(23) ವರ್ಷ, ಹೊಸಬೆಟ್ಟು ಗ್ರಾಮದ ಅಣ್ಣಪ್ಪ(24) ಮತ್ತು ಕಾಟಿಪಳ್ಳದ ಪ್ರೀತಂ ಶೆಟ್ಟಿ(34) ಬಂಧಿತ ಆರೋಪಿಗಳು. ಕಾಟಿಪಳ್ಳದ 3ನೇ ಬ್ಲಾಕ್‌ನಲ್ಲಿರುವ ಮಜಿದುಲ್ಲಾ ಹುದಾಜುಮ್ಮ ಮಸೀದಿಯ ಅಧ್ಯಕ್ಷ ಕೆ.ಎಚ್. ಅಬ್ದುಲ್ ರಹಿಮಾನ್ ನೀಡಿದ ದೂರಿನ ಪ್ರಕಾರ, ನಿನ್ನೆ ರಾತ್ರಿ 9.50ರ ಸುಮಾರಿಗೆ ಮಸೀದಿಯ ಹಿಂಬದಿಯ ಜನತಾ ಕಾಲೋನಿಯ ಸಮಾಧಿ ಕಡೆಯಿಂದ ಎರಡು ಬೈಕ್‌ಗಳಲ್ಲಿ ಆಗಮಿಸಿದ ದುಷ್ಕರ್ಮಿಗಳು ಮಸೀದಿಗೆ ಕಲ್ಲು ತೂರಾಟ ನಡೆಸಿದ್ದಾರೆ. ಹಿಂದೂ ಮತ್ತು ಮುಸ್ಲಿಂ ಸಮುದಾಯಗಳಲ್ಲಿ ಅಶಾಂತಿಯನ್ನು ಉಂಟುಮಾಡುವ ಉದ್ದೇಶದಿಂದ ಕಲ್ಲು ತೂರಾಟ ನಡೆಸಿದ್ದು, ಘಟನೆಯಲ್ಲಿ ಕಿಟಕಿಯ ಗಾಜುಗಳಿಗೆ ಹಾನಿಯಾಗಿದೆ. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಇನ್ಸ್‌ಪೆಕ್ಟರ್ ಮಹೇಶ್ ಪ್ರಸಾದ್ ನೇತೃತ್ವದಲ್ಲಿ ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಿದ್ದರು. ಇಂದು ಬೆಳಗ್ಗೆ ಕದ್ರಿ ಮಂಜುನಾಥ ದೇವಸ್ಥಾನದ ರಸ್ತೆ ಬಳಿ ಆರೋಪಿಗಳನ್ನು ಬಂಧಿಸಿದ್ದಾರೆ.

ಸರ್ ಎಂ.ವಿಶ್ವೇಶ್ವರಯ್ಯ ಸಾಧನೆ ಮಾದರಿ

ಸರ್ ಎಂ. ವಿಶ್ವೇಶ್ವರಯ್ಯ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ



ಮೈಸೂರು ಯುವ ಬಳಗದಿಂದ ಸೋಮವಾರ ಸರ್ ಎಂ ವಿಶ್ವೇಶ್ವರಯ್ಯ ಜಯಂತಿ ಆಚರಿಸಲಾಯಿತು.

ಮೈಸೂರು, ಸೆ.16–ಮೈಸೂರು ಯುವ ಬಳಗದ ವತಿಯಿಂದ ಭಾರತರತ್ನ ಸರ್.ಎಂ ವಿಶ್ವೇಶ್ವರಯ್ಯ ಅವರ 163ನೇ ಜಯಂತಿಯನ್ನು ಜೆ.ಎಲ್.ಬಿ ರಸ್ತೆಯಲ್ಲಿರುವ ಇನ್ಸ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಆವರಣದಲ್ಲಿರುವ ಸರ್ ಎಂವಿ ಅವರ ಪ್ರತಿಮೆಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಮಾಲಾರ್ಪಣೆ ಮಾಡುವ ಮೂಲಕ ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಶಾಸಕರು, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಆಧುನಿಕ ಮೈಸೂರು ಸಂಸ್ಥಾನದ ನಿರ್ಮಾತೃಗಳು. ಅವರ ಸಮಯಪರಿಪಾಲನೆ, ಪಾರದರ್ಶಕತೆ ಇಂದಿನ ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಮಾದರಿಯಾಗಿದೆ. ಕೆ.ಆರ್ ವೃತ್ತದಲ್ಲಿ ನಾಲ್ವಡಿ ಅವರ ಪ್ರತಿಮೆ ಉದ್ಘಾಟಿಸಲು ಅಂದು ಜಯಚಾಮರಾಜ ಒಡೆಯರ್ ಆಹ್ವಾನಿಸಿದಾಗ ವಿಶ್ರಾಂತಿ ಗೃಹದಿಂದ ಸರ್.ಎಂವಿ ವಾಹನ ನಿರಾಕರಿಸಿ ಕಾಲ್ನಡಿಗೆಯಲ್ಲೇ ಬಂದು ಗೌರವ ಸೂಚಿಸಿದರು. ಜನಪ್ರಿಯತೆ ಇದ್ದರೂ ಸರಳತೆಗೆ ಮಹತ್ವ ಕೊಟ್ಟವರು ಸರ್.ಎಂವಿ ಎಂದರು.

ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ವಿಪ್ರ ಮುಖಂಡರಾದ ಅಚ್ಯುತ, ಜಿ ರಾಘವೇಂದ್ರ, ಮೋಹನ್ ಕುಮಾರ್, ರವಿಚಂದ್ರ, ನವೀನ್, ನಂಜುಂಡಸ್ವಾಮಿ, ಸಂಜಯ್‌ಗೌಡ, ಶಫಿ, ಗೌತಮ್ ಬಾಲಾಜಿ, ಚರಣ್ ಇನ್ನಿತರರು ಉಪಸ್ಥಿತರಿದ್ದರು.

ರುತ್ವಾ ಸಿಬಿಎಸ್‌ಸಿ ದಕ್ಷಿಣ ವಲಯ ಈಜು ಸ್ಪರ್ಧೆ: ಜಿಎಸ್‌ಎಗೆ 10 ಪದಕ



ದಾವಣಗೆರೆಯ ಶಿವಶಂಕರಪ್ಪ ಶಾಲೆಯಲ್ಲಿ ನಡೆದ ಸಿಬಿಎಸ್‌ಸಿ ದಕ್ಷಿಣವಲಯ–II ಚಾಂಪಿಯನ್‌ಶಿಪ್ 2024–25ರಲ್ಲಿ ಮೈಸೂರಿನ ಜೆ.ಪಿ.ನಗರದ ಸ್ಪೋರ್ಟ್ಸ್ ಗ್ಲೋಬಲ್ ಅಸೋಸಿಯೇಷನ್‌ನ ರುತ್ವಾ, ಜೀವಾಂಶ್ ಮತ್ತು ಸಾನ್ವಿ 10 ಪದಕಗಳನ್ನು ಗಳಿಸಿದ್ದಾರೆ.

ಮೈಸೂರು, ಸೆ.16–ಸಿಬಿಎಸ್‌ಸಿ ದಕ್ಷಿಣ ವಲಯ–II ಈಜು ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಮೈಸೂರಿನ ಜಿಎಸ್‌ಎ ತಂಡದ ರುತ್ವಾ ವೈಯಕ್ತಿಕ ಚಾಂಪಿಯನ್‌ಶಿಪ್ ಪಡೆದು ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ದಾವಣಗೆರೆಯ ಶಿವಶಂಕರಪ್ಪ ಶಾಲೆಯಲ್ಲಿ ನಡೆದ ಸಿಬಿಎಸ್‌ಸಿ ದಕ್ಷಿಣವಲಯ–II ಚಾಂಪಿಯನ್‌ಶಿಪ್ 2024–25ರಲ್ಲಿ ಮೈಸೂರಿನ ಜೆ.ಪಿ.ನಗರದ ಸ್ಪೋರ್ಟ್ಸ್ ಗ್ಲೋಬಲ್ ಅಸೋಸಿಯೇಷನ್‌ನ ರುತ್ವಾ, ಜೀವಾಂಶ್ ಮತ್ತು ಸಾನ್ವಿ ಮೂವರು ಸ್ಪರ್ಧಿಸಿ 10 ಪದಕಗಳನ್ನು ಗಳಿಸಿದ್ದಾರೆ.

ಇವರು ಒಡಿಸ್ಸಾದ ಭುವನೇಶ್ವರದಲ್ಲಿ ನಡೆಯಲಿರುವ ರಾಷ್ಟ್ರೀಯ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

ಬೆಸ್ಟ್ ಸ್ವಿಮ್ಮರ್: ಸೇಂಟ್ ಥಾಮಸ್ ಶಾಲೆಯಲ್ಲಿ 5ನೇ ತರಗತಿ ಓದುತ್ತಿರುವ ರುತ್ವಾ 50 ಮೀ. ಹಾಗೂ 100 ಮೀ. ಫ್ರೀ ಸ್ಟೈಲ್‌ನಲ್ಲಿ 2 ಚಿನ್ನದ ಪದಕ, 50 ಮೀ. ಬಟರ್‌ಫ್ಲೈನಲ್ಲಿ 1 ಚಿನ್ನದ ಪದಕ ಪಡೆದು "ಬೆಸ್ಟ್ ಸ್ವಿಮ್ಮರ್" ಪ್ರಶಸ್ತಿಗೆ ಭಾಜನರಾಗಿದ್ದಾರೆ. ಡಿಎವಿ ಶಾಲೆಯಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿರುವ ಜೀವಾಂಶ್ 200 ಮೀ. ಹಾಗೂ 100 ಮೀ., ಬಟರ್‌ಫ್ಲೈನಲ್ಲಿ 2 ಚಿನ್ನ, 50 ಮೀ. ಬಟರ್‌ಫ್ಲೈನಲ್ಲಿ ಹಾಗೂ 200 ಮೀ. ಮಿಡ್ಲೆಯಲ್ಲಿ 2 ಬೆಳ್ಳಿ ಪದಕ ಪಡೆದು ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ. ಡಿಎವಿ ಶಾಲೆಯ 5ನೇ ತರಗತಿಯ ಸಾನ್ವಿ ಆರ್. 200 ಮೀ. ಮೆಡ್ಲೆಯಲ್ಲಿ 1 ಬೆಳ್ಳಿ ಹಾಗೂ 100ಮೀ. ಬಟರ್‌ಫ್ಲೈ ಹಾಗೂ 50 ಮೀ. ಫ್ರೀ ಸ್ಟೈಲ್‌ನಲ್ಲಿ 2 ಕಂಚಿನ ಪದಕ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಈಜುಪಟುಗಳು ಜೆ.ಪಿ.ನಗರದ ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಈಜುಕೊಳದ ಜಿಎಸ್‌ಎ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ನಾಳೆ ಪಂಡಿತ್ ರಾಜೀವ್ ತಾರಾನಾಥ್‌ಗೆ ಸಂಗೀತ ನಮನ



ಮೈಸೂರು, ಸೆ.16(ಜಿಎ)–ಜನಚೈತನ್ಯ ಫೌಂಡೇಷನ್ ವತಿಯಿಂದ ಸೆ.18ರಂದು ಸಂಜೆ 5ಗಂಟೆಗೆ ನಗರದ ನಾದಬ್ರಹ್ಮ ಸಂಗೀತ ಸಭಾದಲ್ಲಿ ದಿ.ಪಂಡಿತ್ ರಾಜೀವ್ ತಾರಾನಾಥ್ ಅವರಿಗೆ ಸಂಗೀತ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಆರ್.ಲಕ್ಷ್ಮಣ್ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಭಾವಗೀತೆ, ಜನಪದ ಗೀತೆ, ರಂಗಗೀತೆ ಹಾಡಲಾಗುವುದು. ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ನಾಗರಾಜ್ ವಿ.ಭೈರಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಾಯ್ ವೈಶಾಖ್, ರಾಜೇಶ್ ಕಲ್ರೋ, ಡಿ.ಎಲ್.ವಿಕಾ, ತಿಪ್ಪಯ್ಯ ಉಪಸ್ಥಿತರಿದ್ದರು.

ಶಾಸಕ ಮುನಿರತ್ನರ ರಾಜೀನಾಮೆಗೆ ಆಗ್ರಹ

ಮೈಸೂರು,ಸೆ.16(ಜಿಎ)–ಜವಾಬ್ದಾರಿಯುತ ಸ್ಥಾನದಲ್ಲಿರುವ ಬಿಜೆಪಿ ಶಾಸಕ ಮುನಿರತ್ನ ಗುತ್ತಿಗೆದಾರರೊಬ್ಬರಿಗೆ ಜಾತಿ ನಿಂದನೆ ಮಾಡಿದ್ದಲ್ಲದೆ, ಕೊಲೆ ಬೆದರಿಕೆ ಹಾಕಿದ್ದಾರೆ. ಜೊತೆಗೆ ಮಹಿಳೆಯರ ಬಗ್ಗೆ ತುಚ್ಛವಾಗಿ ಮಾತನಾಡಿದ್ದಾರೆ. ಇದು ಬಿಜೆಪಿಯವರ ಬೂಟಾಟಿಕೆ ತೋರುತ್ತದೆ. ಈಗಲೂ ಸುಮ್ಮನಿರುವ ರಾಜ್ಯಪಾಲರು ಮುನಿರತ್ನ ಅವರ ರಾಜೀನಾಮೆ ಪಡೆಯಬೇಕು ಎಂದು ರಾಜ್ಯ ಪ್ರದೇಶ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷರಾದ ಡಾ. ಪುಷ್ಪಾ ಅಮರ್‌ನಾಥ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯವರು ಹೆಣ್ಣು ಮಕ್ಕಳು ಗೌರವಯುತವಾಗಿ ಬದುಕಲು ಅವಕಾಶ ಮಾಡಿಕೊಟ್ಟಿದ್ದಾರೆಯೇ ಎಂಬ ಪ್ರಶ್ನೆ ಮುನಿರತ್ನ ಅವರ ಮಾತುಗಳಿಂದ ಉದ್ಭವವಾಗಿದೆ. ಚುನಾವಣೆ ವೇಳೆ ಎಲ್ಲಾ ಜಾತಿಯವರ ಮತ ಬೇಕು ಎನ್ನುವ ಅವರು ಬಳಿಕ ಈ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಮಂಡ್ಯ ಘಟನೆ ಬಗ್ಗೆಯೂ ಮಾತನಾಡುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಈಗ ಏಕೆ ಸುಮ್ಮನಿದ್ದಾರೆ ಎಂದು ಪ್ರಶ್ನಿಸಿ, ಮುನಿರತ್ನ ಅವರಿಗೆ ಯಾವುದೇ ಕಾರಣಕ್ಕೂ ಕ್ಷಮೆ ನೀಡಬಾರದು. ಬಿಜೆಪಿಯವರಿಗೆ ಹೆಣ್ಣು ಮಕ್ಕಳ ಬಗ್ಗೆ ಗೌರವ ಇದ್ದರೆ ಕೂಡಲೇ ಅವರ ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಮೋದಾಮಣಿ, ರಾಧಾಮಣಿ, ಸುಶೀಲಾ ಮರಿಗೌಡ ಉಪಸ್ಥಿತರಿದ್ದರು.

ಕೆ.ಆರ್.ನಗರದಲ್ಲಿ ಕಾನೂನು, ಸುವ್ಯವಸ್ಥೆ ಹದಗೆಟ್ಟಿದೆ

ಪುಟ್ಟಸಿದ್ದಶೆಟ್ಟಿ ಆರೋಪ

ಮೈಸೂರು, ಸೆ.16(ಜಿಎ)–ಮೈಸೂರಿನ ಕೆ.ಆರ್.ನಗರ ತಾಲೂಕಿನಲ್ಲಿ ಕಾನೂನು, ಸುವ್ಯವಸ್ಥೆ ಹದಗೆಟ್ಟಿದ್ದು, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಚುರುಕುಗೊಳ್ಳಬೇಕೆಂದು ಕಾಯಕ ಸಮುದಾಯಗಳ ಮುಖಂಡ ಕೆ.ಸಿ.ಪುಟ್ಟಸಿದ್ದಶೆಟ್ಟಿ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಆರ್.ನಗರದಲ್ಲಿ ಇತ್ತೀಚೆಗೆ ಬಸ್ ನಿಲ್ದಾಣದಲ್ಲಿ ಕಿಟ್ಟಿ ಎಂಬ ಚೀರನಹಳ್ಳಿ ಗ್ರಾಮದ ಯುವಕನೊಬ್ಬನಿಗೆ ಅದೇ ಗ್ರಾಮದ ಮತ್ತೊಬ್ಬ ಯುವಕ ಹಾಡಹಗಲೇ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ಇರಿತಕ್ಕೊಳಗಾದ ಯುವಕ ಈಗ ಜೀವನ್ಮರಣದ ನಡುವೆ ಹೋರಾಡುತ್ತಿದ್ದಾರೆ. ಇದೇ ರೀತಿಯ ಅನೇಕ ಅಪರಾಧ ಕೃತ್ಯಗಳು ತಾಲೂಕಿನಲ್ಲಿ ನಡೆಯುತ್ತಿವೆ. ಪೊಲೀಸರ ಬಗ್ಗೆ ಜನರಿಗೆ ಹೆದರಿಕೆ ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಹೀಗಾಗಿ ಬಂದೂಕಿನೊಡನೆ ಗಸ್ತು ತಿರುಗುವ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಕೆಂಪಶೆಟ್ಟಿ, ಕುಮಾರ್ ಉಪಸ್ಥಿತರಿದ್ದರು.

ಆದರ್ಶ ಶಿಕ್ಷಕ ಪ್ರಶಸ್ತಿ



ಅಕ್ಷ ಭಾರತ್ ಮಿಷನ್ ಹಾಗೂ ಸುರಕ್ಷ ಫೌಂಡೇಶನ್ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ರಮೇಶ್ ತಾಯೂರು ಅವರಿಗೆ ರಾಜ್ಯ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶಾಶ್ವತ ಸೇವಾ ಶಾಲೆ ಕಾರ್ಯದರ್ಶಿ ಚೌಧರಿ, ಮುಖ್ಯ ಶಿಕ್ಷಕಿ ಪವಿತ್ರಾ ಸಂಸ್ಥೆಯ ಅಧ್ಯಕ್ಷೆ ರೇಖಾ, ಪ್ರಧಾನ ಕಾರ್ಯದರ್ಶಿ ಆನಂದ್‌ರಾಜ್, ಜಯಾನಂದ್ ಇದ್ದರು.

ಅವೈಜ್ಞಾನಿಕ ಅಭಿವೃದ್ಧಿಯಿಂದ ಅಪಾಯವಾಗದಂತೆ ಎಚ್ಚರ ವಹಿಸಬೇಕು

ವಿಚಾರ ಸಂಕಿರಣದಲ್ಲಿ ವಿಶ್ರಾಂತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗುರುಚರಣ್ ಗೊಲ್ಲರಕೇರಿ ಸಲಹೆ

ಮೈಸೂರು, ಸೆ.16(ಜಿಎ)–ಪ್ರಕೃತಿಯ ಮೂಲ ರಚನೆಗೆ ಧಕ್ಕೆಯಾಗದ ರೀತಿಯಲ್ಲಿ ಸುಸ್ಥಿರ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಬೇಕು ಎಂದು ಕರ್ನಾಟಕ ಸರ್ಕಾರದ ವಿಶ್ರಾಂತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗುರುಚರಣ್ ಗೊಲ್ಲರಕೇರಿ ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರ, ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆಯ ಮೈಸೂರು ಶಾಖೆ ಹಾಗೂ ಮೈಸೂರು ಮುಕ್ತ ವೇದಿಕೆ ಸಹಯೋಗದೊಂದಿಗೆ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ನಡೆದ 'ಹವಾಮಾನ ಬದಲಾವಣೆ: ಜಿಲ್ಲಾ ಮಟ್ಟದಲ್ಲಿ ಮುಖ್ಯವಾಹಿನಿ ಹವಾಮಾನ ಕ್ರಮ' ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಅವೈಜ್ಞಾನಿಕ ಅಭಿವೃದ್ಧಿಯ ಕ್ರಮಗಳಿಂದ ಪ್ರಾಕೃತಿಕ ಅಪಾಯಗಳು ಎದುರಾದಾಗ ಗಡಿಬಿಡಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಓಡಾಡುವ ಬದಲು, ಪ್ರಾಕೃತಿಕ ಅಪಾಯಗಳು ಎದುರಾಗದ ಹಾಗೆ ಸರ್ಕಾರಗಳು ಕ್ರಮವಹಿಸಬೇಕು ಎಂದರು.



ಮೈಸೂರು ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ 'ಹವಾಮಾನ ಬದಲಾವಣೆ: ಜಿಲ್ಲಾ ಮಟ್ಟದಲ್ಲಿ ಮುಖ್ಯವಾಹಿನಿ ಹವಾಮಾನ ಕ್ರಮ' ವಿಚಾರ ಸಂಕಿರಣ ನಡೆಸಲಾಯಿತು.

ವಿಶ್ವವಿದ್ಯಾನಿಲಯದ ಗೌರವ ಪ್ರಾಧ್ಯಾಪಕ ಪ್ರೊ.ಎನ್.ಶಿವಣ್ಣ, ಪಂಚಾಯತ್ ರಾಜ್: ತತ್ವಗಳು ಮತ್ತು ಆಚರಣೆಗಳು ಕುರಿತು ಮಾತನಾಡಿ, ಪಂಚಾಯತ್ ರಾಜ್ ಇಲಾಖೆಯು ಸರ್ಕಾರದಂತೆ ತಾನೇ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಅಧಿಕಾರವನ್ನು ಹೊಂದಿದೆ. ಇಂತಹ ಸ್ವಾತಂತ್ರ್ಯವನ್ನು ಪಡೆದಿರುವ ಇಲಾಖೆಯು ಅಭಿವೃದ್ಧಿಯಿಂದ ಬಂದ ಲಾಭವನ್ನು ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು ಸಂಪತ್ತಿನ ಸಮಾನ ಹಂಚಿಕೆ ಮಾಡಬೇಕು ಎಂದು ತಿಳಿಸಿದರು.

> "ಪ್ರಾಕೃತಿಕ ವಿಪತ್ತುಗಳನ್ನು ಎದುರಿಸಲು ಸರ್ಕಾರ ಎಷ್ಟು ಜವಾಬ್ದಾರಿಯಾಗಿದೆಯೋ, ಸಾರ್ವಜನಿಕರೂ ಅಷ್ಟೇ ಜವಾಬ್ದಾರಿಯನ್ನು ಹೊಂದಿದ್ದಾರೆ. ನೆರಹಾವಳಿ, ಬರ ಮತ್ತು ಗುಡ್ಡಕುಸಿತದಂತಹ ಪ್ರಾಕೃತಿಕ ವಿಪತ್ತುಗಳು ಸಂಭವಿಸಿದಾಗ ಸರ್ಕಾರೇತರ ಸಂಸ್ಥೆಗಳು, ವಿವಿಧ ಸೇವಾ ಸಂಸ್ಥೆಗಳು ಸಂತ್ರಸ್ತರ ನೆರವಿಗೆ ಧಾವಿಸಬೇಕು. ಪ್ರಾಕೃತಿಕ ವಿಪತ್ತು ಎದುರಾದಂತಹ ಸಂದರ್ಭದಲ್ಲಿ ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಅಗತ್ಯವಾದ ರಕ್ಷಣಾ ಕ್ರಮಗಳ ಬಗ್ಗೆ ಜನರಿಗೆ ತರಬೇತಿ ಶಿಬಿರ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಸರ್ಕಾರ ಗ್ರಾಮೀಣ ಮಟ್ಟದಲ್ಲಿ ಹಮ್ಮಿಕೊಳ್ಳಬೇಕು. **–ಗುರುಚರಣ್ ಗೊಲ್ಲರಕೇರಿ**

ಪಂಚಾಯತ್ ರಾಜ್ ವ್ಯವಸ್ಥೆಯ ತತ್ವಗಳು ಪ್ರಾಯೋಗಿಕವಾಗಿ ಸಾಕಾರಗೊಳ್ಳಬೇಕಾದರೆ ಜನರ ಸಹಭಾಗಿತ್ವ ಬಹಳ ಮುಖ್ಯ. ಗ್ರಾಮ ಸಭೆಗಳು ಸಾರ್ವಜನಿಕ ಸಹಭಾಗಿತ್ವಕ್ಕೆ ದೊರೆತ ಅಮೂಲ್ಯ ಅವಕಾಶಗಳಾಗಿರುತ್ತವೆ. ಆದರೆ ಜನರ ಸಹಭಾಗಿತ್ವವನ್ನು ತಪ್ಪಿಸುವ ದುರುದ್ದೇಶದಿಂದಲೇ ಗ್ರಾಮ ಸಭೆಗಳನ್ನು ಮುಂದೂಡಲಾಗುತ್ತದೆ. ಮಹಿಳೆಯರ ಮತ್ತು ಮಕ್ಕಳ ಗ್ರಾಮ ಸಭೆಗಳು ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ಆದರೆ ಬಹುತೇಕ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಗ್ರಾಮಸಭೆಗಳನ್ನು ನಡೆಸುವುದೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ವಿಶ್ರಾಂತ ಡಿಜಿ ಮತ್ತು ಐಜಿ ಡಾ.ಎಸ್.ಟಿ.ರಮೇಶ್, ಮೈಸೂರು ಮುಕ್ತ ವೇದಿಕೆಯ ಸಂಚಾಲಕ ರವಿಜೋಶಿ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಜೆ.ಸೋಮಶೇಖರ್ ಉಪಸ್ಥಿತರಿದ್ದರು.

ಆರ್‌ಎಸ್‌ಎಸ್ ಕಚೇರಿಗೆ ನುಗ್ಗಿ ಪೊಲೀಸರ ದಾಂಧಲೆ ಆರೋಪ

ಪೊಲೀಸ್ ಠಾಣೆ ಮುಂಭಾಗ ಹಿಂದೂ ಸಂಘಟನೆ ಪ್ರತಿಭಟನೆ

ಡಿವೈಎಸ್ಪಿ, ಸರ್ಕಲ್ ಇನ್ಸ್‌ಪೆಕ್ಟರ್ ಅಮಾನತಿಗೆ ಆಗ್ರಹ

ಪಾಂಡವಪುರ,ಸೆ.16– ಪಟ್ಟಣದ ಆರ್‌ಎಸ್‌ಎಸ್ ಕಚೇರಿಗೆ ಪೊಲೀಸರು ನುಗ್ಗಿ ಸಂಘದ ಪ್ರಚಾರಕರು ಹಾಗೂ ಸ್ವಯಂ ಸೇವಕರನ್ನು ಎಳೆದಾಡಿ ದಾಂಧಲೆ ಮಾಡಿದ್ದಾರೆ ಎಂದು ಆರೋಪಿಸಿ ಆರ್‌ಎಸ್‌ಎಸ್ ಹಾಗೂ ಭಜರಂಗದಳ, ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಪಟ್ಟಣದ ಪೊಲೀಸ್ ಠಾಣೆ ಮುಂಭಾಗ ಪ್ರತಿಭಟನೆ ನಡೆಸಿದರು.

ಬೆಳಿಗ್ಗೆ 11 ಗಂಟೆಗೆ ಆಗಮಿಸಿದ ಕಾರ್ಯಕರ್ತರು ಠಾಣೆಯ ಮುಂಭಾಗ ಪೆಂಡಾಲ್ ಹಾಕಿಕೊಂಡು ಪ್ರತಿಭಟನೆ ನಡೆಸಿ ಡಿವೈಎಸ್ಪಿ ಮುರಳಿ ಹಾಗೂ ಪಾಂಡವಪುರ ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕಾನಂದ ಅವರನ್ನು ಸಸ್ಪಂಡ್ ಮಾಡುವಂತೆ ಆಗ್ರಹಿಸಿದರು. ಪ್ರತಿಭಟನಾ ಸ್ಥಳದಲ್ಲಿಯೇ ಅಡುಗೆ ಮಾಡಿ ಮಧ್ಯಾಹ್ನದ ಊಟವನ್ನು ಸಹ ಮಾಡುವ ಮೂಲಕ ಆಕ್ರೋಶ ಹೊರಹಾಕಿದರು. ಪ್ರತಿಭಟನಾ ಸ್ಥಳಕ್ಕೆ ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ್‌ನಾರಾಯಣ, ಮಾಜಿ ಸಚಿವ ಡಾ.ಕೆ.ಸಿ.ನಾರಾಯಣಗೌಡ ಸೇರಿದಂತೆ ಹಲವರು ಭೇಟಿಕೊಟ್ಟು ಪ್ರತಿಭಟನೆಗೆ ಸಾಥ್ ನೀಡಿದರು.

ಪಟ್ಟಣದಲ್ಲಿರುವ ಆರ್‌ಎಸ್‌ಎಸ್ ಕಚೇರಿಯಲ್ಲಿ ಕಾರ್ಯಕರ್ತರು ನಡೆಸುತ್ತಿರುವ ಸಭೆಯಲ್ಲಿ ಆರ್‌ಎಸ್‌ಎಸ್ ಪ್ರಚಾರಕರಾದ ಶರತ್ ಪಂಪೇಲ್ ಹಾಗೂ ಪುನೀತ್ ಭಾಗವಹಿಸಿದ್ದಾರೆ ಎಂಬ ಮಾಹಿತಿ ಮೇರೆಗೆ ಡಿವೈಎಸ್ಪಿ ಮುರುಳಿ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕಾನಂದ ಅವರು ಶೂ ಕಾಲಿನಲ್ಲಿಯೇ ಕಚೇರಿಗೆ ನುಗ್ಗಿ ಅಲ್ಲಿದ್ದ ಪ್ರಚಾರಕರು ಹಾಗೂ ಸ್ವಯಂ ಸೇವಕರನ್ನು ಎಳೆದಾಡಿ ದಾಂಧಲೆ ನಡೆಸಿದ್ದಾರೆ. ನೀವು ಹುಡುಕಿಕೊಂಡು ಬಂದಿರುವ ಶರತ್ ಪಂಪೇಲ್ ಹಾಗೂ ಪುನೀತ್ ಅವರು ಇಲ್ಲಿಲ್ಲ ಎಂದು ಹೇಳಿದರೂ ಕೇಳದೆ ಪೊಲೀಸರು ದಾಂಧಲೆ ನಡೆಸಿದ್ದಾರೆ ಎಂದು ಆಕ್ರೋಶ ಹೊರಹಾಕಿದರು.



ಪಾಂಡವಪುರ ಪಟ್ಟಣದ ಪೊಲೀಸ್ ಠಾಣೆ ಎದುರು ನಡೆದ ಆರ್‌ಎಸ್‌ಎಸ್ ಕಾರ್ಯಕರ್ತರ ಪ್ರತಿಭಟನೆಯಲ್ಲಿ ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವತ್‌ನಾರಾಯಣ, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಭಾಗವಹಿಸಿದ್ದರು.

ಪೊಲೀಸರು ನಡೆದುಕೊಂಡಿರುವ ಘಟನೆಯಿಂದ ಹಿಂದೂ ಕಾರ್ಯಕರ್ತರಿಗೆ ಸಾಕಷ್ಟು ನೋವುಂಟಾಗಿದೆ. ನಾವು ಇಲ್ಲಿಯವರೆಗೂ ಶಾಂತಿಯಿಂದ ಪ್ರತಿಭಟನೆ ನಡೆಸಿದ್ದೇವೆ. ಘಟನೆಗೆ ಕಾರಣರಾಗಿರುವ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವವರೆಗೂ ಪ್ರತಿಭಟನೆ ನಿಲ್ಲಿಸೋದಿಲ್ಲ ಎಂದು ಪಟ್ಟುಹಿಡಿದರು.

ಎಸ್ಪಿ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಭೇಟಿ ನೀಡಿ ಪ್ರತಿಭಟನಾಕಾರರೊಂದಿಗೆ ಚರ್ಚಿಸಿದರು, ಪ್ರಕರಣದ ಸಂಬಂಧ ನೀವು ನೀಡುವ ಲಿಖಿತ ಮನವಿಯನ್ನು ಸ್ವೀಕರಿಸಿ ಮೇಲಾಧಿಕಾರಿಗಳ ಗಮನಕ್ಕೆ ತಂದು ತನಿಖೆ ನಡೆಸಿ ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು. ಇದಕ್ಕೆ ಒಪ್ಪದ ಕಾರ್ಯಕರ್ತರು ಡಿವೈಎಸ್ಪಿ ಮುರುಳಿ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕಾನಂದ ಅವರನ್ನು, ಸಸ್ಪೆಂಡ್ ಮಾಡಬೇಕು, ಸಸ್ಪೆಂಡ್ ಮಾಡಲು ನಿಮಗೆ ಅಧಿಕಾರ ಇಲ್ಲ ಅಂದರೆ ನಿಮ್ಮ ಮೇಲಾಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸುವಂತೆ ಪಟ್ಟುಹಿಡಿದರು. ನಂತರ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಅವರು ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ, ಬಳಿಕ ಘಟನೆ ಸಂಬಂಧ ಡಿವೈಎಸ್‌ಪಿ ಮುರುಳಿ ಹಾಗೂ ಸರ್ಕಲ್ ಇನ್‌ಪೆಕ್ಟರ್ ವಿವೇಕನಾಂದ ಅವರನ್ನು ಬಂದೂ ಬಸ್ತ್‌ನಲ್ಲಿ ಬೇರೆಡೆಗೆ ನಿಯೋಜನೆ ಮಾಡಿ, ಪ್ರಕರಣದ ಬಗ್ಗೆ ತನಿಖೆಯನ್ನು ಹೊರ ಜಿಲ್ಲೆಯ ಪೊಲೀಸ್ ಅಧಿಕಾರಿಗಳಿಂದ ಸೂಕ್ತ ತನಿಖೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದ ಮೇರೆಗೆ ಪ್ರತಿಭಟನೆಯನ್ನು ವಾಪಸ್ಸು ಪಡೆಯಲಾಯಿತು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್, ಮೈಶುಗರ್ ಮಾಜಿ ಅಧ್ಯಕ್ಷ ಜೆ.ಶಿವಲಿಂಗೇಗೌಡ, ಮುಖಂಡರಾದ ಎಚ್.ಎನ್.ಮಂಜುನಾಥ್, ಭಜರಂಗದಳದ ಮಾರ್ಕಾಂಡಯ್ಯ, ಬಿಜೆಪಿ ಅಧ್ಯಕ್ಷ ಧನಂಜಯ, ಪುರಸಭೆ ಉಪಾಧ್ಯಕ್ಷ ಎಲ್.ಅಶೋಕ್, ಚಿಕ್ಕಮರಳಿ ನವೀನ್, ಡೈರಿ ರಾಮು, ನಿರಂಜನ್‌ಬಾಬು ಸೇರಿದಂತೆ ಹಲವಾರು ಹಿಂದೂ ಕಾರ್ಯಕರ್ತರು ಭಾಗವಹಿಸಿದ್ದರು.

ಕೆಆರ್‌ಎಸ್‌ನಲ್ಲಿ ಸರ್‌ಎಂವಿ ಜಯಂತಿ ಆಚರಣೆ



ಶ್ರೀರಂಗಪಟ್ಟಣ, ಸೆ.16– ಸರ್.ಎಂ.ವಿಶ್ವೇಶ್ವರಯ್ಯನವರು ಎಂದೂ ತಮ್ಮ ಸ್ವಾರ್ಥಕ್ಕಾಗಿ ಕೆಲಸ ಮಾಡಿದವರಲ್ಲ, ದೇಶದ ಅಭಿವೃದ್ಧಿ ಸಲುವಾಗಿ ಅನೇಕ ಜನಪರ ಕೆಲಸಗಳನ್ನು ಮಾಡಿದ್ದಾರೆ ಎಂದು ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ಜಯಂತ್ ಸ್ಮರಿಸಿದರು.

ತಾಲೂಕಿನ ಕೃಷ್ಣರಾಜಸಾಗರ ಅಣೆಕಟ್ಟೆ ಮುಖ್ಯದ್ವಾರದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಜಯಂತಿ ಅಂಗವಾಗಿ ಇಂಜಿನಿಯರ್ಸ್ ಡೇ ಆಚರಿಸಿ ಸರ್‌ಎಂವಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಪೂಜೆ ಸಲ್ಲಿಸಿ ನಂತರ ಮಾತನಾಡಿದರು.

ಸರ್.ಎಂ.ವಿಶ್ವೇಶ್ವರಯ್ಯ ಅವರ ವಿದ್ಯಾಭ್ಯಾಸದ ದಿನಗಳು, ಮಹಾರಾಷ್ಟ್ರದ ಪುಣೆಯಲ್ಲಿ ಅವರು ನಿರ್ಮಿಸಿರುವ ಸ್ವಯಂಚಾಲಿತ ಅಣೆಕಟ್ಟೆ ಗೇಟುಗಳ ನಿರ್ಮಾಣದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಡುವ ಅಗತ್ಯವಿದೆ. ಅವರು ದೂರದೃಷ್ಟಿಯುಳ್ಳವರಾಗಿದ್ದು, ಕಡು ಬಡತನದಿಂದ ವಿದ್ಯಾಭ್ಯಾಸ ಮುಗಿಸಿದರು. ನಂತರ ದೇಶದ ವಿವಿಧೆಡೆ ಕೆಲಸ ನಿರ್ವಹಿಸಿ ಮೆಚ್ಚುಗೆ ಪಡೆದರು ಎಂದು ಸ್ಮರಿಸಿದರು. ಈ ವೇಳೆ ಕೆಆರ್.ಸಾಗರ ಅಣೆಕಟ್ಟೆ ನಿರ್ವಹಣೆ ವಿಭಾಗದ ಸಹಾಯಕ ಕಾರ್ಯಪಾಲಕ ಫಾರೂಕ್ ಅಬು, ಗೇಜಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಕಿಶೋರ್ ಕುಮಾರ್ ಸೇರಿದಂತೆ ಇತರ ಅಧಿಕಾರಿಗಳು ಸರ್‌ಎಂವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

2025ರ ಫೆಬ್ರವರಿಯಲ್ಲಿ ಅದ್ಧೂರಿ ಬೂದನೂರು ಉತ್ಸವ

ಮಂಡ್ಯ: 2025ರ ಫೆಬ್ರವರಿಯಲ್ಲಿ 2ನೇ ವರ್ಷದ 'ಬೂದನೂರು ಉತ್ಸವ'ವನ್ನು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಶಾಸಕ ಪಿ.ರವಿಕುಮಾರ್ ಗೌಡ ಗಣಿಗ ತಿಳಿಸಿದರು.

ತಾಲೂಕಿನ ಹೊಸಬೂದನೂರು ಗ್ರಾಮದ ಹೊಯ್ಸಳರ ಕಾಲದ ಶ್ರೀ ಅನಂತ ಪದ್ಮನಾಭ ದೇವಾಲಯದಲ್ಲಿ ಸೋಮವಾರ ಶ್ರೀ ಅನಂತಪದ್ಮನಾಭಸ್ವಾಮಿ ಜನ್ಮದಿನದ ಪ್ರಯುಕ್ತ ನಡೆದ ವಿಶೇಷ ಪೂಜೆಯಲ್ಲಿ ಭಾಗವಹಿಸಿ, ದೇವರ ದರ್ಶನ ಪಡೆದು ಮಾತನಾಡಿದ ಅವರು, ಹೊಯ್ಸಳರ ಕಾಲದ 2 ಪುರಾತನ ದೇವಾಲಯಗಳಾದ ಶ್ರೀ ಕಾಶಿ ವಿಶ್ವನಾಥ ಹಾಗೂ ಶ್ರೀ ಅನಂತಪದ್ಮನಾಭಸ್ವಾಮಿ ದೇವಾಲಯಗಳು ಹೊಸಬೂದನೂರು ಗ್ರಾಮದಲ್ಲಿದ್ದು, ಅವುಗಳನ್ನು ಪ್ರವಾಸಿ ತಾಣಗಳನ್ನಾಗಿ ಮಾಡಲು ಕಳೆದ ಫೆಬ್ರವರಿಯಲ್ಲಿ ಬೂದನೂರು ಉತ್ಸವಕ್ಕೆ ಚಾಲನೆ ನೀಡಲಾಗಿದೆ ಎಂದರು.

'ಬೂದನೂರು ಉತ್ಸವ'ವನ್ನು ಸರ್ಕಾರದಿಂದಲೇ ಪ್ರತಿ ವರ್ಷ ಆಚರಿಸುವಂತೆ ಮಾಡಲಾಗಿದೆ. ನಾನಲ್ಲದೆ ಮುಂದೆ ಯಾರೇ ಶಾಸಕರಾದರೂ ಉತ್ಸವ ಮುಂದುವರಿಯಲಿದೆ. ಗ್ರಾಮದ ಪ್ರವೇಶದ್ವಾರದಲ್ಲಿ 'ಕಮಾನು' ನಿರ್ಮಿಸಲು 5 ಲಕ್ಷರೂ. ಅನುದಾನ ನೀಡಲಾಗುವುದು ಎಂದರು.

ಅಲ್ಲದೆ, ಗ್ರಾಮದ ರಸ್ತೆಗಳ ದುರಸ್ತಿ ಹಾಗೂ ಚರಂಡಿ ನಿರ್ಮಾಣಕ್ಕೆ ಗ್ರಾಮಸ್ಥರು ಮನವಿ ಮಾಡಿದ್ದು, ಶೀಘ್ರ ದುರಸ್ತಿ ಮಾಡಲಾಗುವುದು ಎಂದು ಭರವಸೆ ನೀಡಿದರು. ಇದೇ ಸಂದರ್ಭದಲ್ಲಿ ಶಾಸಕ ರವಿಕುಮಾರ್ ಗಣಿಗ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು.

ಈ ವೇಳೆ ಗ್ರಾಪಂ ಸದಸ್ಯ ಕೆಂಪರಾಜು, ಮುಖಂಡರಾದ ಶೇಖರ್, ಚಂದ್ರು, ರವಿ, ಜಯರಾಂ, ಮರಿಗೌಡ, ಬಿ.ಪಿ.ಹರೀಶ್, ಶಂಕರ್ ಇತರರಿದ್ದರು.

ಇಗ್ಗಲೂರು ಡ್ಯಾಮ್‌ನಲ್ಲಿ ಕಾಲುಜಾರಿ ಬಿದ್ದು ನೌಕರ ಸಾವು

ಭಾರತೀನಗರ, ಸೆ.16– ಇಲ್ಲಿಗೆ ಸಮೀಪದ ಎಸ್.ಐ.ಹಾಗಲಹಳ್ಳಿ ಗ್ರಾಮದ ನಿವಾಸಿ ಮಲ್ಲೇಶ್(50) ಎಂಬುವರು ಇಗ್ಗಲೂರು ಡ್ಯಾಮ್‌ನಲ್ಲಿ ಕಾಲುಜಾರಿ ಬಿದ್ದು ಮೃತಪಟ್ಟಿರುವ ಘಟನೆ ಜರುಗಿದೆ.



ಮೃತ ಮಲ್ಲೇಶ್ ಇಗ್ಗಲೂರು ಡ್ಯಾಮ್‌ನಲ್ಲಿ ನೌಕರನಾಗಿ ಕೆಲಸ ನಿರ್ವಹಿಸುತ್ತಿದ್ದು, ಭಾನುವಾರ ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಕಾಲು ಜಾರಿ ಡ್ಯಾಮ್‌ಗೆ ಬಿದ್ದು ಸಾವನ್ನಪ್ಪಿರಬಹುದೆಂದು ಶಂಕಿಸಲಾಗಿದೆ. ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ.

ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ಎಸ್.ಐ.ಹಾಗಲಹಳ್ಳಿ ಗ್ರಾಮದಲ್ಲಿ ಜರುಗಿದೆ. ಈ ಸಂಬಂಧ ಚನ್ನಪಟ್ಟಣ ತಾಲೂಕಿನ ಅಕ್ಕೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಧಿ ವಿಚಾರಧಾರೆಗಳು ಪ್ರತಿಫಲಿಸುವಂತೆ ಶಿಲ್ಪಕಲಾಕೃತಿಗೆ ಜೀವ ತುಂಬಬೇಕು

ಗಾಂಧಿ ಭವನದ ನಿರ್ದೇಶಕ ಪ್ರೊ.ಜಿ.ಬಿ.ಶಿವರಾಜು

ಮಂಡ್ಯ,ಸೆ.16– ಮಹಾತ್ಮ ಗಾಂಧೀಜಿ ಅವರ ತತ್ವ ಮತ್ತು ವಿಚಾರಧಾರೆಗಳು ಪ್ರತಿಫಲಿಸುವಂತೆ ಶಿಲ್ಪಕಲಾಕೃತಿಗಳಿಗೆ ಜೀವ ತುಂಬಬೇಕು. ಗಾಂಧೀಜಿಯವರ ಕುರಿತ ತಮ್ಮ ಭಾವನೆಗಳಿಗೆ ಕಲಾವಿದರು ಮೂರ್ತರೂಪ ನೀಡಬೇಕು ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಭವನದ ನಿರ್ದೇಶಕ ಪ್ರೊ.ಜಿ.ಬಿ.ಶಿವರಾಜು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಹಾಗೂ ಮಹಾತ್ಮಗಾಂಧಿ ಸ್ಮಾರಕ ಟ್ರಸ್‌ನಿಂದ ಮಂಡ್ಯ ತಾಲೂಕು ಎಚ್.ಮಲ್ಲಿಗೆರೆ ಗ್ರಾಮದ 'ಗಾಂಧಿ ಗ್ರಾಮ'ದಲ್ಲಿ ಆಯೋಜಿಸಿದ್ದ ಗಾಂಧೀಜಿಯವರ ವ್ಯಕ್ತಿ ವಿಚಾರ ಬಿಂಬಿಸುವ ಸಿಮೆಂಟ್ ಶಿಲ್ಪಕಲಾಕೃತಿಗಳ ನಿರ್ಮಾಣ ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಸಾವಿರಾರು ವರ್ಷಗಳ ಇತಿಹಾಸವಿರುವ ಈ ನೆಲದ ಸಂಸ್ಕೃತಿ ಶ್ರೀಮಂತಿಕೆಯನ್ನು ಗಟ್ಟಿಗೊಳಿಸುವಲ್ಲಿ ಶಿಲ್ಪಕಲೆಗಳು ಮಹತ್ವದ ಪಾತ್ರವಹಿಸಿವೆ. ಶಿಲ್ಪಕಲಾಕೃತಿಗಳು ಉತ್ತಮವಾಗಿ ಮೂಡಿ ಬಂದರೆ ಅದರ ಸಂಪೂರ್ಣ ಶ್ರೇಯಸ್ಸು ಕಲಾವಿದರಿಗೆ ಸಲ್ಲುತ್ತದೆ. ಶಿಲ್ಪಕಲಾ ಕೃತಿಗಳ ಮೂಲಕ ಕಲಾವಿದರೂ ಕೂಡ ನೂರಾರು ವರುಷ ಬದುಕಿರುತ್ತಾರೆ ಎಂದು ಹೇಳಿದರು.



ಇತ್ತೀಚಿನ ದಿನಗಳಲ್ಲಿ ಸರ್ಕಾರ ಜಿಲ್ಲೆಗೊಂದು 'ಗಾಂಧಿ ಭವನ' ಸ್ಥಾಪಿಸುತ್ತಿದೆ. ಆದರೆ, ಜಿ.ಮಾದೇಗೌಡರು ಮೊದಲೇ ಮಂಡ್ಯ 'ಗಾಂಧಿ ಭವನ' ಸ್ಥಾಪಿಸಿದ್ದರು. ಇದು ಮಾದೇಗೌಡರ ದೂರದೃಷ್ಟಿತ್ವಕ್ಕೆ ಸಾಕ್ಷಿ. ಮುಂದಿನ ದಿನಗಳಲ್ಲಿ 'ಗಾಂಧಿ ಗ್ರಾಮ' ಎಲ್ಲರೂ ನೋಡುವಂತ ಆಕರ್ಷಣೀಯ ಕೇಂದ್ರವಾಗಿ ಮಾರ್ಪಾಡು ಆಗಲಿದೆ ಎಂದರು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ, ಶಿಲ್ಪಿ ಎಂ.ಸಿ.ರಮೇಶ್ ಮಾತನಾಡಿ, ಶಿಲ್ಪ ಕಲಾಕೃತಿಗಳ ನಿರ್ಮಾಣ ಮಾಡುವ ಸಂಬಂಧ ಹೆಚ್ಚು ಹೆಚ್ಚು ಶಿಬಿರಗಳನ್ನು ನಾಡಿನಾದ್ಯಂತ ಏರ್ಪಡಿಸಲು ಅಕಾಡೆಮಿ ವತಿಯಿಂದ ಯೋಜನೆ ರೂಪಿಸಲಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿದರು.

ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ ಅಧ್ಯಕ್ಷರೂ ಆದ ಶಾಸಕ ಮಧು ಜಿ.ಮಾದೇಗೌಡ ಮಾತನಾಡಿ, ಗಾಂಧಿ ಗ್ರಾಮದಲ್ಲಿ ಈಗಾಗಲೇ ರೂ. 3.5 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆ. ಗಾಂಧೀಜಿ ಅವರ ಮೌಲ್ಯಯುತ ಚಿಂತನೆಗಳನ್ನು ನಾಡಿನಾದ್ಯಂತ ಪಸರಿಸುವ ದೃಷ್ಟಿಯಿಂದ 'ಗಾಂಧಿ ಗ್ರಾಮ'ವನ್ನು ಮಾದರಿಯಾಗಿ ರೂಪಿಸಲಾಗುವುದು ಎಂದು ಹೇಳಿದರು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ರಿಜಿಸ್ಟ್ರಾರ್ ಆರ್.ಚಂದ್ರಶೇಖರ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಶಿಬಿರದ ನಿರ್ದೇಶಕ ಕೆ.ನಾರಾಯಣರಾವ್, ಅಕಾಡೆಮಿ ಸದಸ್ಯ, ಶಿಬಿರದ ಸಂಚಾಲಕ ವೈಕುಮಾರ್, ಮಹಾತ್ಮಗಾಂಧಿ ಸ್ಮಾರಕ ಟ್ರಸ್ಟ್‌ನ ಬಿ.ಬಸವರಾಜು, ಅಂಜನಾ ಶ್ರೀಕಾಂತ್, ಎಂ.ರಾಜಣ್ಣ ಎಚ್.ಮಲ್ಲಿಗೆರೆ ಗ್ರಾಪಂ ಉಪಾಧ್ಯಕ್ಷೆ ಬಿ.ಜೆ.ಭಾಗ್ಯಮ್ಮ, ಮಾಜಿ ಅಧ್ಯಕ್ಷ ಎಂ.ರಮೇಶ್ ಹಾಜರಿದ್ದರು.

ವಿನಾಯಕನಗರದಲ್ಲಿ ಅದ್ಧೂರಿ ರಥೋತ್ಸವ; ಗಣಪತಿ ಉತ್ಸವಮೂರ್ತಿ ಮೆರವಣಿಗೆ

ಮೈಸೂರು,ಸೆ.16(ಪಿಎಂ)– ಪಡುವಾರಹಳ್ಳಿ ವಿನಾಯಕನಗರದ 6ನೇ ಮುಖ್ಯ ರಸ್ತೆಯ ಶ್ರೀವಿದ್ಯಾಗಣಪತಿ ದೇವಸ್ಥಾನ ಹಾಗೂ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಿಂದ ಸೋಮವಾರ ಇಲ್ಲಿನ ಪ್ರಮುಖ ರಸ್ತೆಗಳಲ್ಲಿ ಗಣಪತಿ ಉತ್ಸವ ಮೂರ್ತಿ ರಥೋತ್ಸವ ಅದ್ಧೂರಿಯಾಗಿ ನೆರವೇರಿತು.

ಇಲ್ಲಿನ ಶ್ರೀ ವಿದ್ಯಾಗಣಪತಿ ದೇವಸ್ಥಾನ ಹಾಗೂ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಟ್ರಸ್ಟ್‌ನಿಂದ ಗೌರಿ ಗಣೇಶ ಹಬ್ಬ ಹಾಗೂ 44ನೇ ವಾರ್ಷಿಕೋತ್ಸವದ ಪೂಜಾ ಮಹೋತ್ಸವದ ಪ್ರಯುಕ್ತ ನಡೆದ ರಥೋತ್ಸವದಲ್ಲಿ ಭಕ್ತ ಸಮೂಹ ಭಾಗ ವಹಿಸಿ ಭಕ್ತಿಭಾವ ಮೆರೆಯಿತು.



ಮೈಸೂರಿನ ಪಡುವಾರಹಳ್ಳಿಯ ವಿನಾಯಕನಗರದಲ್ಲಿ ಸೋಮವಾರ ಗಣಪತಿ ಉತ್ಸವ ಮೂರ್ತಿ ರಥೋತ್ಸವ ಜರುಗಿತು.

ರಥದಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶನ ಉತ್ಸವ ಮೂರ್ತಿಗೆ ಪುಷ್ಪ ನಮನ ಸಲ್ಲಿಸಿ ಹಾಗೂ ಪೂಜಾ ವಿಧಿವಿಧಾನ ನೆರವೇರಿಸಿ, ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಮಂಗಳವಾದ್ಯ ಹಾಗೂ ಬ್ಯಾಂಡ್‌ಸೆಟ್ ಸಂಗೀತ ಹಾಗೂ ತಮಟೆಯ ಸದ್ದಿನೊಂದಿಗೆ ರಥೋತ್ಸವ ಸಾಗಿತು. ಈ ವೇಳೆ ವಿನಾಯಕ ನಗರದ ಜನತೆ ಉತ್ಸವ ಮೂರ್ತಿ ದರ್ಶನ ಪಡೆದು ಭಕ್ತಿಯ ಪರಾಕಾಷ್ಠೆ ಮೆರೆದರು.

ಪುಷ್ಪಗಳಿಂದ ಶೃಂಗಾರಗೊಂಡ ಮರದ ರಥವನ್ನು ಎತ್ತುಗಳು ಎಳೆದು ಸಾಗಿದವು. ಪೂಜಾ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಕಲಾಪ್ರದರ್ಶನದ ಮೂಲಕ ರಥೋತ್ಸವಕ್ಕೆ ಮತ್ತಷ್ಟು ಮೆರಗು ನೀಡಿದವು. ರಥೋತ್ಸವದ ಬಳಿಕ ಗಣೇಶ ಹಬ್ಬದ ಪ್ರಯುಕ್ತ ಇಲ್ಲಿನ ಶ್ರೀ ವಿದ್ಯಾಗಣಪತಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ್ದ ಗಣಪತಿಯ ವಿಸರ್ಜನೆ ಕಾರ್ಯಕ್ರಮ ಜರುಗಿತು. ಬಳಿಕ 90 ಕೆಜಿಯಲ್ಲಿ ಸಿದ್ಧಪಡಿಸಿದ್ದ ರವೆ ವಾಂಕಿಬಾತ್ ಅನ್ನು ಭಕ್ತರಿಗೆ ವಿತರಣೆ ಮಾಡಲಾಯಿತು.

ದೇವಸ್ಥಾನ ಟ್ರಸ್ಟ್‌ನ ಗೌರವಾಧ್ಯಕ್ಷ ಪ್ರೊ.ಎಂ.ರಾಮಚಂದ್ರು 'ಮಿತ್ರ'ನೊಂದಿಗೆ ಮಾತನಾಡಿ, ಪ್ರತಿವರ್ಷ ಗಣೇಶನ ಪ್ರತಿಷ್ಠಾಪನೆ ಮಾಡುತ್ತೇವೆ. ಆದರೆ ಎರಡು ವರ್ಷಕ್ಕೊಮ್ಮೆ ಗಣೇಶನ ಉತ್ಸವ ಮೂರ್ತಿಯನ್ನು ರಥೋತ್ಸವದ ಮೂಲಕ ಮೆರವಣಿಗೆ ಮಾಡುತ್ತೇವೆ. ಗಣೇಶನ ಹಬ್ಬದಂದು 8 ಸಾವಿರ ಮಂದಿಗೆ ಹೋಳಿಗೆ ಊಟ ಉಣಬಡಿಸಲಾಯಿತು ಎಂದರು. ಟ್ರಸ್ಟ್‌ನ ಅಧ್ಯಕ್ಷ ಬಿ.ಮಂಜುನಾಥ, ಕೋಶಾಧ್ಯಕ್ಷ ಎನ್.ಮಹದೇವ್, ಉಪಾಧ್ಯಕ್ಷ ಟಿ.ಸೋಮಣ್ಣ, ಸಂಘಟನಾ ಕಾರ್ಯದರ್ಶಿ ಎಂ.ನಟರಾಜ್, ಸಹ ಕಾರ್ಯದರ್ಶಿ ಕೆ.ಕೃಷ್ಣ ಸೇರಿದಂತೆ ವಿನಾಯಕನಗರದ ಜನತೆ ಹಾಜರಿದ್ದರು.


ಮೈಸೂರಲ್ಲಿ ಈದ್–ಮಿಲಾದ್ ಸಡಗರ–ಸಂಭ್ರಮದ ಆಚರಣೆ

ಹಬ್ಬ ಆಚರಣೆಯ ಸದುದ್ದೇಶ ಅರ್ಥಪೂರ್ಣವಾಗಿ ವಿವರಿಸಿದ ಶಾಸಕ ತನ್ವೀರ್ ಸೇಠ್

ಮೈಸೂರು, ಸೆ.16(ಎಂಕೆ)– ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮಿಲಾದ್ ಪಾರ್ಕ್‌ನಲ್ಲಿ ಈದ್–ಮಿಲಾದ್ ಹಬ್ಬವನ್ನು ಅತ್ಯಂತ ಸಡಗರ–ಸಂಭ್ರಮ ದಿಂದ ಆಚರಿಸಲಾಯಿತು.

ಸೆಂಟ್ರಲ್ ಮಿಲಾದ್ ಕಮಿಟಿ, ಮೈಸೂರು ವತಿಯಿಂದ ಆಯೋಜಿಸಿದ್ದ ಹಬ್ಬದ ಸಂಭ್ರಮಾಚರಣೆಯಲ್ಲಿ ನೆರೆದಿದ್ದ ಸಾವಿರಾರು ಸಂಖ್ಯೆ ಮುಸ್ಲಿಂ ಬಾಂಧವರು ಪರಸ್ಪರ ಶುಭಾಷಯ ಕೋರಿ, ಸಿಹಿ ಹಂಚಿ ತಂಪು ಪಾನಿಯ ವಿತರಿಸಿ ಸಂಭ್ರಮಿಸಿದರು. ಮಿಲಾದ್ ಪಾರ್ಕ್‌ನ ಮಧ್ಯದಲ್ಲಿರುವ ಕಾರಂಜಿ ಬಳಿ ನಿಂತು ಫೋಟೋ ಕ್ಲಿಕ್ಕಿಸಿಕೊಂಡರಲ್ಲದೆ ವಿವಿಧ ಬಗೆಯ ತಿಂಡಿ–ತಿನಿಸು ಸವಿದರು.

ಇದಕ್ಕೂ ಮುನ್ನ ಅಜೀಜ್ ಸೇಠ್‌ನಗರ, ರಾಜೀವ್‌ನಗರ, ಶಾಂತಿನಗರ, ಅಲೀಂ ನಗರ ಸೇರಿದಂತೆ ನಗರದ ವಿವಿಧ ಮಸೀದಿಗಳಿಂದ ಪ್ರವಾದಿ ಮಹಮ್ಮದರ 60ಕ್ಕೂ ಹೆಚ್ಚು ಸ್ತಬ್ಧ ಚಿತ್ರಗಳು ಆಗಮಿಸಿದವು. ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಪುಟಾಣಿ ಮಕ್ಕಳು ಭಕ್ತಿ ಗೀತೆಗಳನ್ನು ಹಾಡಿ ಎಲ್ಲರ ಗಮನ ಸೆಳೆದರು.



ಮಿಲಾದ್ ಪಾರ್ಕ್‌ನಲ್ಲಿ ನಡೆದ ಈದ್–ಮಿಲಾದ್ ಹಬ್ಬದ ಸಂಭ್ರಮಾಚರಣೆಯಲ್ಲಿ ಮುಸ್ಲಿಂ ಧರ್ಮಗುರುಗಳನ್ನು ಗೌರವಿಸಲಾಯಿತು. ಮೈಸೂರು ಸರ್ಖಾಜಿ ಮೊಹಮ್ಮದ್ ಉಸ್ಮಾನ್ ಷರೀಫ್, ಶಾಸಕ ತನ್ವೀರ್ ಸೇಠ್ ಮತ್ತಿತರರಿದ್ದರು

ನಂತರ ಮುಸ್ಲಿಂ ಧರ್ಮ ಗುರುಗಳನ್ನು ಅತ್ಯಂತ ಆತ್ಮೀಯವಾಗಿ ಗೌರವಿಸಲಾಯಿತು. ಈ ವೇಳೆ ನೆರೆದಿದ್ದವರನ್ನುದ್ದೇಶಿಸಿ ಮಾತನಾಡಿದ ಶಾಸಕ ತನ್ವೀರ್ ಸೇಠ್, ಪ್ರವಾದಿ ಮಹಮ್ಮದರ ತತ್ವ–ಸಿದ್ಧಾಂತಗಳಾದ ಶಾಂತಿ, ಕರುಣೆ, ಪ್ರೀತಿ, ಸಾಮರಸ್ಯದ ಗುಣಗಳನ್ನು ಯುವ ಸಮೂಹ ಮೈಗೂಡಿಸಿಕೊಂಡು ನಡೆದಾಗ ಇಂತಹ ಮಹಾನ್ ವ್ಯಕ್ತಿಗಳ ಜಯಂತಿ ಆಚರಣೆ ಅರ್ಥಪೂರ್ಣವಾಗಲು ಸಾಧ್ಯವಿದೆ ಎಂದರು.

ಮಿಲಾದ್ ಅಂದರೆ ಹುಟ್ಟು, ಪ್ರವಾದಿ ಮಹಮ್ಮದರ ಹುಟ್ಟಿದ ದಿನವನ್ನು ಹಬ್ಬವನ್ನಾಗಿ ಆಚರಣೆ ಮಾಡಲಾಗುತ್ತದೆ. ಮನೆ, ಮಸೀದಿಗಳ ಅಲಂಕಾರ ವಿಶೇಷವಾಗಿರುತ್ತದೆ. ಹೀಗಾಗಿ ಹಲವರು ಮದರಸಾಗಳಲ್ಲಿ ಮಕ್ಕಳಿಗೆ ಹಾಗೂ ಬಡ ಜನರಿಗೆ ಬಟ್ಟೆದಾನ ಮಾಡಲಾಗುತ್ತದೆ. ಹಬ್ಬದ ಆಚರಣೆಯ ಉದ್ದೇಶ ಪರಸ್ಪರ ಸಹೋದರತೆ, ಪರಧರ್ಮ ಸಹಿಷ್ಣುತೆ, ಮಾನವೀಯ ಮೌಲ್ಯಗಳನ್ನು ತಿಳಿಸುವುದಾಗಿದೆ ಎಂದು ಹೇಳಿದರು.

ಮೈಸೂರು ಸರ್ಖಾಜಿ ಮೊಹಮ್ಮದ್ ಉಸ್ಮಾನ್ ಷರೀಫ್, ಮುಸ್ಲಿಂ ಧರ್ಮ ಗುರುಗಳಾದ ಮೌಲಾನಾ ಸೈಯದ್ ಶಿಹಾಬುದ್ದೀನ್ ಸಾಹೇಬ್ ನದ್ವಿ ಅಲಿಜನಾಬ್ ಮುಹಮ್ಮದ್ ಕುಂಞಿ ಸಾಹೇಬ್, ಮೊಹಮ್ಮದ್ ಜಾಫರ್ ಸಾಹೇಬ್ ಸಿದ್ದಿಕಿ, ಮೌಲಾನಾ ಮುಫ್ತಿ ಸಬೀಲ್ ಅಹ್ಮದ್ ಸಾಹೇಬ್, ಮುಖಂಡರಾದ ಅಬ್ದುಲ್ ಅಜೀಜ್ ಚಂದ್ ಸಾಹೇಬ್, ಅಮೀನು ಲಿಯಾಖಾನ್ ಮತ್ತಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಫೈನಲ್‌ಗೇರಿದ ಹಾಲಿ ಚಾಂಪಿಯನ್ ಭಾರತ

ಇದೇ ಮೊದಲ ಬಾರಿಗೆ ಫೈನಲ್ ಸುತ್ತಿಗೆ ಅರ್ಹತೆ ಪಡೆದು ಕೊಂಡಿದೆ. ಚೀನಾದ ಹುಲುನ್‌ಬೀರ್ ನಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಟೀಂ ಇಂಡಿಯಾ ಮೊದಲ ದಿನದಿಂದ ಸೆಮಿಫೈನಲ್‌ವರೆಗೂ ಅಮೋಘ ಪ್ರದರ್ಶನ ನೀಡಿತು. ಲೀಗ್ ಹಂತದ ಎಲ್ಲಾ 5 ಪಂದ್ಯಗಳನ್ನು ಗೆದ್ದು, ಸೆಮಿಫೈನಲ್‌ಗೇರಿದ್ದ ಟೀಂ ಇಂಡಿಯಾ ಆರನೇ ಪಂದ್ಯವನ್ನೂ ಸುಲಭವಾಗಿ ಗೆದ್ದುಕೊಂಡಿತು. ದಕ್ಷಿಣ ಕೊರಿಯಾ ವಿರುದ್ಧದ ಈ ಪಂದ್ಯದಲ್ಲಿ ಮೊದಲ ಕ್ವಾರ್ಟರ್‌ನಿಂದಲೇ ಗೋಲು ಗಳಿಸಲು ಆರಂಭಿಸಿದ ಭಾರತ ತಂಡ ಮೂರನೇ ಕ್ವಾರ್ಟರ್‌ನ ಅಂತ್ಯಕ್ಕೆ 4–1 ಅಂತರದ ಮುನ್ನಡೆ ಸಾಧಿಸಿತ್ತು.

ಭಾರತ ತಂಡದ ಆಕ್ರಮಣಕಾರಿ ಆಟ: ಮೊದಲ ಕ್ವಾರ್ಟರ್ ಮುಗಿಯುವ ಮುನ್ನವೇ ಉತ್ತಮ್ ಸಿಂಗ್ 13ನೇ ನಿಮಿಷದಲ್ಲಿ ಟೀಂ ಇಂಡಿಯಾ ಪರ ಮೊದಲ ಗೋಲು ಗಳಿಸಿ 1–0 ಮುನ್ನಡೆ ತಂದುಕೊಟ್ಟರು. ಎರಡನೇ ಕ್ವಾರ್ಟರ್‌ನಲ್ಲಿಯೂ ಪಂದ್ಯದ 19ನೇ ನಿಮಿಷದಲ್ಲಿ ನಾಯಕ ಹರ್ಮನ್‌ಪ್ರೀತ್ ಪೆನಾಲ್ಟಿ ಕಾರ್ನರ್ ಅನ್ನು ಗೋಲಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾದರು. ಮೂರನೇ ಕ್ವಾರ್ಟರ್‌ನಲ್ಲಿ ಪಂದ್ಯದ 32ನೇ ನಿಮಿಷದಲ್ಲಿ ಜರ್ಮನ್‌ಪ್ರೀತ್ ಸಿಂಗ್ ಗೋಲು ದಾಖಲಿಸಿದರು. ಇತ್ತ ಮೂರನೇ ಕ್ವಾರ್ಟರ್‌ನಲ್ಲಿ ಗೋಲುಗಳ ಖಾತೆ ತೆರೆದ ಕೊರಿಯಾ ಪರ ಯಾಂಗ್ ಜಿಹುನ್ 33ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ದಾಖಲಿಸಿದರು. ಈ ಕ್ವಾರ್ಟರ್‌ನ ಕೊನೆಯ ನಿಮಿಷದಲ್ಲಿ ಹರ್ಮನ್‌ಪ್ರೀತ್ ಮತ್ತೊಮ್ಮೆ ಗೋಲು ಬಾರಿಸುವ ಮೂಲಕ ಗೆಲುವಿನ ರೂವಾರಿಯಾದರು. ಕೊನೆಯ ಕ್ವಾರ್ಟರ್‌ನಲ್ಲಿ ಯಾವುದೇ ಗೋಲು ದಾಖಲಾಗಲಿಲ್ಲ. ಅಂತಿಮವಾಗಿ ಭಾರತ ತಂಡ 4–1 ಗೆಲುವಿನೊಂದಿಗೆ ಕೊರಿಯಾವನ್ನು ಮಣಿಸಿ ಫೈನಲ್ ತಲುಪಿತು.

ಡೊನಾಲ್ಡ್ ಟ್ರಂಪ್ ಹತ್ಯೆಗೆ ಯತ್ನ

ಸಂಬಂಧ ಒಬ್ಬ ವ್ಯಕ್ತಿಯನ್ನು ಬಂಧಿಸಿದ್ದಾರೆ ಡೊನಾಲ್ಡ್ ಟ್ರಂಪ್ ಅವರು ಗಾಲ್ಫ್ ಆಡುತ್ತಿದ್ದ ಸ್ಥಳದಿಂದ ಸರಿಸುಮಾರು 400 ಗಜಗಳಷ್ಟು ದೂರದಲ್ಲಿ ಪೊದೆಯಲ್ಲಿ ಎಕೆ ಶೈಲಿಯ ರೈಫಲ್ ಇರುವುದನ್ನು ಅಮೆರಿಕದ ಸೀಕ್ರೇಟ್ ಸರ್ವಿಸ್ ಪತ್ತೆಹಚ್ಚಿದೆ. ಏಜೆಂಟ್ ಗುಂಡು ಹಾರಿಸಿದಾಗ ಬಂದೂಕುಧಾರಿ ರೈಫಲ್ ಅನ್ನು ಕೆಳಗಿಟ್ಟು ಎಸ್‌ಯುವಿಯಲ್ಲಿ ಪರಾರಿಯಾಗಿದ್ದಾನೆ, ಎರಡು ಬ್ಯಾಕ್‌ಪ್ಯಾಕ್‌ಗಳು, ಗುರಿಗಾಗಿ ಬಳಸಲಾದ ಸ್ಕೋಪ್ ಮತ್ತು ಗೋಪ್ರೊ ಕ್ಯಾಮೆರಾದೊಂದಿಗೆ ಬಂದೂಕನ್ನು ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ ಕಳೆದ ಜುಲೈ 13 ರಂದು, ಪೆನ್ಸಿಲ್ವೇನಿಯಾದ ಬಟ್ಲರ್‌ನಲ್ಲಿ ನಡೆದ ಚುನಾವಣಾ ರ್ಯಾಲಿ ವೇಳೆ ಡೊನಾಲ್ಡ್ ಟ್ರಂಪ್ ಮೇಲೆ ಗುಂಡು ಹಾರಿಸಲಾಗಿತ್ತು, ಅವರ ಅವರ ಕಿವಿ ಪಕ್ಕದಲ್ಲಿ ಹಾದುಹೋಗಿ ರಕ್ತ ಸುರಿಯಿತು.

ಈ ಘಟನೆ ನಡೆದ ಸ್ವಲ್ಪ ದಿನಕ್ಕೆ ಡೆಮಾಕ್ರಟಿಕ್ ಪಕ್ಷದ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಅಮೆರಿಕ ಅಧ್ಯಕ್ಷೀಯ ಚುನಾವಣಾ ಸ್ಪರ್ಧೆಯಿಂದ ಹಿಂದೆ ಸರಿದು ಕಮಲಾ ಹ್ಯಾರಿಸ್ ಅವರನ್ನು ಅಭ್ಯರ್ಥಿ ಎಂದು ಘೋಷಿಸಲಾಯಿತು.

ವಿಶ್ವದಲ್ಲೇ ಅತೀ ಹೆಚ್ಚು ಸದಸ್ಯರುಳ್ಳ ಏಕೈಕ ರಾಜಕೀಯ ಪಕ್ಷ ಬಿಜೆಪಿ

● ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ವಿಜಯ ರಾಹಟ್ಕರ್ ಬಣ್ಣನೆ ● ಬಿಜೆಪಿ ಸದಸ್ಯತ್ವ ಅಭಿಯಾನ ಸಂಬಂಧ ಮುಖಂಡರ ಸಭೆ

ಮೈಸೂರು, ಸೆ.16(ಎಂಕೆ)– ರಾಷ್ಟ್ರೀಯತೆ, ಅಂತ್ಯೋದಯ ವಿಚಾರಧಾರೆಯಿಂದ ಸಂಘಟಿತವಾಗಿರುವ ಭಾರತೀಯ ಜನತಾ ಪಾರ್ಟಿ(ಬಿಜೆಪಿ), ವಿಶ್ವದಲ್ಲಿಯೇ ಅತೀ ಹೆಚ್ಚು ಸದಸ್ಯರಿರುವ ಏಕೈಕ ರಾಜಕೀಯ ಪಕ್ಷವಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿಯೂ ಆದ ರಾಜ್ಯ ಸದಸ್ಯತ್ವ ಅಭಿಯಾನ ಉಸ್ತುವಾರಿ ವಿಜಯ ರಾಹಟ್ಕರ್ ಹೇಳಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ವಿ.ಕೆ.ಫಂಕ್ಷನ್ ಹಾಲ್‌ನಲ್ಲಿ ಬಿಜೆಪಿ ಮೈಸೂರು ನಗರ ಮತ್ತು ಗ್ರಾಮಾಂತರ ವಿಭಾಗದ ವತಿಯಿಂದ ಸದಸ್ಯತ್ವ ಅಭಿಯಾನದ ಅಂಗವಾಗಿ ಆಯೋಜಿಸಿದ್ದ ಜಿಲ್ಲಾ ಪ್ರಮುಖರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಬಿಜೆಪಿ ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವಾಗಿದೆ. 2015ರ ಸದಸ್ಯತ್ವ ನೋಂದಣಿ ಪ್ರಕಾರ ಬಿಜೆಪಿ ದೇಶದಲ್ಲಿ 11 ಕೋಟಿ ಸದಸ್ಯರನ್ನು ಹೊಂದಿದೆ ಎಂದರು.

ಪಕ್ಷವು ಪ್ರತೀ 5 ವರ್ಷಗಳಿಗೊಮ್ಮೆ ಸದಸ್ಯತ್ವ ನವೀಕರಣ ಹಾಗೂ ಹೊಸ ಸದಸ್ಯರ ನೋಂದಣಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಹೊಸಬರಿಗೆ ಸದಸ್ಯತ್ವ ನೀಡುವ ಮುನ್ನ ನಿಮ್ಮ ಸದಸ್ಯತ್ವದ ನವೀಕರಣ ಮಾಡಿಕೊಳ್ಳಿ. ಎಲ್ಲಾ ಮುಖಂಡರು ತಮ್ಮ ಕುಟುಂಬಸ್ಥರು, ಸ್ನೇಹಿತರಿಗೂ ಬಿಜೆಪಿ ಸದಸ್ಯತ್ವ ನೀಡಿ. ಈ ಬಾರಿ ದೇಶದಲ್ಲಿ 18 ಕೋಟಿ ಸದಸ್ಯತ್ವ ನೀಡುವ ಗುರಿ ಪಕ್ಷ ಹೊಂದಿದ್ದು, ಇದರ ಯಶಸ್ಸಿಗೆ ಕಾರ್ಯಪ್ರವೃತ್ತರಾಗಿ ಎಂದು ಕರೆ ನೀಡಿದರು.



ಸದಸ್ಯತ್ವ ಅಭಿಯಾನದ ಜಿಲ್ಲಾ ಮುಖಂಡರ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ವಿಜಯ ರಾಹಟ್ಕರ್ ಮಾತನಾಡಿದರು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಶಾಸಕ ಟಿ.ಎಸ್.ಶ್ರೀವತ್ಸ ಮತ್ತಿತರರಿದ್ದರು.

ಈಗಾಗಲೇ ಪ್ರಧಾನಿ ಮೋದಿಯವರು ಸದಸ್ಯತ್ವ ನೋಂದಣಿ ಮಾಡಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ಬೂತ್ ಮಟ್ಟದಲ್ಲಿ ಕನಿಷ್ಠ 400 ಹಾಗೂ ಪ್ರತೀ ವಿಧಾನಸಭಾ ಕ್ಷೇತ್ರದಲ್ಲಿಯೂ 1 ಲಕ್ಷಕ್ಕೂ ಅಧಿಕ ಸದಸ್ಯತ್ವ ಮಾಡುವ ಗುರಿ ನೀಡಲಾಗಿದೆ. ನನಗೆ ಕರ್ನಾಟಕ, ಛತ್ತೀಸ್‌ಗಡ ಸೇರಿದಂತೆ ಕೆಲವು ರಾಜ್ಯಗಳ ಉಸ್ತುವಾರಿ ನೀಡಿದ್ದು, ಕರ್ನಾಟಕದ ಸದಸ್ಯತ್ವ ಅಭಿಯಾನವನ್ನು ಮೊದಲು ಮೈಸೂರು ನಗರದಿಂದ ಆರಂಭಿಸುತ್ತಿದ್ದೇನೆ. ದೇಶದಲ್ಲಿಯೇ ಕರ್ನಾಟಕ ಅತೀ ಹೆಚ್ಚು ಸದಸ್ಯರನ್ನೊಳಗೊಂಡ ರಾಜ್ಯವಾಗಬೇಕಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಹೆಚ್ಚೆಚ್ಚು ಜನರಿಗೆ ಪಕ್ಷದ ಸದಸ್ಯತ್ವ ನೀಡಿ ಎಂದು ಸೂಚಿಸಿದರಲ್ಲದೆ ವಾಗ್ದಾನ ಪಡೆದರು.

ಸಭೆಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಹರ್ಷವರ್ಧನ್, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ಮಾಜಿ ಮೇಯರ್ ಶಿವಕುಮಾರ್, ರಾಜ್ಯ ಸದಸ್ಯತ್ವ ಅಭಿಯಾನದ ಸಹ ಪ್ರಮುಖ್ ವಿಜಯಲಕ್ಷ್ಮಿ ಆನಂದ್, ಸಹ ಸಂಯೋಜಕ ಎನ್.ವಿ.ಫಣೀಶ್, ಜಿಲ್ಲಾ ಪ್ರಭಾರಿ ಮಂಗಳ ಸೋಮಶೇಖರ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ಬಾಲಕೃಷ್ಣ, ಮುಖಂಡ ರಾದ ಮೈ.ವಿ.ರವಿಶಂಕರ್, ಕವೀಶ್‌ಗೌಡ, ಕೇಬಲ್ ಮಹೇಶ್, ಬಿ.ಎಂ.ರಘು, ಮಹೇಶ್, ಮಂಜು ಸಿ.ಗೌಡ, ಸ್ಮಾರ್ಟ್ ಮಂಜು, ಕೆ.ಎಂ.ನಿಶಾಂತ್, ಕಿರಣ್, ರಾಕೇಶ್ ಮತ್ತಿತರರಿದ್ದರು.

ತಿರುಓಣಂ ಆಚರಣೆ...



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ ತಿರುಓಣಂ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಕಿಯರು, ತಾಯಂದಿರು ಹಾಗೂ ಮಕ್ಕಳು ಭಾಗವಹಿಸಿದ್ದರು.

ದಲಿತರಲ್ಲಿ ಒಡಕುಂಟಾಗುವ ಭೀತಿ ಬೇಡ; ಒಳ ಮೀಸಲಾತಿ ಜಾರಿಗೆ ಚಿಂತಕ ಶಿವಸುಂದರ್ ಸಲಹೆ

ಹೆಚ್ಚಿನ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳಕ್ಕೂ ಆಗ್ರಹಿಸಿ



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಸೋಮವಾರ ನಡೆದ 'ಮೀಸಲಾತಿಯ ಒಳನೋಟ' ಕುರಿತ ವಿಚಾರ ಸಂಕಿರಣದಲ್ಲಿ ಚಿಂತಕ ಶಿವಸುಂದರ್ ಮಾತನಾಡಿದರು.

ಮೈಸೂರು,ಸೆ.16(ಎಂಟಿವೈ)– ಒಳ ಮೀಸಲಾತಿ ಜಾರಿಯಾದರೆ ದಲಿತರಲ್ಲಿ ಒಡಕುಂಟಾಗುವ ಆತಂಕ ಬಿಟ್ಟು, ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಿಕೊಳ್ಳುವುದಕ್ಕೆ ಹೋರಾಟ ಮಾಡಬೇಕು ಎಂದು ಚಿಂತಕ ಶಿವಸುಂದರ್ ಸಲಹೆ ನೀಡಿದ್ದಾರೆ.

ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಸೋಮವಾರ ದಲಿತ ಸಂಘರ್ಷ ಸಮಿತಿ ವತಿಯಿಂದ ಆಯೋಜಿಸಿದ್ದ 'ಮೀಸಲಾತಿಯ ಒಳನೋಟ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಆದೇಶದಂತೆ ಸರ್ಕಾರಗಳು ಒಳ ಮೀಸಲಾತಿ ಜಾರಿ ಮಾಡಬೇಕು. ಒಳ ಮೀಸಲಾತಿ ಜಾರಿಗೊಳಿಸಲು ಯಾವುದೇ ಸಾಂವಿಧಾನಿಕ ತೊಡಕಿಲ್ಲ. ರಾಜಕೀಯ ಪಕ್ಷಗಳು, ಸರ್ಕಾರ ಮೀನಾ ಮೇಷ ಎಣಿಸದೆ ನಾಟಕ ಆಡುವುದು ಬಿಟ್ಟು ಒಳಮೀಸಲಾತಿ ಜಾರಿ ಮಾಡಬೇಕು. ಒಳಮೀಸಲಾತಿ ಜಾರಿಯಾದರೆ ನಮ್ಮಲ್ಲೇ ಒಡಕುಂಟಾಗಲಿದೆ ಎಂಬ ಆತಂಕವಿದೆ. ಅನ್ಯಾಯವಾಗಿರುವವರಿಗೆ ನ್ಯಾಯ ಒದಗಿಸುವ ಕೆಲಸವನ್ನು ನೀವೇ ಮಾಡಿದರೆ ನಿಮ್ಮಲ್ಲಿ ಇನ್ನಷ್ಟು ಒಗ್ಗಟ್ಟು ಹೆಚ್ಚಾಗಲಿದೆ. ಸರ್ಕಾರ ತಮ್ಮ ಪಾಲನ್ನು ಕೊಡದೆ ನಮ್ಮಲ್ಲೇ ಜಗಳ ಹಚ್ಚಲು ಪ್ರಯತ್ನಿಸುತ್ತಿವೆ. ಆದರೆ ನಾವು ಒಗ್ಗಟ್ಟಾಗಿ ನಮ್ಮ ಪಾಲನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಹೋರಾಟ ಮಾಡಬೇಕಿದೆ ಎಂದು ಹೇಳಿದರು.

ಸರ್ಕಾರಗಳು ಕೆನೆಪದರ ವಿಚಾರ ಮುಂದಿಟ್ಟುಕೊಂಡು ಒಳಮೀಸಲಾತಿ ಜಾರಿಗೆ ಆಕ್ಷೇಪ ವ್ಯಕ್ತಪಡಿಸುತ್ತಿವೆ. ದಲಿತರಲ್ಲಿ ಅನ್ಯಾಯಕ್ಕೊಳಗಾದವರಿಗೆ ಮೀಸಲಾತಿಯ ಅಗತ್ಯವಿದೆ. ಅದನ್ನು ಪ್ರಾಮಾಣಿಕವಾಗಿ ಸರ್ಕಾರಗಳು ಮಾಡಬೇಕು. ಅನ್ಯಾಯಕ್ಕೊಳಗಾಗಿರುವವರನ್ನು ತಿಳಿಯಲು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡುವಂತೆ ಸುಪ್ರೀಂ ಕೋರ್ಟ್ ಹೇಳಿದೆ. ಅದರಂತೆ ಆಯಾ ರಾಜ್ಯಗಳು ಸಮೀಕ್ಷಾ ವರದಿಯನ್ನು ಸಿದ್ಧಪಡಿಸಿ ನ್ಯಾಯಾಲಯಕ್ಕೆ ನೀಡುವ ಕೆಲಸ ಮಾಡಬೇಕು. ಒಳಮೀಸಲಾತಿ ವಿಚಾರದಲ್ಲಿ ಎನ್‌ಡಿಎ ಮೈತ್ರಿ ಕೂಟದಲ್ಲೇ ಭಿನ್ನ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಇದಕ್ಕೆ ಕಾಂಗ್ರೆಸ್ ಪಕ್ಷ ಏನು ಹೊರತಾಗಿಲ್ಲ. ಇವರಿಗೆ ನಿಜವಾಗಿ ದಲಿತರ ಮೇಲೆ ಕಾಳಜಿ ಇದ್ದರೆ ಒಳಮೀಸಲಾತಿ ಜಾರಿ ಮಾಡಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಜನಸಂಖ್ಯಾವಾರು ಮೀಸಲಾತಿ ಹೆಚ್ಚಿಗೆ ಕೊಡುವಂತೆ ಕೇಳಬೇಕು. ಖಾಸಗೀಕರಣ ರದ್ದುಮಾಡಬೇಕು, ಉದ್ಯೋಗಗಳ ಸಂಖ್ಯೆ ಹೆಚ್ಚಳ ಮಾಡಿ, ಬ್ಯಾಕ್ ಲಾಗ್ ಹುದ್ದೆಗಳ ಭರ್ತಿ ಮಾಡಬೇಕು. ಸರ್ಕಾರಿ ಶಾಲೆ, ಉದ್ಯೋಗಗಳನ್ನು ಜಾಸ್ತಿ ಮಾಡಿದರೆ ಸಾಮಾಜಿಕ ನ್ಯಾಯ ಸಿಗಲಿದೆ ಎಂದರು.

ಕರ್ನಾಟಕ ಬುದ್ಧ ದಮ್ಮ ಸಮಿತಿ ಕಾರ್ಯದರ್ಶಿ ಆರ್.ಮಹದೇವಪ್ಪ, ವಿಚಾರವಾದಿ ಡಾ.ಕೃಷ್ಣಮೂರ್ತಿ ಚಮರಂ, ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಕಿರಂಗೂರು ಸ್ವಾಮಿ ಉಪಸ್ಥಿತರಿದ್ದರು.

ಕ್ರೈಸ್ಟ್ ಕಾಲೇಜ್ ವಿದ್ಯಾರ್ಥಿಗಳಿಂದ ಸ್ವಯಂಪ್ರೇರಿತ ರಕ್ತದಾನ ಶಿಬಿರ



ಕ್ರೈಸ್ಟ್ ಕಾಲೇಜಿನಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ನಡೆಯಿತು.

ಮೈಸೂರು,ಸೆ.16– ಶ್ರೀರಾಂಪುರದಲ್ಲಿರುವ ಕ್ರೈಸ್ಟ್ ಕಾಲೇಜಿನಲ್ಲಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಮತ್ತು ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ರಕ್ತ ನಿಧಿ ಕೇಂದ್ರದ ವತಿಯಿಂದ ಆಯೋಜಿಸಿದ್ದ ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ 120ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ 10ಕ್ಕೂ ಹೆಚ್ಚು ಸಿಬ್ಬಂದಿ ರಕ್ತದಾನ ಮಾಡಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರು ಫಾದರ್ ಜಿಂಟೋ ಜೋಸ್, ಶೈಕ್ಷಣಿಕ ಚಟುವಟಿಕೆಗಳ ಸಂಯೋಜಕ ಫಾದರ್ ರೇಜೋ ಜೇಕಬ್, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ವೇದರಾಜ್ ಕೂರಗಲ್ ಹಾಗೂ ರಾಸೇಯೋ ಘಟಕದ ಸದಸ್ಯರು, ಅಧ್ಯಾಪಕರು ಶಶಿಕಿರಣ್, ರಾಬಿನ್ ಶರತ್‌ಕುಮಾರ್, ಮೇರಿ ಅನ್ನಿಲಾ, ಸ್ಫೂರ್ತಿ ಹಾಗೂ ಕಾಲೇಜಿನ ಸಿಬ್ಬಂದಿ ವರ್ಗದವರು ಮತ್ತು ಆಡಳಿತಾಧಿಕಾರಿಗಳು ರಶ್ಮಿ ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಹಾಗೂ ಸಿಬ್ಬಂದಿ ವರ್ಗ, ಸ್ವಯಂ ಸೇವಕ, ಸೇವಕಿಯರು ಹಾಜರಿದ್ದರು.

ವಿಕೋಪ ನಿರ್ವಹಣೆ ಮಾಡಲು ವಿದ್ಯಾರ್ಥಿಗಳ ಪಾತ್ರ ಮುಖ್ಯ



ಮೈಸೂರಿನ ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ 'ವಿಕೋಪ ನಿರ್ವಹಣಾ' ತರಬೇತಿ ಕಾರ್ಯಕ್ರಮವನ್ನು ಪ್ರೊ. ಅನಿತಾ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಮೈಸೂರು, ಸೆ. 16– ವಿದ್ಯಾರ್ಥಿಗಳು ಮಾದಕ ವಸ್ತು ಸೇವನೆ ಮತ್ತು ಮೊಬೈಲ್ ದುರ್ಬಳಕೆಯಿಂದಾಗಿ ರೋಗರುಜಿನಗಳಿಗೆ ತುತ್ತಾಗುತ್ತಿದ್ದು, ಜಗತ್ತು ಬಹುದೊಡ್ಡ ವಿಕೋಪವನ್ನು ಎದುರಿಸಲಿದೆ ಎಂದು ಪ್ರಾಂಶುಪಾಲರಾದ ಪ್ರೊ.ಅನಿತಾ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ಲಾಂಟ್ ಕ್ಲಬ್, ರೆಡ್ ಕ್ರಾಸ್, ಸ್ಕೌಟ್ಸ್ ಅಂಡ್ ಗೈಡ್ಸ್ ಹಾಗೂ ಗ್ರಂಥಾಲಯ ವಿಭಾಗಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ವಿಕೋಪ ನಿರ್ವಹಣಾ' ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜರ ಕಾಲದಲ್ಲಿ ಸಾಲು ಸಾಲು ಕೆರೆಗಳನ್ನು ನಿರ್ಮಿಸಿ ಜಲ ಸಂರಕ್ಷಣೆಯನ್ನು ಮಾಡಲಾಗುತ್ತಿತ್ತು ಆದರೆ ಇಂದು ಮಾನವನ ಅತಿಯಾದ ಆಸೆ ಹಾಗೂ ಅಭಿವೃದ್ಧಿ ಹೆಸರಿನಲ್ಲಿ ಜಲಮೂಲಗಳನ್ನು ಮುಚ್ಚುತ್ತಿರುವ ಕಾರಣ ವಿಕೋಪಗಳು ಸಾಮಾನ್ಯವಾಗಿದೆ. ವಿಪತ್ತುಗಳನ್ನು ಎದುರಿಸಲು ವೈಜ್ಞಾನಿಕ ಪ್ರಜ್ಞೆ ಮತ್ತು ಕೌಶಲ್ಯದ ಅವಶ್ಯಕತೆ ಇದೆ ಎಂದು ತಿಳಿಸಿದರು.

ತರಬೇತುದಾರ ಡಾ.ದಿಲೀಪ್‌ಕುಮಾರ್ ಎಂ.ನರಸಯ್ಯ, ವಿಕೋಪ ನಿರ್ವಹಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಬಗ್ಗೆ ವಿವರಿಸುತ್ತಾ ಸ್ಥಳೀಯವಾಗಿ ಸಮುದಾಯ ಮತ್ತು ವಿದ್ಯಾರ್ಥಿ ಸಮೂಹದ ಸಾಮರ್ಥ್ಯವನ್ನು ವೃದ್ಧಿಸುವ ತಂತ್ರಾಂಶಗಳ ಬಗ್ಗೆ ತಿಳಿಸಿಕೊಟ್ಟರು. ವಿಕೋಪ ಅಪಾಯ ತಡೆಗಟ್ಟುವಿಕೆ, ಪೂರ್ವ ಸಿದ್ದತೆ, ಸ್ಪಂದನೆ ಹಾಗೂ ಪುನರ್ವಸತಿ ಯೋಜನೆಗಳ ಕುರಿತು ತರಬೇತಿ ನೀಡಿದರು. ಸ್ಥಳೀಯವಾಗಿ ಸಂಭವಿಸುವ ಯಾವುದೇ ವಿಧದ ವಿಕೋಪಗಳನ್ನು ನಿರ್ವಹಣೆ ಮಾಡಲು ವಿದ್ಯಾರ್ಥಿ ಸಂಪನ್ಮೂಲದ ಅವಶ್ಯಕತೆಯನ್ನು ವಿವರಿಸುತ್ತಾ ಕಾಲೇಜು ಮಟ್ಟದಲ್ಲಿ ವಿಕೋಪ ನಿರ್ವಹಣಾ ಯೋಜನೆ ಸಿದ್ಧಪಡಿಸುವ ವಿಧಾನವನ್ನು ದಿಲೀಪ್ ನರಸಯ್ಯ ವಿವರವಾಗಿ ತಿಳಿಸಿಕೊಟ್ಟರು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪ್ರಾದೇಶಿಕ ಅಧಿಕಾರಿ ನಾಗರಾಜ್ ಅರಸ್ ಹಾಗೂ ಸಿಬ್ಬಂದಿ ವರ್ಗ ಅಗ್ನಿ ಅವಘಡವಾದಾಗ ಸ್ಪಂದಿಸುವ ವಿಧಾನ ವನ್ನು ಅಣಕು ಪ್ರದರ್ಶನ ಮಾಡುವ ಮೂಲಕ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದರು. ಈ ವೇಳೆ ಕಾಲೇಜಿನ ಬೋಧಕ–ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ರಷ್ಯಾದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಕಲಬುರಗಿಯ ಮೂವರು ಯುವಕರು ತವರಿಗೆ ವಾಪಸ್..!



ಕಲಬುರಗಿ: ರಷ್ಯಾದಲ್ಲಿ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದ ಕಲಬುರಗಿಯ ಮೂವರು ಯುವಕರು ತವರಿಗೆ ವಾಪಸ್ ಆಗಿದ್ದಾರೆ.

ಕಲಬುರಗಿಯ ನೂರಾನಿ ಮೊಹಲ್ಲಾ ನಿವಾಸಿ ಸೈಯದ್ ಇಲಿಯಾಸ್ ಹುಸೇನಿ, ಇಸ್ಲಾಮಬಾದ್ ಕಾಲೊನಿ ನಿವಾಸಿ ಸಮೀರ್ ಅಹ್ಮದ್, ಮಿಜಗುರಿ ಪ್ರದೇಶದ ಅಬ್ದುಲ್ ನಯೀಮ್ ವಾಪಸ್ ಆದವರು.

ರಷ್ಯಾಗೆ ಉದ್ಯೋಗ ಅರಸಿ 2023ರ ಡಿಸೆಂಬರ್ ತಿಂಗಳಲ್ಲಿ ಕಲಬುರಗಿಯ ಈ ಯುವಕರು ತೆರಳಿದ್ದರು. ಮುಂಬೈ ಮೂಲದ ಬಾಬಾ ಜಾಬ್ ಸೆಕ್ಯೂರಿಟಿ ಏಜೆನ್ಸಿ ಯುವಕರಿಂದ ಲಕ್ಷಾಂತರ ರೂಪಾಯಿ ಪಡೆದು, ರಷ್ಯಾದಲ್ಲಿ ಸೆಕ್ಯೂರಿಟಿ ಕೆಲಸ ಕೊಡಿಸುವುದಾಗಿ ಭರವಸೆ ನೀಡಿತ್ತು. ಅದರಂತೆ, ಯುವಕರು ರಷ್ಯಾಕ್ಕೆ ತೆರಳಿದ್ದರು.

ಆದರೆ, ಅಲ್ಲಿ ಉಕ್ರೇನ್ ಮತ್ತು ರಷ್ಯಾ ಮಧ್ಯೆ ಯುದ್ಧ ಶುರುವಾದ ಬಳಿಕ ರಷ್ಯಾ ಸೇನೆ ಈ ಯುವಕರನ್ನು ಯುದ್ದದಲ್ಲಿ ಬಳಸಿಕೊಳ್ಳಲು ಸೂಚಿಸಿತ್ತು. ಬಂಕರ್‌ಗಳನ್ನು ಅಗೆಯುವ ಕೆಲಸಕ್ಕೆ ಇವರನ್ನು ನಿಯೋಜಿಸಲಾಗಿತ್ತು. ಇದರಿಂದ ಬೇಸತ್ತ ಯುವಕರು, ರಷ್ಯಾದಲ್ಲಿ ತಮಗೆ ನೀಡಿರುವ ಕೆಲಸದ ಕುರಿತು ವಿಡಿಯೋ ಮಾಡಿ ಸೋಷಿಯಲ್ ಮಿಡಿಯಾದಲ್ಲಿ ಹಂಚಿಕೊಂಡಿದ್ದರು. ಇದನ್ನು ಗಮನಿಸಿ ಯುವಕರನ್ನು ಮರಳಿ ತರುವಂತೆ ಕೇಂದ್ರ ಸರಕಾರಕ್ಕೆ ರಾಜ್ಯಸಭೆ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕೂಡಾ ಪತ್ರ ಬರೆದು ಒತ್ತಾಯಿಸಿದ್ದರು.

ಬಳಿಕ ಪ್ರಧಾನಿ ಮೋದಿ ಅವರು ರಷ್ಯಾಕ್ಕೆ ಭೇಟಿ ನೀಡಿ, ವಾಪಸ್ ಆದ ಕೆಲವೇ ದಿನಗಳಲ್ಲಿ ಮೂವರು ಯುವಕರು ಮರಳಿ ತವರಿಗೆ ಮರಳಿದ್ದಾರೆ. ಕಲಬುರಗಿ ಜಿಲ್ಲೆಯ ಮದ್ಬೂಲ್ ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಆಗಿರುವ ಸೈಯದ್ ನವಾಜ್ ಅಲಿ ಅವರು ಮಾತನಾಡಿ, ತಮ್ಮ ಮಗ ಸೈಯದ್ ಇಲಿಯಾಸ್ ಹುಸೇನಿ ತನ್ನ ಗೆಳೆಯರೊಂದಿಗೆ ವಾಪಸ್ಸಾಗಿದ್ದಾನೆಂದು ಸಂತಸ ವ್ಯಕ್ತಪಡಿಸಿದ್ದಾರೆ.

ಕಲಬುರಗಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮಾತನಾಡಿ, ನಕಲಿ ಜಾಬ್ ಏಜೆನ್ಸಿಗಳು ಯುವಕರನ್ನು ಮರಳು ಮಾಡಿ ಹೆಚ್ಚಾಗಿ ಮೋಸ ಮಾಡುತ್ತಿವೆ. ಯುವಕರು ಆಲೋಚಿಸದೆ ಈ ಏಜೆನ್ಸಿಗಳಿಗೆ ಬಲಿ ಆಗಬಾರದು ಎಂದು ಮನವಿ ಮಾಡಿದ್ದಾರೆ.

ಮೈಸೂರು ಭಾಗದ ರೈಲ್ವೆ ಸೇವೆ ಉತ್ತಮಪಡಿಸಲು ಕೇಂದ್ರ ಸಚಿವ ವಿ.ಸೋಮಣ್ಣರಲ್ಲಿ ಮನವಿ





ಮೈಸೂರು, ಸೆ.16(ಎಂಕೆ)–ಮೈಸೂರು ಭಾಗದಲ್ಲಿ ರೈಲ್ವೆ ಸೇವೆಗಳನ್ನು ಉತ್ತಮಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಸದ ಯದುವೀರ್ ಒಡೆಯರ್, ಕೇಂದ್ರ ರೈಲ್ವೆ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಪತ್ರ ಪಡೆದಿದ್ದಾರೆ. ಮೈಸೂರು ಭಾಗದ ರೈಲ್ವೆ ಸಮಸ್ಯೆಗಳು ಮತ್ತು ಕೆಲವು ರೈಲುಗಳ ಸಮಯ ಬದಲಾವಣೆ ಕುರಿತು ಮೈಸೂರು ಗ್ರಾಹಕರ ಪರಿಷತ್(ರಿ) ನೀಡಿದ್ದ ಪತ್ರವನ್ನು ಉಲ್ಲೇಖಿಸಿರುವ ಅವರು, ರೈಲುಗಳ ಸಮಯ ಬದಲಾವಣೆ ಕುರಿತು ಪ್ರಸ್ತಾಪಿಸಿದ್ದು, ಕೆಲವು ಸಲಹೆಗಳನ್ನು ನೀಡಿದ್ದಾರೆ. ಈ ಕುರಿತು ಸಮಗ್ರವಾಗಿ ಚರ್ಚೆ ಮಾಡಿ, ನಿಯಮಾನುಸಾರ ಜಾರಿಗೆ ತರುವ ಸಂಬಂಧ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಿಗೆ ಅಗತ್ಯ ಸೂಚನೆ ನೀಡಲು ಮತ್ತು ಕೇಂದ್ರ ಸರ್ಕಾರದ ಹಂತದಲ್ಲಿ ಅಗತ್ಯವಿರುವ ಅನುಮೋದನೆಗಳನ್ನು ನೀಡುವಂತೆ ಕೋರಿದ್ದಾರೆ.

ಬಿಜೆಪಿ ಮುಖಂಡ ಅರುಣ್‌ಕುಮಾರ್‌ಗೌಡರ ಹುಟ್ಟುಹಬ್ಬ ಆಚರಣೆ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಾಜಿ ಅಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡ ಅವರ ಹುಟ್ಟುಹಬ್ಬವನ್ನು ಮಂಡಲದ ಅಧ್ಯಕ್ಷ ಪೈ.ಟಿ.ರವಿ ಲಕ್ಷ್ಮೀಪುರ ನೇತೃತ್ವದಲ್ಲಿ ಆಚರಿಸಲಾಯಿತು. ಈ ವೇಳೆ ಮುಖಂಡ ಶ್ರೀನಿವಾಸ್, ಉಪಾಧ್ಯಕ್ಷರಾದ ಹಿನಕಲ್ ಗಣೇಶ್, ಸುನೀಲ್, ಗೋಪಾಲ್‌ಗೌಡ, ಕಾರ್ಯದರ್ಶಿ ಕೂರ್ಗಳ್ಳಿ ರೇವಣ್ಣ, ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾ ಗೌಡ, ಹಿನಕಲ್ ಮಹಾಶಕ್ತಿ ಕೇಂದ್ರ ಅಧ್ಯಕ್ಷೆ ಶಾಲಿನಿ ಕುಮಾರ್, ಪ್ರಧಾನ ಕಾರ್ಯದರ್ಶಿ ನಾರಾಯಣ್, ಮುಖಂಡರಾದ ದಾರಿಪುರ ಡಿ.ಚಂದ್ರಶೇಖರ್, ಶಂಭು ಪಟೇಲ್, ದೀಪು, ಸಿದ್ಧಾಚಾರ್, ಎನ್.ಕೆ.ರವಿಕುಮಾರ್ ಇದ್ದರು.

ಯೋಗೇಶ್ ನೇಮಕ



ಮೈಸೂರು: ಡಾ.ಬಾಬು ಜಗಜೀವನ ಆದಿಜಾಂಬವ ಯುವ ಬ್ರಿಗೇಡ್ ಮೈಸೂರು ವಿಭಾಗದ ಸಂಚಾಲಕರನ್ನಾಗಿ ವಿರಾಜಪೇಟೆಯ ಎಸ್.ಎಸ್. ಯೋಗೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಯುವ ಬ್ರಿಗೇಡ್ ರಾಜ್ಯಾಧ್ಯಕ್ಷ ಏಳುಕೋಟಪ್ಪ ಎಸ್.ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಸ್ಥಾನದಿಂದ ಮುನಿರತ್ನ ವಜಾಗೊಳಿಸಲು ಆಗ್ರಹ

ಮೈಸೂರು,ಸೆ.16(ಎಂಟಿವೈ)–ಜಾತಿ ನಿಂದನೆ ಆರೋಪದಡಿ ಬಂಧನವಾಗಿರುವ ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸಬೇಕು ಎಂದು ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಒತ್ತಾಯಿಸಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗುತ್ತಿಗೆದಾರ ಚೆಲುವರಾಜು ಅವರೊಂದಿಗೆ ಶಾಸಕ ಮುನಿರತ್ನ ಹೊಲಸು ಪದಗಳನ್ನು ಬಳಸಿ ಅಮಾನವೀಯವಾಗಿ ಮಾತಾಡಿದ್ದಾರೆ. ದಲಿತ ಸಮುದಾಯದ ಬಗ್ಗೆ ಜನಪ್ರತಿನಿಧಿಯೊಬ್ಬನ ಮನಸ್ಸಲ್ಲಿ ತುಂಬಿರುವ ಅಸಹನೆ ಬಗ್ಗೆ ದಿಗಿಲಾಗುತ್ತದೆ. ನಮ್ಮ ಸಮುದಾಯ ಮಾಡಿರುವ ಅನ್ಯಾಯವಾದರು ಏನು ಎಂದು ಪ್ರಶ್ನಿಸಿದ್ದಾರೆ. ಪ್ರಜಾಪ್ರಭುತ್ವದ ದಿನ ಆಚರಿಸಲಾಗುತ್ತಿದೆ. ಇದರ ನಡುವೆ ಬಿಜೆಪಿ ಶಾಸಕರ ಅಮಾನವೀಯ ವರ್ತನೆಯ ಆಡಿಯೋ ವೈರಲ್ ಆಗಿದೆ. ಮುನಿರತ್ನ ಈ ಹಿಂದೆಯೂ ಉದ್ಧಟತನದಿಂದ ವರ್ತಿಸಿದ್ದಾರೆ. ಶೋಷಿತ ಸಮುದಾಯದ ಬಗ್ಗೆ ಅವರಿಗೆ ಅಸೂಯೆ ಇದೆ. ಬೇರೆ ರಾಜ್ಯದಿಂದ ಕರ್ನಾಟಕಕ್ಕೆ ಬಂದು ಇಲ್ಲಿನ ಜನ ಹಾಗೂ ಸಮುದಾಯದ ಬಗ್ಗೆ ಮಾತನಾಡುವ ನೈತಿಕ ಹಕ್ಕು ಅವರಿಗಿಲ್ಲ. ಆದರೂ ಹೊಲಸು ಪದಗಳನ್ನು ಬಳಸಿ ನಿಂದಿಸಿದರು ಸಮುದಾಯ ಯಾಕೇ ಮೌನವಾಗಿದೆ? ಸಮುದಾಯದ ರಾಜಕಾರಣಿಗಳು ಯಾಕೆ ಸುಮ್ಮನಿದ್ದಾರೆ? ಪ್ರಜ್ಞಾವಂತರು ಮಾತಾಡದಿರುವುದು ಅಪಾಯಕಾರಿ. ಬಿಜೆಪಿಗೆ ಮನುಷ್ಯತ್ವ ಇದ್ದರೆ ಮುನಿರತ್ನ ಅವರನ್ನು ಪಕ್ಷದಿಂದ ಹೊರಹಾಕಬೇಕು. ಸರ್ಕಾರ ಕಠಿಣ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಬ್ಯಾಸ್ಕೆಟ್ ಬಾಲ್‌ನಲ್ಲಿ ಜಿಲ್ಲಾ ಮಟ್ಟದ ಪ್ರಶಸ್ತಿ



ಮೈಸೂರು ಜಿಲ್ಲೆ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಭಾರತೀಯ ವಿದ್ಯಾಭವನ ಶಾಲಾ ಮೈದಾನದಲ್ಲಿ ಏರ್ಪಡಿಸಿದ್ದ ಮೈಸೂರು ಜಿಲ್ಲಾ ಮಟ್ಟದ ಶಾಲಾ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ಅವಿಲಾ ಕಾನ್ವೆಂಟ್‌ನ 17ರ ವಯೋಮಿತಿಯ ಬಾಲಕಿಯರ (ಪ್ರೌಢಶಾಲೆ) ತಂಡ ಸತತ 17 ವರ್ಷಗಳಿಂದ ಪ್ರಶಸ್ತಿ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದೆ. ಶಾಲಾ ವ್ಯವಸ್ಥಾಪಕರಾದ ಸಿಸ್ಟರ್ ರಶ್ಮಿ, ಮುಖ್ಯೋಪಾಧ್ಯಾಯಿನಿ ಸಿಸ್ಟರ್ ವೀಣಾ, ಸಿಸ್ಟರ್ ಅರುಣ ಜ್ಯೋತಿ, ದೈಹಿಕ ಶಿಕ್ಷಣ ಶಿಕ್ಷಕ ಎಲಿಯಾಸ್ ಅರುಳಪ್ಪ ಇದ್ದಾರೆ. ಕ್ರೀಡಾಪಟುಗಳು (ನಿಂತಿರುವವರು ಎಡದಿಂದ ಬಲಕ್ಕೆ)– ಶಿವಾನಿ ಗುಪ್ತ, ಅನ್ವಿತ, ಹಿಮಶ್ರೀ, ನಿಶಾ ಕುನ್ವರ್, ಶ್ರೇಯ ಆರ್.ನಯನ, ಭೂಮಿಕ, ಧನ್ವಿ, ತನ್ವಿ, ಲಾವಣ್ಯ, ಲವೀನಾ ಕ್ಯಾರೋಲ್. (ಕುಳಿತಿರುವವರು ಎಡದಿಂದ ಬಲಕ್ಕೆ): ಸಮೀಕ್ಷ, ಕಶಿಶ್, ಸಾನ್ವಿ, ಚಿತ್ರಕಲಾ, ಪಂಚಮಿ, ಸೌಪರ್ಣಿಕ ವೈ ಚಿತ್ರದಲ್ಲಿದ್ದಾರೆ.

ರಾಹುಲ್ ಗಾಂಧಿ ನಾಲಿಗೆ ಕತ್ತರಿಸುವವರಿಗೆ 11 ಲಕ್ಷ ಬಹುಮಾನ

ಶಿವಸೇನೆ ಶಾಸಕ ವಿವಾದಾತ್ಮಕ ಹೇಳಿಕೆ



ಮುಂಬೈ: ಮೀಸಲಾತಿ ರದ್ದುಪಡಿಸುವ ಕುರಿತು ಹೇಳಿಕೆ ನೀಡಿರುವ ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ನಾಲಿಗೆಯನ್ನು ಕತ್ತರಿಸುವವರಿಗೆ 11 ಲಕ್ಷ ರೂಪಾಯಿ ನೀಡುವುದಾಗಿ ಶಿವಸೇನಾ ಶಾಸಕ ಸಂಜಯ್ ಗಾಯಕ್ವಾಡ್ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಈ ಮಧ್ಯೆ ಗಾಯಕ್ವಾಡ್ ಹೇಳಿಕೆಯನ್ನು ಬೆಂಬಲಿಸುವುದಿಲ್ಲ ಎಂದು ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ ಚಂದ್ರಶೇಖರ ಬಾವಂಕುಲೆ ಹೇಳಿದ್ದಾರೆ. ಮಹಾರಾಷ್ಟ್ರದಲ್ಲಿ ಶಿವಸೇನೆ ನೇತೃತ್ವದ ಸರ್ಕಾರದಲ್ಲಿ ಬಿಜೆಪಿಯೂ ಮೈತ್ರಿಪಕ್ಷವಾಗಿದೆ. ರಾಹುಲ್ ಗಾಂಧಿ ವಿದೇಶ ಪ್ರವಾಸದಲ್ಲಿದ್ದಾಗ ಭಾರತದಲ್ಲಿನ ಮೀಸಲಾತಿ ವ್ಯವಸ್ಥೆಯನ್ನು ರದ್ದುಗೊಳಿಸಲು ಬಯಸುವುದಾಗಿ ಹೇಳಿದ್ದರು. ಇದು ಕಾಂಗ್ರೆಸ್‌ನ ನಿಜವಾದ ಮುಖವನ್ನು ಅನಾವರಣಗೊಳಿಸಿದೆ ಎಂದು ಗಾಯಕ್ವಾಡ್ ವಿಚಿತ್ರ ರೀತಿಯ ಬಹುಮಾನ ಘೋಷಿಸುವ ಮೊದಲು ಸುದ್ದಿಗಾರರಿಗೆ ತಿಳಿಸಿದರು.

ವಿದರ್ಭ ಪ್ರದೇಶದ ಬುಲ್ಢಾನ ವಿಧಾನ ಸಭಾ ಕ್ಷೇತ್ರದ ಶಾಸಕ ಗಾಯಕ್‌ವಾಡ್‌ಗೆ ವಿವಾದಗಳು ಹೊಸದೇನಲ್ಲ. ಕಳೆದ ತಿಂಗಳು ಪೊಲೀಸರು, ಶಿವಸೇನೆ ಶಾಸಕರ ಕಾರನ್ನು ತೊಳೆಯುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ನಂತರ ಕಾರಿನಲ್ಲಿ ಪೊಲೀಸರು ವಾಂತಿ ಮಾಡಿಕೊಂಡ ನಂತರ ಸ್ವಯಂಪ್ರೇರಣೆಯಿಂದ ಸ್ವಚ್ಛಗೊಳಿಸಿದರು ಎಂದು ಗಾಯಕ್ವಾಡ್ ಸಮರ್ಥಿಸಿಕೊಂಡಿದ್ದರು.

1987ರಲ್ಲಿ ಹುಲಿಯೊಂದನ್ನು ಬೇಟೆಯಾಡಿ ಅದರ ಹಲ್ಲನ್ನು ತನ್ನ ಕುತ್ತಿಗೆಗೆ ಹಾಕಿಕೊಂಡಿರುವುದಾಗಿ ಗಾಯಕ್ವಾಡ್ ಫೆಬ್ರವರಿಯಲ್ಲಿ ಹೇಳಿದ್ದರು. ಕೂಡಲೇ ಕಾರ್ಯಪ್ರವೃತ್ತರಾದ ಅರಣ್ಯ ಇಲಾಖೆ ಅದರ ಗುರುತು ಪತ್ತೆ ಹಚ್ಚಲು ಹುಲಿ ಹಲ್ಲನ್ನು ವಿಧಿ ವಿಜ್ಞಾನ ಪ್ರಯೋಗಾಲಕ್ಕೆ ಕಳುಹಿಸಿತ್ತು. ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಗಾಯಕ್ವಾಡ್ ವಿರುದ್ಧ ಆರೋಪ ಹೊರಿಸಿತ್ತು.

ಯುವನಟ ಚೇತನ್ ದೇವರಾಜ್‌ಗೆ 'ಕರುನಾಡ ಚೇತನ' ಪ್ರಶಸ್ತಿ



ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲೂಕಿನ ಬೆಟ್ಟದಬೀಡು ಗ್ರಾಮದ ರೈತ ಕುಟುಂಬದ ಗ್ರಾಮೀಣ ಪ್ರತಿಭೆ ಯುವನಟ ಚೇತನ್ ದೇವರಾಜ್‌ಗೆ ಸ್ಫೂರ್ತಿ ಕಲಾ ಟ್ರಸ್ಟ್ ಬೆಂಗಳೂರು ಉದಯಭಾನು ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ 2024–25 ನೇ ಸಾಲಿನ 'ಕರುನಾಡ ಚೇತನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈತ ಶ್ರೀಮತಿ ಮಂಗಳಮ್ಮ ಮತ್ತು ದಿವಂಗತ ದೇವರಾಜ್ ಅವರ ಪುತ್ರ.

ದೇಶ - ವಿದೇಶ

ವಿಶ್ವದ ಹಳೆಯ ಬೆಕ್ಕು 33ನೇ ವಯಸ್ಸಿಗೆ ಸಾವು



ಬ್ರಿಟನ್: ವಿಶ್ವದ ಅತ್ಯಂತ ಹಳೆಯ ಬೆಕ್ಕು ರೋಸಿ ಮೃತಪಟ್ಟಿರುವುದಾಗಿ ಅದರ ಮಾಲೀಕ ಲೀಲಾ ಬ್ರಿಸೆಟ್ ತಿಳಿಸಿದ್ದಾರೆ. ರೋಸಿ ಬೆಕ್ಕು ತನ್ನ 33ನೇ ವಯಸ್ಸಿನಲ್ಲಿ ನಾರ್ವಿಚ್ ಯುಕೆಯಲ್ಲಿರುವ ತನ್ನ ಮಾಲೀಕರ ಮನೆಯಲ್ಲಿ ಸಾವನ್ನಪ್ಪಿದೆ ಎಂದು ನ್ಯೂಯಾರ್ಕ್ ಪೋಸ್ಟ್ ವರದಿ ಮಾಡಿದೆ. 1991ರಲ್ಲಿ ಜನಿಸಿದ ರೋಸಿ ವಿಶ್ವದ ಅತ್ಯಂತ ಹಳೆಯ ಬೆಕ್ಕು ಎಂಬ ಪಟ್ಟವನ್ನು ಅನಧಿಕೃತವಾಗಿ ಹೊಂದಿತ್ತು. ಅಧಿಕೃತ ದಾಖಲೆಯನ್ನು ಕೆಂಟ್‌ನ 28 ವರ್ಷದ ಫ್ಲೋಸಿ ಹೊಂದಿದೆ. ರೋಸಿ ಜೂನ್ 1ರಂದು ತನ್ನ 33ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದಳು. ನಾನು ರೋಸಿಯನ್ನು ಬಹಳ ಮಿಸ್ ಮಾಡಿಕೊಳ್ಳುವೆ. ಅವಳಿಗೆ ಹುಷಾರಿರಲಿಲ್ಲ, ಮನೆಯಲ್ಲಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮಲಗಿದಳು. ಅಲ್ಲೇ ಪ್ರಾಣ ಬಿಟ್ಟಿದ್ದಾಳೆ. ನಾವಿಬ್ಬರು ಒಳ್ಳೆಯ ಸಮಯವನ್ನು ಒಟ್ಟಿಗೆ ಕಳೆದಿದ್ದೇವೆ. ಸಾಕಷ್ಟು ನೆನಪುಗಳಿವೆ ಎಂದು ರೋಸಿಯನ್ನು ಸಾಕುತ್ತಿದ್ದ ಲೀಲಾ ಬ್ರಿಸೆಟ್ ಹೇಳಿದ್ದಾರೆ.

ಆರ್‌ಎಸ್‌ಎಸ್ ವಿಜಯದಶಮಿ: ಈ ಬಾರಿ ಇಸ್ರೋ ಮಾಜಿ ಮುಖ್ಯಸ್ಥರು ಮುಖ್ಯ ಅತಿಥಿ



ನಾಗ್ಪುರ: ಅಕ್ಟೋಬರ್ 12 ರಂದು ಮಹಾರಾಷ್ಟ್ರದ ನಾಗ್ಪುರದಲ್ಲಿ ನಡೆಯಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕ 'ವಿಜಯದಶಮಿ' ಕಾರ್ಯಕ್ರಮದಲ್ಲಿ ಇಸ್ರೋ ಮಾಜಿ ಮುಖ್ಯಸ್ಥ ಕೆ.ರಾಧಾಕೃಷ್ಣನ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮೂಲಕ ಆರ್‌ಎಸ್‌ಎಸ್ ಈ ಮಾಹಿತಿ ನೀಡಿದೆ. ವಿಜಯದಶಮಿ ಉತ್ಸವ ಆರ್‌ಎಸ್‌ಎಸ್ ಕ್ಯಾಲೆಂಡರ್‌ನ ಪ್ರಮುಖ ಘಟನೆಗಳಲ್ಲಿ ಒಂದಾಗಿದ್ದು, ಮೋಹನ್ ಭಾಗವತ್ ಇದನ್ನು ಉದ್ದೇಶಿಸಿ ಮಾತನಾಡುತ್ತಾರೆ. ಅ.12ರಂದು ಬೆಳಗ್ಗೆ 7.40ಕ್ಕೆ ರೇಶಿಂಬಾಗ್ ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದೆ. ರಾಷ್ಟ್ರೀಯ ಸ್ವಯಂ ಸೇವಕದ ಸಂಸ್ಥಾಪನಾ ದಿನಾಚರಣೆಯೂ ಆಗಿರುವ ವಾರ್ಷಿಕ ವಿಜಯ ದಶಮಿ ಉತ್ಸವಕ್ಕೆ ಮಹತ್ವವಿದೆ. 1 ವರ್ಷದಲ್ಲಿ ದೇಶದಲ್ಲಿ ನಡೆದ ಪ್ರಮುಖ ವಿದ್ಯಮಾನಗಳು ಹಾಗೂ ಸಂಘ ಪರಿವಾರದ ಮುಂದಿನ ಕಾರ್ಯ ಯೋಜನೆ, ಚಿಂತನೆ ಬಗ್ಗೆ ಈ ಉತ್ಸವದಲ್ಲಿ ಇಣುಕುನೋಟ ಇರುತ್ತದೆ. ಸಂಘ ಪರಿವಾರದ ಹಿರಿಯರು ಈ ಬಾರಿಯ ವಿಜಯ ದಶಮಿ ಉತ್ಸವದ ಮುಖ್ಯ ಅತಿಥಿಯಾಗಿ ಇಸ್ರೋ ಮಾಜಿ ಮುಖ್ಯಸ್ಥರನ್ನು ಆಹ್ವಾನಿಸಿರುವುದು ವಿಶೇಷ ಎನಿಸಿದೆ.


ಖಾಸಗಿ ಬಾಹ್ಯಾಕಾಶ ನಡಿಗೆ ಯಶಸ್ವಿ: ಭೂಮಿಗೆ ಬಂದಿಳಿದ ಗಗನಯಾತ್ರಿಗಳು



ಕೇಪ್ ಕ್ಯಾನವೆರೆಲ್: 'ಸ್ಪೇಸ್‌ಎಕ್ಸ್' ಸಂಸ್ಥೆಯ ಸಹಯೋಗದೊಂದಿಗೆ ಇತ್ತೀಚೆಗೆ ಬಾಹ್ಯಾಕಾಶಕ್ಕೆ ಹೋಗಿದ್ದ ನಾಲ್ವರು ಗಗನಯಾತ್ರಿಗಳು ಸುರಕ್ಷಿತವಾಗಿ ಭಾನುವಾರ ಸಂಜೆ ಭೂಮಿಗೆ ಬಂದಿಳಿದಿದ್ದಾರೆ. ಇದು ಪ್ರಪಂಚದ ಮೊದಲ ಖಾಸಗಿ ಬಾಹ್ಯಾಕಾಶ ನಡಿಗೆ ಕಾರ್ಯಕ್ರಮವಾಗಿತ್ತು. ಇದರಲ್ಲಿ ಇಬ್ಬರು ನಾಸಾ ಪೈಲಟ್‌ಗಳು ಸೇರಿ ಒಬ್ಬ ಸ್ಪೇಸ್ ಎಕ್ಸ್ ಉದ್ಯೋಗಿ ಹಾಗೂ ಬಿಲಿಯನೇರ್ ಜರೆಡ್ ಐಸಾಕ್‌ಮನ್ ಇದ್ದರು.

ಇವರನ್ನು ಹೊತ್ತಿದ್ದ ನೌಕೆ ಭಾನುವಾರ ಸಂಜೆ ಮೆಕ್ಸಿಕೊ ಕೊಲ್ಲಿಯಲ್ಲಿ ಯಶಸ್ವಿಯಾಗಿ ಇಳಿಯಿತು. ಬಿಲಿಯನೇರ್ ಜೇರೆಡ್ ಐಸಾಕ್‌ಮನ್ ಅವರು ಬಾಹ್ಯಾಕಾಶ ನಡಿಗೆ ನಡೆಸಿದ ಮೊದಲ ಖಾಸಗಿ ವ್ಯಕ್ತಿಯಾಗಿದ್ದಾರೆ. ಈ ಮೂಲಕ ಇದೇ ಮೊದಲ ಬಾರಿಗೆ ಖಾಸಗಿಯಾಗಿ ಆಯೋಜಿಸಿದ್ದ 'ವಿಶ್ವದ ಮೊದಲ ಬಾಹ್ಯಾಕಾಶ ನಡಿಗೆ'ಯು ಯಶಸ್ವಿಯಾದಂತಾಯಿತು. ಸಾಮಾನ್ಯವಾಗಿ ತರಬೇತಿ ಹೊಂದಿದ ಗಗನಯಾತ್ರಿಗಳನ್ನು ಮಾತ್ರವೇ ಬಾಹ್ಯಾಕಾಶಕ್ಕೆ ಕಳುಹಿಸಲಾಗುತ್ತದೆ. ಆದರೆ ಅವರ ಹೊರತಾಗಿ ಸಾಮಾನ್ಯರೂ ಬಾಹ್ಯಾಕಾಶಕ್ಕೆ ಹೋಗಿ ಸಾಧನೆ ಮಾಡಿದ್ದಾರೆ.

26 ವರ್ಷಗಳ ಬಳಿಕ ಅಮೆರಿಕ ವ್ಯಕ್ತಿಯ ಮೂಗಿನಿಂದ ಹೊರಬಂತು ಆಟಿಕೆ ತುಂಡು



ಅರಿಜೋನಾ: 26 ವರ್ಷದ ಹಿಂದೆ ವ್ಯಕ್ತಿಯ ಮೂಗಿನ ಹೊಳ್ಳೆಯೊಳಗೆ ಸೇರಿಕೊಂಡಿದ್ದ ಲೀಗೋ ಆಟಿಕೆಯ ತುಂಡೊಂದು ಈಗ ಹೊರಗೆ ಬಂದಿದೆ. ಅಮೆರಿಕದ ಅರಿಜೋನಾ ನಿವಾಸಿಯಾಗಿರುವ 32 ವರ್ಷದ ಆಂಡಿ ನಾರ್ಟನ್, ತಮ್ಮ ಮೂಗಿನಲ್ಲಿ ಸಿಲುಕಿಕೊಂಡಿದ್ದ ಆಟಿಕೆ ತುಂಡನ್ನು ಕಂಡು ಅಚ್ಚರಿಗೊಂಡಿದ್ದಾರೆ. ನಾರ್ಟನ್‌ಗೆ 6 ವರ್ಷವಿದ್ದಾಗ ಆಟ ಆಡುವಾಗ ಮೂಗಿನ ಒಳಗೆ ಆಟಿಕೆಗಳನ್ನು ಅಂಟಿಸಿಕೊಳ್ಳುತ್ತಿದ್ದರು. ಅದರಲ್ಲಿ ಕೆಲವೊಂದನ್ನು ಹೊರಗೆ ತೆಗೆಯುವಲ್ಲಿ ನಾರ್ಟನ್‌ನ ತಾಯಿ ಯಶಸ್ವಿಯಾಗಿದ್ದರೂ, ಲೀಗೋದ ಸಣ್ಣ ತುಂಡೊಂದು ಮೂಗಿನ ಹೊಳ್ಳೆಯೊಳಗೇ ಉಳಿದುಕೊಂಡಿತ್ತು. ವಿಚಿತ್ರವೆಂದರೆ ಈ ತುಣುಕು ಅಲ್ಲಿಯೇ ಉಳಿದಿರುವುದು ಸ್ವತಃ ನಾರ್ಟನ್‌ಗೂ ತಿಳಿದಿರಲಿಲ್ಲ.

ಶವರ್‌ನಲ್ಲಿ ನೀರು ಮುಖದ ಮೇಲೆ ಬೀಳುವಾಗ ಮೂಗನ್ನು ಜೋರಾಗಿ ಸೀಟುವಂತೆ ವೈದ್ಯರು ಸೂಚಿಸಿದ್ದರು. ಇತ್ತೀಚಿನ ಶುಷ್ಕ ಹಾಗೂ ಬಹು ತಾಪಮಾನದ ಬೇಸಿಗೆ ಸಂದರ್ಭದಲ್ಲಿ ನಾರ್ಟನ್ ಅದನ್ನು ನಿರಂತರವಾಗಿ ಮಾಡುತ್ತಿದ್ದರು.

ನನ್ನ ಮೂಗಿನಲ್ಲಿ ಸುಮಾರು ಮೂರು ದಶಕದಿಂದ ಸಿಲುಕಿಕೊಂಡಿದ್ದ ಲೀಗೋ, ಕೊನೆಗೂ ಇದೀಗ ಹೊರಬಂದಿದೆ. ಈಗ ನಾನು ಬಣ್ಣಗಳ ಸುವಾಸನೆ ಆಘ್ರಾಣಿಸಬಹುದು ಎಂದು ನಾರ್ಟನ್ ಹೇಳಿದ್ದಾರೆ.

ಅನಾರೋಗ್ಯಪೀಡಿತ ಮಗನ ಬಳಿ ಇದ್ದ ಮಹಿಳೆ ಮೇಲೆ ಅತ್ಯಾಚಾರ



ಕೋಲ್ಕತ್ತ: ಅನಾರೋಗ್ಯಪೀಡಿತ ಪುತ್ರನ ಪಕ್ಕದಲ್ಲಿದ್ದ ಮಹಿಳೆ ಮೇಲೆ ಆಸ್ಪತ್ರೆಯ ನೌಕರನೋರ್ವ ಅತ್ಯಾಚಾರವೆಸಗಿರುವ ಘಟನೆ ಕೋಲ್ಕತ್ತಾದ ಸರ್ಕಾರಿ ಆಸ್ಪತ್ರೆಯಲ್ಲಿ ವರದಿಯಾಗಿದೆ.

ಮಹಿಳೆ ನೀಡಿರುವ ದೂರಿನ ಪ್ರಕಾರ, ಕೋಲಕತ್ತಾದ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಈ ಘಟನೆ ನಡೆದಿದೆ. ಆರೋಪಿ ತನಯ್ ಪಾಲ್ (26) ಆಸ್ಪತ್ರೆಯ ಮಾಜಿ ವಾರ್ಡ್ ಬಾಯ್ ಆಗಿದ್ದು, ವಾರ್ಡ್‌ಗೆ ನುಗ್ಗಿದ ಆತ ಮಲಗಿದ್ದ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿ ಆಕೆಯನ್ನು ವಿವಸ್ತ್ರಗೊಳಿಸಿದ್ದಾನೆ. ಮಹಿಳೆ ನೀಡಿದ ದೂರನ್ನು ಆಧರಿಸಿ ಪೊಲೀಸ್ ಅಧಿಕಾರಿಗಳು ಬಿಎನ್‌ಎಸ್ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ. ಪೊಲೀಸರು ಪಾಲ್‌ನ ಮೊಬೈಲ್ ಫೋನ್‌ನ್ನು ವಶಪಡಿಸಿಕೊಂಡಿದ್ದು ಅದನ್ನು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಿದ್ದಾರೆ. ನಂತರ ಆತನನ್ನು ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಮೈಸೂರು ಮಿತ್ರ ಮಂಗಳವಾರ 17 ಸೆಪ್ಟೆಂಬರ್ 2024

ಆಶ್ರಮ ಶಾಲೆಯಲ್ಲಿ ಕಂಬಳಿ ಹುಳುಗಳ ಕಾಟ

● ವಿದ್ಯಾರ್ಥಿಗಳು, ಶಿಕ್ಷಕರಿಗೆ ಭಯದ ವಾತಾವರಣ ● ಗ್ರಾಪಂನಿಂದ ಔಷಧ ಸಿಂಪಡಣೆ


ಸಿದ್ದಾಪುರ, 16–ಕಾಡಂಚಿನ ಬಸವನಹಳ್ಳಿ ವಾಲ್ಮೀಕಿ ಆಶ್ರಮ ಶಾಲೆಯಲ್ಲಿ ಕಂಬಳಿ ಹುಳಗಳ ಕಾಟ ಹೆಚ್ಚಾಗಿದ್ದು, ಇದರಿಂದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಭಯದ ವಾತಾವರಣ ಉಂಟಾಗಿದೆ.

ವಿರಾಜಪೇಟೆ ತಾಲೂಕಿನ ಚೆನ್ನಯ್ಯನಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೆನ್ನಂಗಿ ಬಸವನ ಹಳ್ಳಿ ಆಶ್ರಮ ಶಾಲೆಯ ಮೂರು ಕಟ್ಟಡಗಳ ಪೈಕಿ ಎರಡು ಕಟ್ಟಡಗಳಲ್ಲಿ ರಾಶಿ ರಾಶಿ ಕಂಬಳಿ ಹುಳಗಳು ತುಂಬಿದ್ದು, ಶಾಲೆಯಲ್ಲಿ ಊಟ, ನಿದ್ರೆ ಇನ್ನಿತರ ತೊಂದರೆಯಾಗಿದೆ.

ವಾರದ ಹಿಂದೆ ಕಡಿಮೆ ಕಾಣಿಸಿಕೊಂಡಿದ್ದ ಕಂಬಳಿ ಹುಳಗಳು ದಿನ ಕಳೆದಂತೆ ಶಾಲಾ ಗೋಡೆಗಳಲ್ಲಿ ರಾಶಿ ರಾಶಿಯಾಗಿ ತುಂಬಿ ಹೋಗಿವೆ. ಹಾಸ್ಟೆಲ್ ಚಾವಣಿಯಿಂದ ನೆಲ, ಹಾಸಿಗೆ ತುಂಬಾ ಹರಿದಾಡುತ್ತಿದ್ದು, ಹುಳ ಗಳ ಕಾಟದಿಂದ ಶಿಕ್ಷಕರು ಹಾಗೂ ವಿದ್ಯಾರ್ಥಿ ಗಳಿಗೆ ಭಾರೀ ತಲೆ ನೋವಾಗಿ ಪರಿಣಮಿಸಿದೆ.

ವಾರದ ಹಿಂದೆ ಗ್ರಾಮ ಪಂಚಾಯಿತಿಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಪಂಚಾಯಿತಿ ಸಿಬ್ಬಂದಿ ಶಾಲೆಯ ಚಾವಣಿ ಹಾಗೂ ಕಟ್ಟಡಗಳಿಗೆ ಔಷಧ ಸಿಂಪಡಿಸಿದ್ದರು. ಜೊತೆಗೆ ಕೈಲ್ ಮುಹೂರ್ತ, ಗೌರಿ–ಗಣೇಶ ಹಬ್ಬದ ಕಾರಣ ವಿದ್ಯಾರ್ಥಿಗಳಿಗೆ ರಜೆ ಘೋಷಿಸಲಾಗಿತ್ತು. ಇದೀಗ ಮತ್ತೆ ಹುಳ ಗಳು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿವೆ.

ಸೋಮವಾರ ಈದ್–ಮಿಲಾದ್ ರಜೆ ಇದ್ದರಿಂದ ಮತ್ತೆ ಶಾಲಾ ಕಟ್ಟಡಕ್ಕೆ ಔಷಧ ಸಿಂಪಡಿಸಲಾಗಿದೆ ಎಂದು ಶಾಲಾ ಮುಖ್ಯ ಶಿಕ್ಷಕ ಸಿದ್ದಲಿಂಗಶೆಟ್ಟಿ ತಿಳಿಸಿದ್ದಾರೆ.

ಬಸವನಹಳ್ಳಿ ವಾಲ್ಮೀಕಿ ಆಶ್ರಮ ಶಾಲೆಯ ಕಟ್ಟಡದಲ್ಲಿ ರಾಶಿ ರಾಶಿ ಕಂಬಳಿ ಹುಳಗಳು ತುಂಬಿರುವುದು.

ವಿಡಿಯೋ ಮೂಲಕ ಶಾಸಕರ ಗಮನಕ್ಕೆ

ಆಶ್ರಮ ಶಾಲೆಯಲ್ಲಿ ಕಂಬಳಿ ಹುಳಗಳು ಕಾಟದ ಬಗ್ಗೆ ಪೋಷಕರು ವಿಡಿಯೋ ಮಾಡಿ ಕ್ಷೇತ್ರದ ಶಾಸಕರು ಹಾಗೂ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ನಂತರ ಶಾಸಕ ಎ.ಎಸ್.ಪೊನ್ನಣ್ಣ, ತಕ್ಷಣ ಕಂಬಳಿ ಹುಳಗಳ ತೆರವುಗೊಳಿಸಿ ಶುಚಿತ್ವಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಬಳಿಕ ಸೋಮವಾರ ರಜೆ ಇದ್ದರೂ ಶಿಕ್ಷಕರು ಸ್ಥಳಕ್ಕೆ ಆಗಮಿಸಿ ಗ್ರಾಮ ಪಂಚಾಯಿತಿ ಸಿಬ್ಬಂದಿ ಮೂಲಕ ಔಷಧ ಸಿಂಪಡಿಸಿದ್ದಾರೆ.

ವಯನಾಡು ದುರಂತ ಕೊಡಗಿನಲ್ಲೂ ಸಾಧ್ಯತೆ

● ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಆತಂಕ

● ಜಿಲ್ಲೆಯಲ್ಲಿ ಬೃಹತ್ ಭೂ ಪರಿವರ್ತನೆ ತಡೆಯಲು ಒತ್ತಾಯ



ಹುದಿಕೇರಿಯಲ್ಲಿ ಸಿಎನ್‌ಸಿ ವತಿಯಿಂದ ನಡೆದ ಜನಜಾಗೃತಿ ಕಾರ್ಯಕ್ರಮದಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿದರು.

ಮಡಿಕೇರಿ, ಸೆ.16– ಕೊಡಗು ಜಿಲ್ಲೆಯಲ್ಲಿ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಶೀಘ್ರ ತಡೆಯದಿದ್ದಲ್ಲಿ ಕೇರಳದ ವಯನಾಡು ಮಾದರಿ ಪ್ರಕೃತಿ ದುರಂತ ಇಲ್ಲಿಯೂ ಸಂಭವಿಸಬಹುದು ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು. ನಾಚಪ್ಪ ಆತಂಕ ವ್ಯಕ್ತಪಡಿಸಿದರು.

ಹುದಿಕೇರಿಯಲ್ಲಿ ಸೋಮವಾರ ಸಿಎನ್‌ಸಿ ವತಿ ಯಿಂದ ನಡೆದ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿಯಲ್ಲಿ ತೊಡಗಿರುವ ಉದ್ಯಮಪತಿ ಬಂಡ ವಾಳಶಾಹಿಗಳು ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಸಮಾಜ ಸೇವೆಯ ಮುಖವಾಡ ತೊಟ್ಟು ಕೊಡುಗೆಗಳನ್ನು ನೀಡುತ್ತಿದ್ದಾರೆ. ಕಪ್ಪು ಹಣವನ್ನು ಬಿಳಿ ಮಾಡುವುದಕ್ಕಾಗಿ ಕೊಡಗಿನ ಪ್ರಕೃತಿ ಮೇಲೆ ದಾಳಿ ನಡೆಸಿ ರೆಸಾರ್ಟ್, ವಿಲ್ಲಾ, ಟೌನ್‌ಶಿಪ್‌ಗಳ ನಿರ್ಮಾಣಕ್ಕಾಗಿ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಮಾಡುತ್ತಿರುವ ಮಾಫಿಯಾಗಳು ಅರಣ್ಯ ಪ್ರದೇಶವನ್ನು ಕೂಡ ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಸರ್ಕಾರದ ಕೃಪಾಕಟಾಕ್ಷದಿಂದ ಸಾವಿರಾರು ಮರ ಗಳು ಹನನವಾಗುತ್ತಿವೆ. ಭಾರಿ ಸ್ಫೋಟಕಗಳನ್ನು ಬಳಸಿ ಭೂಗರ್ಭಕ್ಕೆ ಹಾನಿ ಮಾಡಲಾಗುತ್ತಿದೆ. ಪ್ರಕೃತಿ ವಿಕೋಪದ ಅಪಾಯದಲ್ಲಾಗ ಅಮಾಯಕ ಕೊಡವರ ಮೇಲೆ ಹಾಕಲಾಗುತ್ತಿದೆ. ಈ ಎಲ್ಲಾ ಅಕ್ರಮಗಳನ್ನು ಮುಚ್ಚಿಡುವ ಉದ್ದೇಶದಿಂದ ಬಂಡವಾಳಶಾಹಿ ಗಳು ಜಿಲ್ಲೆಯ ಜನರಿಗೆ ವೈದ್ಯಕೀಯ ಸೇವೆ, ಆಂಬ್ಯುಲೆನ್ಸ್, ಪ್ರಯಾಣಿಕರ ತಂಗುದಾಣ ಸೇರಿದಂತೆ ವಿವಿಧ ಆಮಿಷಗಳನ್ನೊಡ್ಡಿ ಸಮಾಜ ಸೇವೆಯ ನಾಟಕ ಆಡುತ್ತಿದ್ದಾರೆ ಎಂದು ದೂರಿದರು.

ಇದೇ ವೇಳೆ ಸಿಎನ್‌ಸಿ ಪ್ರಮುಖರು ಹಾಗೂ ಗ್ರಾಮಸ್ಥರು ಭೂ ಪರಿವರ್ತನೆ ಮತ್ತು ವಿಲೇವಾರಿ ವಿರುದ್ಧ ನಿರ್ಣಯ ಕೈಗೊಂಡು ಸಿಎನ್‌ಸಿ ಹೋರಾಟಕ್ಕೆ ಬೆಂಬಲ ಸೂಚಿಸಿ, ಪ್ರಜಾಪ್ರಭುತ್ವ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಬೊಜ್ಜಂಗಡ ರಮ್ಯಾ, ಚೆಕ್ಕೇರ ಜಾನ್ಸಿ, ಮಂಡಂಗಡ ತಾರಾ, ಚಂಗುಲಂಡ ಸೂರಜ್, ಕೋಳೇರ ರಾಜ, ದಡ್ಡೇರ ಸುರೇಶ್, ನೂರೇರ ಚಿಟ್ಟಿಯಪ್ಪ, ಮಂಡೇಚಂಡ ಪೊನ್ನಪ್ಪ, ಮಂಡಂಗಡ ಬೋಪಣ್ಣ, ಬಲ್ಯಮಿದೇರಿರ ಪ್ರಕಾಶ್, ಚಕ್ಕೇರ ರಮೇಶ್, ಬಲ್ಯಮಾಡ ಸೋಮಯ್ಯ, ಅಚೆಯಾಡ ಸುಕ್‌ದೇವ, ಚಕ್ಕೇರ ಪ್ರಭು, ಕಿರಿಯಮಾಡ ಮಿಲನ್, ಚೊಟ್ಟೆಯಂಡ ಮಾಡ ಬಿಪಿನ್, ಅಜ್ಜಿಕುಟ್ಟಿರ ಲೋಕೇಶ್, ಬೊಟ್ಟಂಗಡ ಗಿರೀಶ್, ಅಪ್ಪೆಯಂಗಡ ಮಾಲೆ ವಿವಿಧ ಗ್ರಾಮಸ್ಥರು ಪಾಲ್ಗೊಂಡಿದ್ದರು.

ವಿರಾಜಪೇಟೆಯಲ್ಲಿ ಈದ್–ಮಿಲಾದ್ ಆಚರಣೆ



ವಿರಾಜಪೇಟೆ ತಾಲೂಕು ಮೈದಾನದಲ್ಲಿ ಈದ್–ಮಿಲಾದ್ ಪ್ರಯುಕ್ತ ಮಕ್ಕಳು ಹೂವಿನ ನೃತ್ಯ ಪ್ರದರ್ಶಿಸಿದರು.

ವಿರಾಜಪೇಟೆ, ಸೆ.16–ಪಟ್ಟಣದ ಶಾಫಿಜುಮಾ ಮಸೀದಿ ಹಾಗೂ ನುಸರುಉಲ್ಲಾ ಮದರಸ ವತಿ ಯಿಂದ ಸೋಮವಾರ ಈದ್–ಮಿಲಾದ್ ಹಬ್ಬದ ತಾಲೂಕು ಮೈದಾನದಲ್ಲಿ ಆಚರಿಸಲಾಯಿತು.

ನುಸರುಉಲ್ಲಾ ಮದರಸದಿಂದ ಖಾಸಗಿ ಬಸ್ ನಿಲ್ದಾಣ, ಸುಣ್ಣದ ಬೀದಿ, ಗೋಣಿಕೊಪ್ಪ ರಸ್ತೆ ದೊಡ್ಡಟ್ಟಿ ಚೌಕಿ ಮಾರ್ಗವಾಗಿ ಮುಖ್ಯರಸ್ತೆ ಗಡಿಯಾರ ಕಂಬ, ಕಾರು ನಿಲ್ದಾಣ ರಸ್ತೆ ಹಾಗೂ ತಾಲೂಕು ಮೈದಾನದವರೆಗೆ ಮೆರವಣಿಗೆ ನಡೆಯಿತು. ತಾಲೂಕು ಮೈದಾನದಲ್ಲಿ ವಿದ್ಯಾರ್ಥಿಗಳು ದೇಶ ಭಕ್ತಿ ಗೀತೆ ಹಾಡಿದರು. ನಂತರ ಮಕ್ಕಳ ಹೂವಿನ ನೃತ್ಯ, ಸ್ಕೌಟ್ ಆ್ಯಂಡ್ ಗೈಡ್ಸ್ ನೃತ್ಯ, ದಫ್ ಆಟ್ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಇದೇ ವೇಳೆ ಮುಸ್ಲಿಮರು ದೊಡ್ಡಟ್ಟಿ ಚೌಕಿ ಬಳಿಯ ಅರಸುನಗರದ ವಿಘ್ನೇಶ್ವರ ಸೇವಾ ಸಮಿತಿ ಸದಸ್ಯರು ಮುಸ್ಲಿಮರಿಗೆ ತಂಪುಪಾನೀಯ ವಿತರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಫಿ ಮಸೀದಿ ಸ್ವಾಗತ ಸಮಿತಿ ಅಧ್ಯಕ್ಷ ಮಹ್ಮದ್ ರಾಫಿ ಮಾತನಾಡಿ, ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಆಶಯವನ್ನು ಎಲ್ಲರೂ ಮೈಗೂಡಿಸಿಕೊಳ್ಳುವಂತಾಗಬೇಕು ಎಂದರು.

ಶಾಫಿಜುಮಾ ಮಸೀದಿಯ ಖತೀಬ್‌ರಾದ ಹಾರಿಶ್ ಬಾಕವಿ ಸಮಾರಂಭ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶಾಫಿ ಮಸೀದಿ ಅಧ್ಯಕ್ಷ ಕೆ.ಪಿ. ರಶೀದ್ ಹಾಜಿ, ನಿವೃತ್ತ ನ್ಯಾಯಾಧೀಶ ಶಫೀರ್, ಮಸೀದಿ ಸಮಿತಿ ಕಾರ್ಯದರ್ಶಿ ಅಬೂಕರ್ ಸಿದ್ದಿಕ್, ಸದಸ್ಯ ಮಹಮದ್ ಶರೀಫ್, ಸ್ವಾಗತ ಸಮಿತಿ ಉಪಾಧ್ಯಕ್ಷ ಕೆ.ಪಿ.ಪೈಜಲ್, ಎಸ್‌ಕೆಎಸ್‌ಎಸ್, ವಿವಿಧ ಸಂಘಟನೆಯವರು ಹಾಜರಿದ್ದರು.

ಕೂಡಿಗೆಯಲ್ಲಿ ಸೌಹಾರ್ದ ಜಾಥಾ...



ಕುಶಾಲನಗರ ಸಮೀಪದ ಕೂಡಿಗೆ ಮುಹಿಯುದ್ದೀನ್ ಜುಮ ಮಸೀದಿಯ ಮೀಲಾದ್ ಹಾಗೂ ನಾರಿಯತ್ ಸ್ವಲಾತ್ ಕಮಿಟಿ ವತಿಯಿಂದ ಪ್ರವಾದಿ ಮುಹಮ್ಮದ್ ಪೈಗಂಬರ್ ಜನ್ಮದಿನ ಅಂಗವಾಗಿ ಸೌಹಾರ್ದ ಜಾಥಾ ನಡೆಸಲಾಯಿತು.

ಮಹಿಳಾ ಕಾಂಗ್ರೆಸ್ ಸದಸ್ಯತ್ವ ಅಭಿಯಾನ

ಮಡಿಕೇರಿ, ಸೆ.16–ಮಹಿಳಾ ಕಾಂಗ್ರೆಸ್ ಸ್ಥಾಪನೆಯಾಗಿ 40 ವರ್ಷ ಪೂರ್ಣಗೊಂಡ ಹಿನ್ನೆಲೆ ಮತ್ತು ಮಹಿಳಾ ಕಾಂಗ್ರೆಸ್ ಸಂಸ್ಥಾಪನಾ ದಿನದ ಅಂಗವಾಗಿ ಕೊಡಗು ಮಹಿಳಾ ಕಾಂಗ್ರೆಸ್ ವತಿಯಿಂದ ಸದಸ್ಯತ್ವ ನೋಂದಣಿ ಅಭಿಯಾನ ನಗರದಲ್ಲಿ ನಡೆಯಿತು.

ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಸುರಯ್ಯ ಅಬ್ರಾರ್, ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಲ್ಕ ಲಂಬಾ ಹಾಗೂ ರಾಜ್ಯಾಧ್ಯಕ್ಷೆ ಸೌಮ್ಯ ರೆಡ್ಡಿ ಅವರ ಸೂಚನೆ ಮೇರೆಗೆ ಅಭಿಯಾನ ನಡೆಸಲಾಗುತ್ತಿದೆ. ಪಕ್ಷದ ಬಲವರ್ಧನೆಗೆ ಇದು ಸಹಕಾರಿಯಾಗಿದೆ. ಜಿಲ್ಲೆಯ ಪ್ರತಿ ಬ್ಲಾಕ್ ಮಟ್ಟದಲ್ಲಿ ಸದಸ್ಯತ್ವ ಅಭಿಯಾನ ನಡೆಸಿ, ಮಹಿಳಾ ಘಟಕದ ಶಕ್ತಿ ಹೆಚ್ಚಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭ ಮಹಿಳಾ ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷೆ ಶೈಲಾ ಕುಟ್ಟಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಿನಾಜ್ ಪ್ರವೀಣ್, ಪ್ರಮುಖರಾದ ಧನ್ಯಾ ರವಿ, ಪ್ರೇಮಾ ಲಿಂಗಪ್ಪ, ರೇವತಿ ರಮೇಶ್, ಕೆ.ಎಂ. ಪುಷ್ಪಾ ಮುತ್ತಪ್ಪ ಮತ್ತಿತರರು ಉಪಸ್ಥಿತರಿದ್ದರು.



ಮಡಿಕೇರಿಯಲ್ಲಿ ಮಹಿಳಾ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಅಭಿಯಾನ ನಡೆಯಿತು.

ಶಾಸಕ ಮುನಿರತ್ನ ವಿರುದ್ಧ ಕ್ರಮಕ್ಕೆ ಒತ್ತಾಯ

ಮಡಿಕೇರಿ,ಸೆ.16–ಒಕ್ಕಲಿಗ ಜನಾಂಗದ ವಿರುದ್ಧ ಹೇಳಿಕೆ ನೀಡಿರುವ ಆರೋಪ ಎದುರಿಸುತ್ತಿರುವ ಶಾಸಕ ಮುನಿರತ್ನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಕೊಡಗು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಸ್.ಎಂ.ಚಂಗಪ್ಪ ಒತ್ತಾಯಿಸಿದ್ದಾರೆ.

ಒಕ್ಕಲಿಗ ಸಮುದಾಯದ ಬಗ್ಗೆ ಘರ್ಷಣೆಗೆ ಪ್ರಚೋದನೆ ಉಂಟು ಮಾಡುವ ರೀತಿ ಮುನಿರತ್ನ ಮಾತನಾಡಿದ್ದಾರೆ ಮತ್ತು ಒಕ್ಕಲಿಗ ಮಹಿಳೆಯರ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಲಾಗಿದೆ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮೂಡಿಸುವ ಜವಾಬ್ದಾರಿ ಹೊತ್ತಿರುವ ಜನಪ್ರತಿನಿಧಿಯೊಬ್ಬರು ತಮ್ಮ ಲಾಭಕ್ಕಾಗಿ ಜನಾಂಗಗಳ ನಡುವೆ ದ್ವೇಷ ಹುಟ್ಟಿಸಲು ಮುಂದಾಗಿರುವುದು ಖಂಡನೀಯ. ಮುನಿರತ್ನ ನೀಡಿರುವ ಕೀಳು ಮಟ್ಟದ ಹೇಳಿಕೆಯನ್ನು ಯಾರೂ ಸಮರ್ಥಿಸಬಾರದು ಎಂದು ಮನವಿ ಮಾಡಿದ್ದಾರೆ.



ಎಸ್.ಎಂ.ಚಂಗಪ್ಪ

ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿ, ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು. ಮುನಿರತ್ನ ಇಡೀ ಒಕ್ಕಲಿಗ ಸಮುದಾಯದ ಕ್ಷಮೆಯಾಚಿಸಬೇಕು ಎಂದು ಕೊಡಗು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಸ್.ಎಂ.ಚಂಗಪ್ಪ, ಸೋಮವಾರಪೇಟೆ ಅಧ್ಯಕ್ಷ ಎ.ಆರ್.ಮುತ್ತಣ್ಣ ಹಾಗೂ ಕುಶಾಲನಗರ ಅಧ್ಯಕ್ಷ ಎಂ.ಕೆ.ದಿನೇಶ್ ಆಗ್ರಹಿಸಿದ್ದಾರೆ.

ಬಿಜೆಪಿಯಿಂದ ಇಂದಿನಿಂದ ವಿವಿಧ ಸೇವಾ ಕಾರ್ಯ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್.ಸುಂದರ್ ಮಾತನಾಡಿದರು.

ಚಾಮರಾಜನಗರ, ಸೆ.16–ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬ ಅಂಗವಾಗಿ ಸೆ.17ರಿಂದ ಅ.2ರವರೆಗೆ ಜಿಲ್ಲಾ ಬಿಜೆಪಿ ವತಿಯಿಂದ ವಿವಿಧ ಸೇವಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪಕ್ಷದ ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ ವಿವಿಧ ಮೋರ್ಚಾಗಳ ವತಿಯಿಂದ ಹಲವು ಕಾರ್ಯಕ್ರಮ ನಡೆಯಲಿದೆ. ಸೆ.17ರಂದು ಬೆಳಗ್ಗೆ 8 ಗಂಟೆಗೆ ನಗರದ ಮೂಡಲಧ್ವನಿ ವೃದ್ಧಾಶ್ರಮದಲ್ಲಿ ಉಪಹಾರ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಯುವ ಮೋರ್ಚಾ ವತಿಯಿಂದ ರಕ್ತದಾನ ಶಿಬಿರ, ಓಬಿಸಿ ಮೋರ್ಚಾದಿಂದ ಗಿಡ ನೆಡುವ ಕಾರ್ಯಕ್ರಮ, ಮಹಿಳಾ ಮೋರ್ಚಾದಿಂದ ಸದಸ್ಯತ್ವ ಅಭಿಯಾನ ನಡೆಸಲಾಗುವುದು. ಸೆ.25ರಂದು ಪಂಡಿತ್ ದೀನ್ ದಯಾಳ್ ಹುಟ್ಟುಹಬ್ಬ ಅಂಗವಾಗಿ ಜಿಲ್ಲಾದ್ಯಂತ ಏಕಕಾಲದಲ್ಲಿ ಮನೆ ಮನೆಗೆ ತೆರಳಿ ಸದಸ್ಯತ್ವ ಅಭಿಯಾನ ನಡೆಸಲಾಗುವುದು. ಅ.2ರಂದು ಗಾಂಧಿ ಜಯಂತಿ ಅಂಗವಾಗಿ ಖಾದಿ ಬಟ್ಟೆ, ವಸ್ತುಗಳ ಖರೀದಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ ಮಾತನಾಡಿ, ನರೇಂದ್ರ ಮೋದಿ ಹುಟ್ಟುಹಬ್ಬವನ್ನು ಜಿಲ್ಲೆಯಲ್ಲಿ ಹಲವು ಸಮಾಜ ಸೇವೆಗಳ ಮೂಲಕ ವಿಶೇಷವಾಗಿ ಆಚರಿಸಲಾಗುವುದು. 15 ದಿನ ಹಲವು ಕಾರ್ಯಕ್ರಮಗಳು ನಡೆಯಲಿವೆ. ಅಲ್ಲದೆ ಎಸ್‌ಸಿ, ಎಸ್‌ಟಿ ಮೋರ್ಚಾ ವತಿಯಿಂದ ಆಯ್ದ ಶಾಲೆಗಳಿಗೆ ಸುಣ್ಣಬಣ್ಣ ಹಚ್ಚಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಕಮಲಮ್ಮ ಹಾಜರಿದ್ದರು.

ಸಾರ್ವಜನಿಕ ಮಸ್ಜಿದ್ ದರ್ಶನದಿಂದ ಹಿಂದೂ–ಮುಸ್ಲಿಂ ಭಾವೈಕ್ಯತೆ ಇಮ್ಮಡಿ

ಹರವೆ ವಿರಕ್ತ ಮಠಾಧ್ಯಕ್ಷ ಶ್ರೀ ಸರ್ಪಭೂಷಣ ಸ್ವಾಮೀಜಿ ಅಭಿಮತ

ಚಾಮರಾಜನಗರ, ಸೆ.16–ಸಾರ್ವಜನಿಕ ಮಸ್ಜಿದ್ ದರ್ಶನದಿಂದ ಹಿಂದೂ–ಮುಸ್ಲಿಂ ಭಾವೈಕ್ಯತೆ ಇಮ್ಮಡಿಗೊಳಿಸುತ್ತದೆ ಎಂದು ಹರವೆ ವಿರಕ್ತ ಮಠಾಧ್ಯಕ್ಷರಾದ ಶ್ರೀ ಸರ್ಪಭೂಷಣಸ್ವಾಮೀಜಿ ತಿಳಿಸಿದರು.

ನಗರದ ಡಿವಿಯೇಷನ್ ರಸ್ತೆಯ ಮದೀನಾ ಮಸ್ಜಿದ್‌ನಲ್ಲಿ ಸೋಮವಾರ ಜಮಾಅತೆ ಇಸ್ಲಾಮೀ ಹಿಂದ್ ಹಾಗೂ ಮದೀನಾ ಮಸ್ಜಿದ್ ಆಶ್ರಯದಲ್ಲಿ ಸಿರತ್ ಪ್ರಯುಕ್ತ ನಡೆದ ಸಾರ್ವಜನಿಕ ಮಸ್ಜಿದಿ ದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇವಸ್ಥಾನ, ಚರ್ಚ್‌ಗಳಲ್ಲಿ ದೇವರು ಇದ್ದಾನೆ ಎಂದು ಪ್ರಾರ್ಥನೆ ಮಾಡುವಂತೆ ಮುಸ್ಲಿಮರಿಗೆ ಮಸೀದಿಗಳಲ್ಲಿ ದೇವರು ಕಾಣುತ್ತಾನೆ. ಹೀಗಾಗಿ ಅವರು ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸುವ ಮೂಲಕ ತಮ್ಮ ಇಷ್ಟಾರ್ಥ ಸಿದ್ಧಿಸಿಕೊಳ್ಳುತ್ತಾರೆ. ಅದೇ ರೀತಿ ಹಿಂದೂಗಳು ದೇವಸ್ಥಾನಗಳಲ್ಲಿ ಹಾಗೂ ಕ್ರೈಸ್ತರು ದೇವಾಲಯಗಳಲ್ಲಿ ಪ್ರಾರ್ಥಿಸುತ್ತಾರೆ. ಹೀಗಾಗಿ ಮಸೀದಿಗಳು ಸಹ ಪುಣ್ಯ ಕ್ಷೇತ್ರಗಳಾಗಿದ್ದು, ಈ ನಿಟ್ಟಿನಲ್ಲಿ ಮಸೀದಿಗಳಲ್ಲಿ ಸಾರ್ವಜನಿಕರಿಗೆ ಮುಕ್ತ ಪ್ರವೇಶ ದೊರೆತಾಗ ಇತರೆ ಧರ್ಮದವರಲ್ಲಿ ಇರುವ ತಪ್ಪು ಗ್ರಹಿಕೆ ಹಾಗೂ ಅಂತರ ದೂರವಾಗುತ್ತದೆ. ಜೊತೆಗೆ ಪರಸ್ಪರ ಭಾವೈಕ್ಯತೆ, ಸಾಮರಸ್ಯ ಮೂಡುತ್ತದೆ ಎಂದರು.



ಚಾಮರಾಜನಗರದಲ್ಲಿ ನಡೆದ ಸಾರ್ವಜನಿಕ ಮಸ್ಜಿದಿ ದರ್ಶನ ಕಾರ್ಯಕ್ರಮದಲ್ಲಿ ಶ್ರೀ ಸರ್ಪಭೂಷಣಸ್ವಾಮೀಜಿ ಮಾತನಾಡಿದರು.

ಜಮಾಅತೆ ಇಸ್ಲಾಮೀ ಹಿಂದ್ ರಾಜ್ಯ ಕಾರ್ಯದರ್ಶಿ ಜನಾಬ್ ಮಹಮ್ಮದ್ ಕುಂಞ ಮಾತನಾಡಿ, ಮಸ್ಜಿದಿ ದರ್ಶನ ಎನ್ನುವುದು ಪ್ರತಿಯೊಬ್ಬ ಮನುಷ್ಯನಿಗೂ ತಿಳುವಳಿಕೆ ಮೂಡಿಸುವ ಕಾರ್ಯಕ್ರಮವಾಗಿದೆ. ಯಾವುದೇ ಮನುಷ್ಯ ಆ ಧರ್ಮದ ಬಗ್ಗೆ ಅರಿವಿಲ್ಲದೆ ಅದರ ಪೂರ್ವಾಪರ ಚಿಂತನೆ ಇಲ್ಲದೆ ದ್ವೇಷ ಮನೋಭಾವನೆಗಳನ್ನು ಬೆಳೆಸಿಕೊಳ್ಳುತ್ತೇನೆ. ಹೀಗಾಗಿ ಇದರ ಅರಿವು ಮೂಡಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

ಮಸ್ಜಿದ್ ದರ್ಶನ ಶಾಂತಿ ಸಮಾಜ ನಿರ್ಮಿಸುವ ಉದ್ದೇಶವಾಗಿದೆ. ಇತ್ತೀಚಿನ ದಿನಗಳಲ್ಲಿ ವಿವಿಧ ಧರ್ಮಗಳ ಬಗ್ಗೆ ಅಪಪ್ರಚಾರ ಮಾಡುವ ಕಾರ್ಯಗಳು ನಡೆಯುತ್ತಿವೆ ಅಪಪ್ರಚಾರಗಳಿಂದ ದೂರವಾಗಲು ಪ್ರತಿಯೊಬ್ಬರಲ್ಲೂ ಶಾಂತಿ ಸಹಬಾಳ್ವೆ ನೆಲೆಸಲು ಮಸ್ಜಿದಿ ದರ್ಶನ ಕಾರ್ಯಕ್ರಮ ಸಹಾಯಕವಾಗಲಿವೆ ಎಂದು ತಿಳಿಸಿದರು.

ಮಸೀದಿಗಳ ಬಗ್ಗೆ ಸಮಾಜದಲ್ಲಿ ಬಹಳ ತಪ್ಪು ಕಲ್ಪನೆಗಳಿವೆ. ಅದನ್ನು ಹೋಗಲಾಡಿಸಲು ಅಲ್ಲಿಗೆ ಭೇಟಿ ನೀಡಿದರೆ, ಅಲ್ಲಿ ಯಾವುದೇ ನಿಗೂಢತೆ ಇಲ್ಲ. ಮಸೀದಿ ಎಂಬುದು ದೇವರನ್ನು ಆರಾಧಿಸುವ ಮತ್ತು ಪ್ರಾರ್ಥಿಸುವ ಸ್ಥಳವಾಗಿದೆ. ಮಸೀದಿಗಳಿಗೆ ಹಿಂದೂಗಳು, ಮಂದಿರಗಳಿಗೆ ಮುಸ್ಲಿಮರು ಹಾಗೂ ಚರ್ಚ್‌ಗಳಿಗೆ ಹಿಂದೂ, ಮುಸ್ಲಿಮರು ಹೋಗುವ ವಾತಾವರಣ ನಿರ್ಮಾಣವಾಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ, ಎಲ್ಲಾ ಧರ್ಮಗಳಿಂತ ಮಾನವ ಧರ್ಮ ದೊಡ್ಡದು. ಮನುಷ್ಯ ತನ್ನ ಧರ್ಮವನ್ನು ಪ್ರೀತಿಸುವ ಜೊತೆಗೆ ಇತರೆ ಧರ್ಮಗಳನ್ನು ಗೌರವಿಸಲು ಮುಂದಾಗಬೇಕು. ಮಸ್ಜಿದಿ ದರ್ಶನ ಜಿಲ್ಲೆಯಲ್ಲಿ ಆಯೋಜಿಸಿರುವುದು ಸಂತಸ ತಂದಿದೆ. ನಾವೆಲ್ಲರೂ ಸಹೋದರರಂತೆ ಸಹಬಾಳ್ವೆ ಮೂಲಕ ದೇಶದ ಅಭಿವೃದ್ಧಿಯತ್ತ ಗಮನ ನೀಡೋಣ ಎಂದರು.

ಚಾಮರಾಜನಗರ ದಾರುಲ್ ಕಝಾ ಖಾಝೀ ಮೌಲಾನಾ ಮುಫ್ತಿ ಜಾಫರ್ ಹುಸೇನ್ ಖಾಸ್ಮಿ, ಸಂತಪಾಲರ ದೇವಾಲಯ ಫಾದರ್ ಅಂಥೋನಪ್ಪ, ಮದೀನಾ ಮಸೀದಿ ಅಧ್ಯಕ್ಷ ನಯೀಮ್ ಉಲ್‌ಹಕ್, ಮದೀನಾ ಕಾರ್ಯದರ್ಶಿ ವಾಸೀಂ ಪಾಷಾ, ಪುರ್ಖಾನ್, ಖಲೀಕ್ ಅಹಮದ್, ಡಾ. ಬಸವರಾಜೇಂದ್ರ, ಡಾ.ಶ್ವೇತಾ, ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಹೊಂಗನೂರು ಚಂದ್ರು, ಚಾಮರಾಜೇಶ್ವರ ದೇವಸ್ಥಾನ ಪ್ರಧಾನ ಅರ್ಚಕ ರಾಮಕೃಷ್ಣ ಭಾರದ್ವಾಜ್, ವಕ್ಫ್ ಸಲಹೆ ಸಮಿತಿ ಜಿಲ್ಲಾಧ್ಯಕ್ಷ ಸೈಯದ್ ಇರ್ಷಾದ್ ಉಲ್ಲಾ, ಮದೀನಾ ಮಸೀದಿ ಉಪಾಧ್ಯಕ್ಷ ಸೈಯದ್ ರೈಸ್ ಅಹಮದ್, ಖಜಾಂಚಿ ಸೈಯದ್ ಪುಖಾನ್ ಅಮಹದ್, ನಾಝೀವ್ ಉಲ್ಲಾ ಷರೀಫ್, ಅಬ್ದುಲ್ ಷರೀಫ್, ಅಬ್ದುಲ್ ಖಲೀಲ್, ಮಹಮದ್ ಕಬೀರ್, ಅಫ್ಜಲ್ ಅಮಹದ್, ಸರದಾರ್ ಬೇಗ್ ಮೊದಲಾದವರು ಭಾಗವಹಿಸಿದ್ದರು.

ಇದೇ ವೇಳೆ ಮಸೀದಿಯಿಂದ ಬಾಳೆ ಎಲೆಯಲ್ಲಿ ಹೋಳಿಗೆ ಊಟದ ಸಹಪಂಕ್ತಿ ಭೋಜನಾ ಏರ್ಪಡಿಸಲಾಗಿತ್ತು. ಸಾರ್ವಜನಿಕರಿಗೆ ಮಸ್ಜಿದಿ ನೀಡಲಾಯಿತು.

ಮೃತ ಮಹದೇವ ಪತ್ನಿಗೆ ಜೀವನಜ್ಯೋತಿ ಚೆಕ್ ವಿತರಣೆ



ಎಸ್‌ಬಿಐನ ಹೊಂಗನೂರು ಶಾಖೆಯಲ್ಲಿ ಜೀವನ ಜ್ಯೋತಿ ವಿಮಾ ಯೋಜನೆಯಡಿ ಮೃತ ಮಹದೇವ ಪತ್ನಿಗೆ ಇಂಟಿಗ್ರಾ ಕಂಪನಿಯ ಜಿಲ್ಲಾ ಸಂಯೋಜಕ ಸಿದ್ದರಾಜು ಚೆಕ್ ವಿತರಿಸಿದರು.

ಚಾಮರಾಜನಗರ: ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಸುರಕ್ಷಾ ಮತ್ತು ಜೀವನ ಜ್ಯೋತಿ ವಿಮಾ ಯೋಜನೆ ಜಾರಿಗೊಳಿಸಿದ್ದು, ಅರ್ಹರು ಈ ಯೋಜನೆಯ ಅನುಕೂಲ ಪಡೆಯಬೇಕು ಎಂದು ಇಂಟಿಗ್ರಾ ಕಂಪನಿಯ ಜಿಲ್ಲಾ ಸಂಯೋಜಕ ಸಿದ್ದರಾಜು ತಿಳಿಸಿದರು.

ತಾಲೂಕಿನ ಹೊಂಗನೂರು ಗ್ರಾಮದ ಭಾರತೀಯ ಸ್ಟೇಟ್ ಬ್ಯಾಂಕ್ ಆವರಣದಲ್ಲಿ ಪ್ರಧಾನಮಂತ್ರಿ ಜೀವನಜ್ಯೋತಿ ವಿಮಾ ಯೋಜನೆಯಡಿ ಮೃತ ಮಹದೇವ ಅವರ ಪತ್ನಿಗೆ ಚೆಕ್ ವಿತರಿಸಿ ಮಾತನಾಡಿದ ಅವರು, 18 ರಿಂದ 70 ವರ್ಷದೊಳಗಿನ ಮಹಿಳೆ ಮತ್ತು ಪುರುಷರು ಸಮೀಪದ ಬ್ಯಾಂಕ್‌ನಲ್ಲಿ ಈ ಯೋಜನೆಯ ವಿಮೆ ಪಡೆಯುವ ಮೂಲಕ ತಮ್ಮ ಭವಿಷ್ಯ ಉಜ್ವಲಗೊಳಿಸಿಕೊಳ್ಳಬೇಕು ಎಂದರು.

ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆಯಡಿ ವಾರ್ಷಿಕ 20 ರೂ. ಪಾವತಿಸಿದರೆ 2 ಲಕ್ಷ ರೂ. ದುರ್ಘಟನೆ ವಿಮೆ ಪಡೆಯಬಹುದು. ಪ್ರಧಾನಮಂತ್ರಿ ಜೀವನಜ್ಯೋತಿ ವಿಮಾ ಯೋಜನೆಯಡಿ 342 ರೂ. ಪಾವತಿಸಿದರೆ 2 ಲಕ್ಷ ರೂ. ವಿಮೆ ಪಡೆಯಬಹುದು. ಈ ಎರಡು ವಿಮೆಗಳು ಮೃತ ಅವಲಂಬಿತರ ನೆರವಿಗೆ ತಕ್ಷಣ ಬರಲಿದೆ. ಸಾರ್ವಜನಿಕರು ಈ ಯೋಜನೆಗಳ ಲಾಭಪಡೆಯಬೇಕು ಎಂದರು.

ಬ್ಯಾಂಕ್ ವ್ಯವಸ್ಥಾಪಕ ಅವನೀಶ್‌ಕುಮಾರ್ ಪಾಠಕ್ ಮಾತನಾಡಿ, ನಮ್ಮ ಶಾಖೆಯಿಂದ ಮೃತ ಅವಲಂಬಿತ ಕುಟುಂಬದ ಮೂವರು ಫಲಾನುಭವಿಗಳು ವಿಮಾ ಚೆಕ್ ಪಡೆದಿದ್ದಾರೆ. ಮತ್ತಷ್ಟು ಗ್ರಾಹಕರನ್ನು ಈ ವಿಮೆ ಯೋಜನೆಗೆ ಸೇರಿಸಲು ಉದ್ದೇಶಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಕ್ಯಾಷಿಯರ್ ರಾಹುಲ್ ನಾಯಕ್, ಇಂಟಿಗ್ರಾ ಕಂಪನಿ ಮೇಲ್ವಿಚಾರಕ ಬಸವ ನಾಯಕ, ಬ್ಯಾಂಕಿನ ವ್ಯವಹಾರ ಪ್ರತಿನಿಧಿ ಸುನೀಲ್, ಆಲೂರು ನಾಗೇಂದ್ರ ಮೂರ್ತಿ ಹಾಜರಿದ್ದರು.

ನಾಯಕ ಸಮುದಾಯ ಸರ್ಕಾರಿ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಿ

ಚಾಮರಾಜನಗರ, ಸೆ.16–ನಾಯಕ ಸಮುದಾಯ ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಮೈಸೂರು ಮತ್ತು ಚಾಮರಾಜನಗರ ನಾಯಕರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ ಸಲಹೆ ನೀಡಿದರು.

ನಗರದ ವಾಲ್ಮೀಕಿ ಭವನದಲ್ಲಿ ನಾಯಕ ಸಮುದಾಯ ಹಾಗೂ ವಿರಾಟ್ ಶಿವು ಸ್ನೇಹ ಬಳಗದ ವತಿಯಿಂದ ನಗರಸಭೆ ನೂತನ ಅಧ್ಯಕ್ಷ ಎಸ್.ಸುರೇಶ್ ಅವರಿಗೆ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮುದಾಯದಿಂದ ನಮ್ಮ ತಂದೆ ಮಹದೇವ ನಾಯಕ, ಪದ್ಮನಾಯಕ್, ಸುರೇಶ್ ನಾಯಕ ಸೇರಿದಂತೆ ಅನೇಕರು ನಗರಸಭಾಧ್ಯಕ್ಷರಾಗಿದ್ದರು. ನಾವೆಲ್ಲರೂ ಮೀಸಲಾತಿಯಡಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದೇವೆ. ಆದರೆ, ನಮ್ಮ ತಂದೆಯವರ ಹಾದಿಯಲ್ಲಿ ಸುರೇಶ್ ಸಾಮಾನ್ಯ ವರ್ಗದಡಿ ನಗರಸಭೆ ಅಧ್ಯಕ್ಷರಾಗಿರುವುದು ತುಂಬಾ ಸಂತಸ ತಂದಿದೆ ಎಂದರು.



ಚಾಮರಾಜನಗರ ವಾಲ್ಮೀಕಿ ಭವನದಲ್ಲಿ ನಡೆದ ನಗರಸಭೆ ಅಧ್ಯಕ್ಷ ಎಸ್.ಸುರೇಶ್ ಅವರನ್ನು ಸನ್ಮಾನಿಸಲಾಯಿತು.

ನಾಯಕ ಸಮಾಜ ಇತರ ವರ್ಗಗಳ ಬೆಂಬಲದಿಂದ ಮಾತ್ರ ಚುನಾವಣೆಯಲ್ಲಿ ಗೆಲ್ಲಬಹುದೇ ಹೊರತು ಒಂದೇ ಸಮುದಾಯದಿಂದ ಆಗಲ್ಲ. ಎಲ್ಲಾ ವರ್ಗದ ಸಹಕಾರದಿಂದ ಸುರೇಶ್ ಅಧ್ಯಕ್ಷರಾಗಿದ್ದಾರೆ. ಅವರಿಗೆ ಸಮುದಾಯ ಹಾಗೂ ಶಿವು ವಿರಾಟ ಸ್ನೇಹ ಬಳಗದಿಂದ ಸನ್ಮಾನಿಸಿ, ಅವರ ಜವಾಬ್ದಾರಿಯನ್ನು ಹೆಚ್ಚು ಮಾಡಿದೆ. ಸುರೇಶ್ ಅವರು ಹೆಚ್ಚು ಜನಸೇವೆ ಮಾಡುವಂತಾಗಲಿ ಎಂದು ಆಶಿಸಿದರು.

ಸಮುದಾಯದ ಮುಖಂಡ ಕೆಲ್ಲಂಬಳ್ಳಿ ಸೋಮನಾಯಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ಆಯೋಜಕ ಶಿವು ವಿರಾಟ್, ಶಿಕ್ಷಕ ಕೆಂಪನಪುರ ಸಿದ್ದರಾಜು, ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಜಯಸುಂದರ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್. ಸುಂದರ್, ನಗರಸಭೆ ಮಾಜಿ ಅಧ್ಯಕ್ಷರಾದ ಸುರೇಶ್ ನಾಯಕ, ಮಹದೇವ ನಾಯಕ, ಮಾಜಿ ಸದಸ್ಯರಾದ ರಾಜೇಶ್ ನಾಯಕ, ಸುಂದರ್‌ರಾಜು, ಚೆಂಗುಮಣಿ, ಮುಖಂಡರಾದ ಕೃಷ್ಣನಾಯಕ, ರಾಜು ನಾಯಕ, ಯ.ಮಹದೇವ ನಾಯಕ, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಬುಲೆಟ್ ಚಂದ್ರು ಇತರರಿದ್ದರು.

ಡಾ.ಶ್ರೀನಿವಾಸ್‌ಗೆ ಸೇವಾ ರತ್ನ ಪ್ರಶಸ್ತಿ

ಕೊಳ್ಳೇಗಾಲ: ಬೆಂಗಳೂರಿನ ಕನ್ನಡ ಫಿಲಂ ಛೇಂಬರ್ ಸಂಸ್ಥೆ ವಿವಿಧ ಕ್ಷೇತ್ರದ ಸಾಧಕರಿಗೆ ನೀಡುವ ಶಿಕ್ಷಣ ಸೇವಾ ರತ್ನ ಪ್ರಶಸ್ತಿ ಪಟ್ಟಣದ ಡಾ.ಶ್ರೀನಿವಾಸ್ ಅವರಿಗೆ ಸಂದಿದೆ.

ಮೈಸೂರಿನ ಮಹಾರಾಣಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ.ಶ್ರೀನಿವಾಸ್, ಮೈಸೂರು ವಿಶ್ವವಿದ್ಯಾನಿಲಯ ವತಿಯಿಂದ 2 ಪ್ರಬಂಧ ಮಂಡಿಸಿ ಪಿಎಚ್.ಡಿ ಪಡೆದಿದ್ದಾರೆ.



ಶ್ರೀನಿವಾಸ್

ನಿಲ್ದಾಣದಲ್ಲಿ ತಪ್ಪಿದ ಬಸ್ ಅನಾಹುತ

ಬೇಗೂರು, ಸೆ.16–ಬಸ್ ಆ್ಯಕ್ಸೆಲ್ ಕಟ್ಟಾಗಿ ಪ್ರಯಾಣಿಕರು ಅಪಾಯದಿಂದ ಪಾರಾದ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಾರಿಗೆ ಬಸ್ ನಿಲ್ದಾಣದಲ್ಲಿ ಸೋಮವಾರ ರಾತ್ರಿ ನಡೆದಿದೆ.



ನಿಲ್ದಾಣದಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಬಸ್ ಆ್ಯಕ್ಸೆಲ್ ಕಟ್ಟಾಗಿ ರಸ್ತೆ ಪಕ್ಕಕ್ಕೆ ಚಲಿಸಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ನಂತರ ಪ್ರಯಾಣಿಕರನ್ನು ಬಸ್‌ನಿಂದ ಇಳಿಸಿ ಮತ್ತೊಂದು ಬಸ್‌ನಲ್ಲಿ ಕಳುಹಿಸಲಾಯಿತು.

ಒಂದನೇ ಪುಟದಿಂದ

ಪ್ರಾಧಿಕಾರಕ್ಕೆ ಹಸ್ತಾಂತರ

ಅಂಬಾರಿಯಲ್ಲಿ ಮತ್ತೆ ಪ್ರತಿಷ್ಠಾಪನೆ ಮಾಡಲಾಗುತ್ತದೆ ಎಂದು ಟಿ.ಎಸ್.ಸುಬ್ರಹ್ಮಣ್ಯ ವಿವರಿಸಿದರು. 'ಮಿತ್ರ'ನೊಂದಿಗೆ ಮಾತನಾಡಿದ ಎಂ.ಜೆ.ರೂಪರವರು, ಅಮ್ಮನವರ ಉತ್ಸವ ಮೂರ್ತಿ ಸ್ವೀಕರಿಸಿದ್ದು, ಬೆಟ್ಟದಲ್ಲಿ ಉತ್ಸವ ಮೂರ್ತಿಗೆ ನವರಾತ್ರಿ ಸಂದರ್ಭದಲ್ಲಿ 9 ದಿನಗಳೂ ವಿಶೇಷ ಪೂಜೆ ಆಗುತ್ತದೆ. ವಿಜಯದಶಮಿಯಂದು ಮತ್ತೆ ಅರಮನೆ ಮಂಡಳಿ ವಶಕ್ಕೆ ಒಪ್ಪಿಸಲಾಗುತ್ತದೆ ಎಂದು ತಿಳಿಸಿದರು.

ಪಿತೃಪಕ್ಷ ಹಿನ್ನಲೆ: ಪ್ರತಿವರ್ಷ ದಸರಾ ಮಹೋತ್ಸವ ಉದ್ಘಾಟನೆಗೆ ನಾಲ್ಕೈದು ದಿನ ಅಥವಾ ವಾರ ಇರುವಾಗ ಅರಮನೆ ಮಂಡಳಿಯಿಂದ ಚಾಮುಂಡಿಬೆಟ್ಟಕ್ಕೆ ಚಾಮುಂಡೇಶ್ವರಿ ಅಮ್ಮನವರ ಉತ್ಸವ ಮೂರ್ತಿ ಹಸ್ತಾಂತರ ಮಾಡುವುದು ವಾಡಿಕೆ. ಆದರೆ ಈ ಬಾರಿ ಉದ್ಘಾಟನೆಗೆ ಇನ್ನು 15 ದಿನಗಳು ಉಳಿದಿರುವಾಗಲೇ ಉತ್ಸವ ಮೂರ್ತಿ ಹಸ್ತಾಂತರ ಮಾಡಲಾಗಿದೆ. ಇದಕ್ಕೆ ಪಿತೃಪಕ್ಷ (ಸೆ.17ರಿಂದ ಅ.2ರವರೆಗೆ) ಕಾರಣವಾಗಿದೆ. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಟಿ.ಎಸ್.ಸುಬ್ರಹ್ಮಣ್ಯ, ಪಿತೃಪಕ್ಷ ಪ್ರಾರಂಭವಾಗುವ ಹಿನ್ನಲೆಯಲ್ಲಿ ಈ ಬಾರಿ ಬೇಗ ಪಡೆದುಕೊಂಡಿದ್ದಾರೆ. ನಾಳೆಯಿಂದ ಪಿತೃಪಕ್ಷ ಆರಂಭಗೊಳ್ಳಲಿದ್ದು, ಈ ಅವಧಿಯಲ್ಲಿ ಉತ್ಸವ ಮೂರ್ತಿ ಕೊಂಡೊಯ್ಯುವುದು ಬೇಡವೆಂದು ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತರು ತಿಳಿಸಿದರು. ಈ ಹಿನ್ನೆಲೆಯಲ್ಲಿ ಹಸ್ತಾಂತರ ಪ್ರಕ್ರಿಯೆ ಇಂದೇ ಪೂರ್ಣಗೊಳಿಸಲಾಯಿತು ಎಂದು ತಿಳಿಸಿದರು.

ವಿಶೇಷ ಸಂಪುಟ ಸಭೆ

ಸಭೆಯಲ್ಲಿ ಚರ್ಚೆ ನಡೆಸಿ ಮುಂದಿನ ಕಾನೂನು ಕ್ರಮಕ್ಕೆ ಸಂಪುಟ ಒಪ್ಪಿಗೆ ನೀಡಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಮುಡಾ ಮತ್ತು ವಾಲ್ಮೀಕಿ ಹಗರಣವನ್ನು ಪ್ರತಿಪಕ್ಷಗಳು ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತಿವೆ, ಬಿಜೆಪಿ ಮತ್ತು ಜೆಡಿಎಸ್ ಅಧಿಕಾರದಲ್ಲಿ ಇದ್ದಾಗ ನಡೆದಿರುವ ಹಗರಣಗಳನ್ನು ಬಯಲಿಗೆಳೆಯಲು ಸರ್ಕಾರ ಮುಂದಾಗಿದೆ.

ಇದರ ಮೊದಲ ಭಾಗವಾಗಿ ಕೆಲವು ಹಗರಣಗಳನ್ನು ಬಯಲು ಮಾಡಿ ಅದರಲ್ಲಿ ಪಾಲ್ಗೊಂಡಿರುವ ಮುಖಂಡರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮಕ್ಕೆ ಹಸಿರು ನಿಶಾನೆ ತೋರಲೇಬೇಕೆಂದು ಮುಖ್ಯಮಂತ್ರಿಗಳು ಸಂಕಲ್ಪ ತೊಟ್ಟಿದ್ದಾರೆ.

ಸಂಪುಟದ ಉಪಸಮಿತಿ ನೀಡಿರುವ ವರದಿ ಬಗ್ಗೆ ಮುಖ್ಯಮಂತ್ರಿ ಅವರು ಕಾನೂನು ತಜ್ಞರೊಂದಿಗೆ ಈಗಾಗಲೇ ಸಮಾಲೋಚನೆ ನಡೆಸಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಲಬುರಗಿ ಸಂಪುಟ ಸಭೆಯಲ್ಲಿ ಭಾಗವಹಿಸಲು ತಮ್ಮ ಅಮೆರಿಕಾ ಪ್ರವಾಸ ಮೊಟಕುಗೊಳಿಸಿ ಹಿಂತಿರುಗಿದ್ದಾರೆ. ಸಂಪುಟ ಸಭೆಯಲ್ಲಿ ತಪ್ಪದೆ ಹಾಜರಿರುವಂತೆ ಎಲ್ಲಾ ಸಂಪುಟ ಸಹೋದ್ಯೋಗಿಗಳಿಗೂ ಮುಖ್ಯಮಂತ್ರಿ ಸಂದೇಶ ರವಾನಿಸಿದ್ದಾರೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಕಲಬುರಗಿ ಜಿಲ್ಲಾ ಉಸ್ತುವಾರಿ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಸರ್ಕಾರಿ ಹುದ್ದೆಗಳ ಭರ್ತಿ ಮತ್ತು ನೀರಾವರಿ ಯೋಜನೆಗಳು ಸೇರಿದಂತೆ ಕೆಲವು ಪ್ರಮುಖ ವಿಷಯಗಳ ಬಗ್ಗೆ ಮಂಗಳವಾರ ನಡೆಯಲಿರುವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದಿದ್ದಾರೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಉದ್ದೇಶದ ಹಿನ್ನೆಲೆಯಲ್ಲಿ ಈ ಸಭೆ ನಡೆಯುತ್ತಿದ್ದು, ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳ ಸ್ಥಾಪನೆಗೆ ಒತ್ತು ನೀಡಲು ಸಂಪುಟ ಕೆಲವು ಮಹತ್ವದ ನಿರ್ಧಾರ ಕೈಗೊಳ್ಳಲಿದೆ ಎಂದರು.

ಕೇಜ್ರಿವಾಲ್ ರಾಜೀನಾಮೆ?

ಎಂದು ಎಎಪಿ ಮುಖ್ಯಸ್ಥರು ಹೇಳಿದ್ದಾರೆ. ಅಬಕಾರಿ ನೀತಿ ಪ್ರಕರಣದಲ್ಲಿ ಜಾಮೀನಿನ ಮೇಲೆ ತಿಹಾರ್ ಜೈಲಿನಿಂದ ಬಿಡುಗಡೆಯಾದ ಕೆಲವು ದಿನಗಳಲ್ಲಿ ಎಎಪಿ ರಾಷ್ಟ್ರೀಯ ಸಂಚಾಲಕ ಭಾನುವಾರ 48 ಗಂಟೆಗಳ ಒಳಗೆ ರಾಜೀನಾಮೆ ನೀಡುವುದಾಗಿ ಮತ್ತು ದೆಹಲಿಯಲ್ಲಿ ಶೀಘ್ರ ಚುನಾವಣೆ ನಡೆಸಬೇಕು ಎಂದು ಕೋರಿದ್ದರು.

ಜನರು 'ಪ್ರಾಮಾಣಿಕತೆಯ ಪ್ರಮಾಣಪತ್ರ' ನೀಡುವವರೆಗೆ ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳುವುದಿಲ್ಲ ಎಂದು ಶಪಥ ಕೇಜ್ರಿವಾಲ್ ಮಾಡಿದ್ದರು ಮತ್ತು ಒಂದೆರಡು ದಿನಗಳಲ್ಲಿ ಎಎಪಿ ಶಾಸಕರ ಸಭೆ ನಡೆಸಿ ಪಕ್ಷದ ನಾಯಕರೊಬ್ಬರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಹೇಳಿದ್ದರು.

ಅಭಿವೃದ್ಧಿ ಕಾರ್ಯಕ್ಕೆ ಗ್ರಹಣ

ಪರಿಣಾಮ ಬಜೆಟ್‌ನಲ್ಲಿ ನಿರ್ಣಯವಾದ ಯೋಜನೆಗಳಿಗೆ ಕ್ರಿಯಾ ಯೋಜನೆ (Action Plan)ಯನ್ನೇ ಮಾಡದಿದ್ದ ಮೇಲೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನ ಮಾಡುವ ಪ್ರಶ್ನೆಯೇ ಬರುವುದಿಲ್ಲ.

ನೆಲ ಕಚ್ಚಿದ ಅಭಿವೃದ್ಧಿ ಯೋಜನೆಗಳು: ಪ್ರಾಧಿಕಾರದ ಸಾಮಾನ್ಯ ಸಭೆಗಳು ನಡೆಯದಿರುವುದು, ಬಜೆಟ್ ಸಭೆಯ ನಿರ್ಣಯಗಳು, ನಡಾವಳಿಗೆ ಸರ್ಕಾರದಿಂದ ಅನುಮೋದನೆ ಪಡೆದು ಕ್ರಿಯಾ ಯೋಜನೆ ಮಾಡದಿರುವುದರಿಂದ ಕಬಿನಿ ಕುಡಿಯುವ ನೀರಿನ 2ನೇ ಹಂತದ ಕಾಮಗಾರಿ, ವಸತಿರಹಿತರಿಗೆ ಕೈಗೆಟಕುವ ದರದಲ್ಲಿ ಮನೆ ಒದಗಿಸುವ ಗುಂಪು ವಸತಿ ಯೋಜನೆಯಂತಹ ಅಭಿವೃದ್ಧಿ ಕಾರ್ಯಗಳಿಗೆ ಗ್ರಹಣ ಹಿಡಿದಂತಾಗಿದೆ.

ತಾಂತ್ರಿಕ ಅಡಚಣೆಗಳು: ಕಾಂಗ್ರೆಸ್ ಸರ್ಕಾರ ರಚನೆಯಾದ ಬಳಿಕ ಮುಡಾ ಅಧ್ಯಕ್ಷರಾಗಿ 2024ರ ಮಾರ್ಚ್ 1ರಂದು ಅಧಿಕಾರ ವಹಿಸಿಕೊಂಡ ಕೆ. ಮರೀಗೌಡರಿಗೆ ಮಾರ್ಚ್ 16ರಿಂದ 2024ರ ಲೋಕಸಭಾ ಸಾರ್ವತ್ರಿಕ ಚುನಾವಣಾ ಮಾದರಿ ನೀತಿ ಸಂಹಿತೆ ಎದುರಾಯಿತು. ಜೂನ್ 4ರಂದು ನೀತಿ ಸಂಹಿತೆ ಅಂತ್ಯಗೊಂಡರೂ, ಜೂನ್ 24ರಂದು ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್‌ಗೆ ಶೇ. 50:50ರ ಅನುಪಾತದಡಿ ನಿವೇಶನ ಮಂಜೂರು ಮಾಡುತ್ತಿರುವುದು ಅಕ್ರಮ ಎಂದು ಅಧ್ಯಕ್ಷರು ಟಿಪ್ಪಣಿ ಬರೆದ ಹಿನ್ನಲೆಯಲ್ಲಿ ಹಗರಣ ಬಯಲಾಗುತ್ತಿದ್ದಂತೆಯೇ ಜುಲೈ 2ರಂದು ಮುಡಾ ಆಯುಕ್ತರು, ಕಾರ್ಯದರ್ಶಿಗಳನ್ನು ಸರ್ಕಾರ ವರ್ಗಾವಣೆ ಮಾಡಿತು.

ತದನಂತರ ಸರ್ಕಾರ ನಿವೇಶನ ಹಂಚಿಕೆ ಹಗರಣದ ತನಿಖೆಗೆ ಆದೇಶಿಸಿ, ವರದಿ ಸಲ್ಲಿಸುವವರೆಗೆ ಮುಡಾ ಸಭೆ, ಕಾಮಗಾರಿ ಪ್ರಕ್ರಿಯೆ, ಕಚೇರಿಯ ದೈನಂದಿನ ಕೆಲಸ ಕಾರ್ಯಗಳನ್ನು ನಡೆಸಬಾರದೆಂದು ಆದೇಶಿಸಿದ್ದರಿಂದ ಈವರೆಗೆ ಮುಡಾದ ಎಲ್ಲಾ ಚಟುವಟಿಕೆ ಸ್ಥಗಿತಗೊಂಡಿದೆ. ಈ ಮಧ್ಯೆ ರಿಯಲ್ ಎಸ್ಟೇಟ್ ಉದ್ಯಮಿಗಳು, ಡೆವಲಪರ್ಸ್, ನಿರ್ಮಾಣ ಸಂಸ್ಥೆಗಳ ಮುಖ್ಯಸ್ಥರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮುಡಾದಲ್ಲಿ ಯಾವುದೇ ಚಟುವಟಿಕೆ ನಡೆಯದೇ ನಮ್ಮ ವಹಿವಾಟಿಗೆ ಭಾರೀ ಪೆಟ್ಟು ಬಿದ್ದಿದೆ. ಈ ಸಂಬಂಧ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಇತ್ತೀಚೆಗೆ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಪಡಿಸಿದ್ದಾರೆ.

ಚುನಾವಣೆಗೆ ಹೆಚ್‌ಡಿಕೆ ಒತ್ತಾಯ

ದಾಹ ಸ್ಥಳೀಯ ಸಂಸ್ಥೆಗಳ ಕತ್ತು ಹಿಸುಕುವ ಕೆಲಸ ಮಾಡಿದೆ, ನಿಮ್ಮ ಪ್ರಜಾಪ್ರಭುತ್ವದ ಜನಪರತೆ ಜಾಹೀರಾತುಗಳಲ್ಲಷ್ಟೇ ಝಗಮಗಿಸುತ್ತಿದೆ ಎಂದು ಟ್ವೀಟ್ ಮಾಡಿ ಕಿಡಿಕಾರಿದ್ದಾರೆ. ಮಾನವ ಸರಪಳಿ ನೆಪದಲ್ಲಿ ಪುಕ್ಕಟೆ ಪ್ರಚಾರ ಗಿಟ್ಟಿಸಿಕೊಳ್ಳುವ ಕೆಲಸ ಮಾಡಿದ್ದೀರಿ, ಆದರೆ, ನೈಜವಾಗಿ ಪ್ರಜಾಪ್ರಭುತ್ವ ಉಳಿಸುವ ಕೆಲಸ ಮಾಡುತ್ತಿಲ್ಲ.

ಅಧಿಕಾರಕ್ಕೆ ಬಂದಾಗಿನಿಂದಲೂ ಪ್ರಜಾಪ್ರಭುತ್ವದ ಸರಪಳಿಯ ತಳಮಟ್ಟದ ಆಧಾರ ಸ್ತಂಭಗಳಾದ ಜಿಲ್ಲಾ, ತಾಲೂಕು ಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಿಲ್ಲ ಏತಕ್ಕೆ ಎಂದು ಪ್ರಶ್ನಿಸಿರುವ ಕುಮಾರಸ್ವಾಮಿ, ಸ್ಥಳೀಯ ನಾಯಕರು ಅಧಿಕಾರಕ್ಕೆ ಬಂದರೆ ನೀವು ವಿಧಾನಸೌಧದಲ್ಲಿ ಮೆರೆಯಲು ಸಾಧ್ಯವಿಲ್ಲ. ಅಲ್ಲವೇ ಎಂದು ವ್ಯಂಗ್ಯವಾಡಿದ್ದಾರೆ. ನೀವು ಮತ್ತು ನಿಮ್ಮ ಪಕ್ಷದ ಅಧ್ಯಕ್ಷರು ತಿಂಗಳಿಗೊಮ್ಮೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಹೇಳಿಕೆ ನೀಡುತ್ತೀರಿ. ಪಕ್ಷದ ಕಾರ್ಯಕರ್ತರ ಸಭೆಗಳನ್ನೂ ಮಾಡುತ್ತೀರಿ. ಆದರೆ, ಫಲಿತಾಂಶ ಮಾತ್ರ ಶೂನ್ಯ. ಚುನಾವಣೆ ಬದಲು ಸರ್ಕಾರಿ ಹಣದಲ್ಲಿ ಜಾಹೀರಾತುಗಳನ್ನು ನೀಡಿ ಮಾನವ ಸರಪಳಿಯಿಂದ ಪ್ರಜಾಪ್ರಭುತ್ವ ಉಳಿಸುತ್ತೇವೆ ಎಂದು ಬಡಾಯಿ ಮಾತುಗಳನ್ನು ಆಡುತ್ತೀರಿ. ವಿಚ್ಛಿದ್ರ ಶಕ್ತಿಗಳನ್ನು ದಮನ ಮಾಡುವುದು ಎಂದರೆ, ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ತತ್ವಕ್ಕೆ ತಿಲಾಂಜಲಿ ಇಡುವುದೇ ಎಂದು ಪ್ರಶ್ನಿಸಿರುವ ಅವರು, ಮಾನವ ಸರಪಳಿಯಿಂದ ಪ್ರಜಾಪ್ರಭುತ್ವ ಉಳಿಯುತ್ತದೆಯೇ. ಜನರ ತೆರಿಗೆ ಹಣದ ಪೋಲು ಪ್ರಜಾಪ್ರಭುತ್ವಕ್ಕೆ ಭೂಷಣವೇ ಎಂದು ಅವರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ನಂಬರ್ ಪ್ಲೇಟ್ ಅಳವಡಿಕೆಗೆ ಗಡುವು

ಎ.ಎಂ.ಯೋಗೀಶ್ ಹೇಳಿದ್ದಾರೆ. ಸೋಮವಾರದಿಂದ ದಂಡ ವಿಧಿಸುವುದಾಗಿ ಕರ್ನಾಟಕ ಸಾರಿಗೆ ಇಲಾಖೆ ಘೋಷಣೆ ಮಾಡಿತ್ತು. ಕರ್ನಾಟಕ ಪೊಲೀಸ್ ಇಲಾಖೆ ಸಂಚಾರ ವಿಭಾಗ, ಸಾರಿಗೆ ಇಲಾಖೆಯವರೂ ಹಳೆ ನಂಬರ್ ಪ್ಲೇಟ್ ಇದ್ದ ವಾಹನದವರಿಗೆ ದಂಡವನ್ನು ವಿಧಿಸಲು ಆರಂಭಿಸಲಿದ್ದಾರೆ ಎನ್ನಲಾಗಿತ್ತು.

ಆದರೆ, ಇದೀಗ ಮೂರು ದಿನದವರೆಗೆ ಕ್ರಮ ಕೈಗೊಳ್ಳದಂತೆ ಸಾರಿಗೆ ಇಲಾಖೆ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ, ಸದ್ಯಕ್ಕೆ ದಂಡದಿಂದ ಪಾರಾದಂತಾಗಿದೆ.

ಸುಮಾರು 1.5 ಕೋಟಿ ವಾಹನಗಳು ಇನ್ನೂ ಹೈ ಸೆಕ್ಯುರಿಟಿ ನಂಬರ್ ಪ್ಲೇಟ್‌ಗಳನ್ನು ಅಳವಡಿಸಿಕೊಂಡಿಲ್ಲ. ಗಡುವು ವಿಸ್ತರಣೆಗೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರ ಒಪ್ಪಿಗೆ ಬೇಕು ಎಂದು ಸಾರಿಗೆ ಇಲಾಖೆ ಮೂಲಗಳು ಮಾಹಿತಿ ನೀಡಿವೆ.

ಹಲವು ವಾಹನ ಮಾಲೀಕರು ಹೊಸ ನಂಬರ್ ಪ್ಲೇಟ್‌ಗಳಿಗಾಗಿ ಅರ್ಜಿ ಸಲ್ಲಿಸುತ್ತಾರೆ. ಆದರೆ, ವಾಹನ ಮಾರಾಟಗಾರರ ಬಳಿಗೆ ಹೋಗಿ ತಮ್ಮ ವಾಹನಗಳಿಗೆ ಹೊಸ ನಂಬರ್ ಪ್ಲೇಟ್‌ಗಳನ್ನು ಲಗತ್ತಿಸುತ್ತಿಲ್ಲ. ಹೀಗಾಗಿ ವಾಹನ ಡೀಲರ್‌ಗಳ ಬಳಿ ನೂರಾರು ನಂಬರ್ ಪ್ಲೇಟ್‌ಗಳು ಬಿದ್ದಿವೆ. ಅವುಗಳನ್ನು ವಾಹನಗಳಿಗೆ ಅಳವಡಿಸಿದ ನಂತರವೇ, ಎಚ್‌ಎಸ್‌ಆರ್‌ಪಿ ಪ್ರಕ್ರಿಯೆಯು ಕೊನೆಗೊಳ್ಳುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ. 2019ರ ಏಪ್ರಿಲ್ 1ರ ಮೊದಲು ನೋಂದಾಯಿಸಲ್ಪಟ್ಟ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಕಡ್ಡಾಯಗೊಳಿಸುವ ಅಧಿಸೂಚನೆಯನ್ನು 2023ರ ಆಗಸ್ಟ್‌ನಲ್ಲಿ ಹೊರಡಿಸಿತ್ತು. ಆರಂಭದಲ್ಲಿ 2023ರ ನವೆಂಬರ್ 17ರ ಗಡುವನ್ನು ನಿಗದಿಪಡಿಸಲಾಗಿತ್ತು. ನಿಧಾನಗತಿಯ ಅಳವಡಿಕೆಯ ಕಾರಣ ಗಡುವನ್ನು ಮೂರು ಬಾರಿ ವಿಸ್ತರಿಸಲಾಗಿತ್ತು. ಸಾರಿಗೆ ಇಲಾಖೆ ಅಂಕಿ ಅಂಶದ ಪ್ರಕಾರ ರಾಜ್ಯದಲ್ಲಿರುವ ಹಳೆಯ ಎರಡು ಕೋಟಿ ವಾಹನಗಳ ಪೈಕಿ ಶೇ.26ರಷ್ಟು ವಾಹನಗಳಿಗೆ ಮಾತ್ರ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಲಾಗಿದೆ. ವಾಹನ ಮಾಲೀಕರ ನೀರಸ ಪ್ರತಿಕ್ರಿಯೆಯಿಂದಾಗಿ ಎಚ್‌ಎಸ್‌ಆರ್‌ಪಿ ಅಳವಡಿಕೆ ಗಡುವನ್ನು ಈ ಹಿಂದೆ ಮೂರು ಬಾರಿ ವಿಸ್ತರಣೆ ಮಾಡಲಾಗಿದೆ.

ಚಾಮುಂಡೇಶ್ವರಿ ದೇವಾಲಯದಲ್ಲಿ ಭಕ್ತರಿಗೆ ಲಾಡು ಪ್ರಸಾದ ಸಿಕ್ತಿಲ್ಲಾ...!

- ಕಳೆದ 8 ದಿನದಿಂದ ಪ್ರಸಾದ ಲಾಡು ಇಲ್ಲದೆ ಬರಿಗೈನಲ್ಲಿ ವಾಪಸ್
- ದೇವಿ ಸನ್ನಿಧಿಯಲ್ಲಿ ಪ್ರಾಧಿಕಾರದಿಂದ ಸುಧಾರಣೆ ಬದಲು; ಅಧ್ವಾನ

> ಧಾರ್ಮಿಕ ಕ್ಷೇತ್ರದಲ್ಲಿ ಸರ್ಕಾರದಿಂದ ಪ್ರಾಧಿಕಾರ ರಚನೆಯಾದರೆ ಅಲ್ಲಿ ಚಪ್ಪಲಿ ಸ್ಟ್ಯಾಂಡ್‌ನಲ್ಲಿ ಉಚಿತ ಸೌಲಭ್ಯ ನೀಡಬೇಕೆಂಬ ನಿಯಮವಿದೆ. ಆದರೆ ಚಾಮುಂಡಿ ಬೆಟ್ಟದಲ್ಲಿ ಇನ್ನು ಕೂಡ ಚಪ್ಪಲಿ ಸ್ಟ್ಯಾಂಡ್‌ನಲ್ಲಿ ಶುಲ್ಕ ವಸೂಲಿ ಮಾಡಲಾಗುತ್ತಿದೆ.
> ಈಗಾಗಲೇ ಪ್ರಾಧಿಕಾರ ರಚನೆಯಾಗಿರುವ ಹಲವು ದೇವಸ್ಥಾನಗಳಲ್ಲಿ ಚಪ್ಪಲಿ ಬಿಡಲು ಹಣ ಪಡೆಯುವುದಿಲ್ಲ. ಚಪ್ಪಲಿ ಸ್ಟ್ಯಾಂಡ್‌ನಲ್ಲಿ ಭಕ್ತರಿಂದ ಚಪ್ಪಲಿ ಪಡೆಯಲು ಹಾಗೂ ನೀಡಲು ನೌಕರರನ್ನು ನಿಯೋಜಿಸಲಾಗುತ್ತದೆ.
> ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯಾದ ನಂತರ ಚಪ್ಪಲಿ ಸ್ಟ್ಯಾಂಡ್ ಟೆಂಡರ್ ರದ್ದು ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಚಪ್ಪಲಿ ಸ್ಟ್ಯಾಂಡ್ ನೋಡಿಕೊಳ್ಳಲು ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ ಎನ್ನಲಾಗಿದೆ.
> ಆದ್ಯೂ, ಚಪ್ಪಲಿ ಸ್ಟ್ಯಾಂಡ್‌ನಲ್ಲಿ ಹಣ ವಸೂಲಿ ಸಾಗಿದೆ ಎಂಬ ಆರೋಪ ಕೇಳಿ ಬಂದಿದೆ.

ಮೈಸೂರು, ಸೆ.16(ಬಿಎಲ್‌ಯು)– ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯಾದ ಮೇಲೆ ಸುಧಾರಣೆ ಬದಲು ಅಧ್ವಾನಗಳೇ ಹೆಚ್ಚಾಗುತ್ತಿವೆ ಎಂದು ದೂರಲಾಗುತ್ತಿದೆ. ಭಕ್ತರಿಗೆ ಪ್ರಸಾದ ಲಾಡು ದೊರಕದ ಬಗ್ಗೆ ದೂರಿದೆ. ತಾಯಿ ಚಾಮುಂಡೇಶ್ವರಿ ದರ್ಶನ ಪಡೆದ ಭಕ್ತರು ನಂತರ ಹೊರ ಬರುವ ವೇಳೆ ಹಣ ಕೊಟ್ಟು ಪ್ರಸಾದ ಲಾಡು ಪಡೆಯುತ್ತಿದ್ದರು. ಆದರೆ, ಈಗ ಭಕ್ತರಿಗೆ ಸಮರ್ಪಕವಾಗಿ ಲಾಡುಗಳೇ ಲಭಿಸುತ್ತಿಲ್ಲ.

ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಳೆದ ಎಂಟು ದಿನಗಳಿಂದಲೂ ಲಾಡು ಲಭ್ಯವಿಲ್ಲದೆ ಬಹಳಷ್ಟು ಭಕ್ತರು 'ಮೈಸೂರು ಮಿತ್ರ'ನ ಬಳಿ ದೂರಿದ್ದಾರೆ.

ಚಾಮುಂಡೇಶ್ವರಿ ದೇವಸ್ಥಾನ ಆಡಳಿತ ಮಂಡಳಿ ಅಧಿಕಾರವಧಿಯಲ್ಲಿ ಬೆಳಿಗ್ಗೆಯಿಂದ ರಾತ್ರಿ ತನಕ ಕೇಳಿದಷ್ಟು ಲಾಡು ಸಿಗುತ್ತಿತ್ತು. ದೇಶ– ವಿದೇಶದಿಂದ ಬರುವ



ಭಕ್ತರು ಹಣ ಕೊಟ್ಟು ದೇವಿಯ ಪ್ರಸಾದ ಲಾಡು ಖರೀದಿಸುತ್ತಿದ್ದರು.

ಚಾಮುಂಡೇಶ್ವರಿ ದೇವಸ್ಥಾನ ನಿತ್ಯ ಮೂರು ಕಾಲಮಾನ– ಬೆಳಿಗ್ಗೆ 7.30 ರಿಂದ ಮಧ್ಯಾಹ್ನ 2 ಗಂಟೆ, ಮಧ್ಯಾಹ್ನ 3.30 ರಿಂದ ಸಂಜೆ 6 ಗಂಟೆ ಹಾಗೂ ರಾತ್ರಿ 7.30 ರಿಂದ 9 ಗಂಟೆ ತನಕ ತೆರೆದಿರುತ್ತದೆ. ಈ ಅವಧಿಯಲ್ಲಿ ಪ್ರದಕ್ಷಿಣೆ ಬರುವ ದೇವಸ್ಥಾನದ ಪ್ರಾಂಗಣದ ಹಿಂಭಾಗದಲ್ಲಿ ಪ್ರಸಾದ ಲಾಡು ಮಾರಾಟವಿದೆ.

ಆದರೆ, ಈಗ ಎಂಟು ದಿನಗಳಿಂದ ಪ್ರಸಾದದ ಲಾಡು ಸಮರ್ಪಕವಾಗಿ ಸಿಗುತ್ತಿಲ್ಲ. ಕೆಲವರಿಗೆ ಸಿಕ್ಕರೆ ಮತ್ತೆ ಕೆಲವು ಭಕ್ತರು ಬರಿಗೈನಲ್ಲಿ ಹೋಗುತ್ತಿದ್ದಾರೆ.

ಪ್ರಸಾದ ಲಾಡು ಖರೀದಿಸಿ ಮನೆಯವರು ಮಾತ್ರವಲ್ಲ, ಸ್ನೇಹಿತರು, ಸಂಬಂಧಿಗಳು, ನೆರೆ ಹೊರೆಯವರಿಗೂ ಹಂಚುವುದು ಸರ್ವೆ ಸಾಮಾನ್ಯ. ಆದರೆ, ಈಗ ಪ್ರಸಾದದ ಲಾಡು ಲಭ್ಯವಿಲ್ಲದೆ ಭಕ್ತರು ಬರೀ ಹೂವು, ಹಣ್ಣು,ಕಾಯಿ ಹಿಡಿದು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಮೊದಲು ಟೆಂಡರ್ ಮೂಲಕ ಲಾಡು ಮಾರಾಟ ಮಾಡಲಾಗುತ್ತಿತ್ತು ಆದರೆ, ಟೆಂಡರ್ ರದ್ದು ಮಾಡಿ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವೇ ಲಾಡು ತಯಾರಿಸಿ, ವಿತರಣೆ ಮಾಡುತ್ತಿದೆ. ಆದರೆ ಭಕ್ತರಿಗೆ ಅವಶ್ಯವಿರುವಷ್ಟು ಲಾಡು ಕಲ್ಪಿಸಲು ಪ್ರಾಧಿಕಾರಕ್ಕೆ ಸಾಧ್ಯವಾಗುತ್ತಿಲ್ಲ.

ನಿನ್ನೆ ರಾತ್ರಿ 7 ಸಾವಿರ ಲಾಡುಗಳನ್ನು ತರಲಾಗಿತ್ತು. ಇದರಲ್ಲಿ 5 ಸಾವಿರವನ್ನು 100 ರೂಪಾಯಿ ಕೊಟ್ಟು ವಿಶೇಷ ದರ್ಶನ ಪಡೆದವರಿಗೆ ನೀಡಿದರೆ, ಉಳಿದ 2 ಸಾವಿರ ಲಾಡುಗಳನ್ನು ಸಾಮಾನ್ಯ ಪ್ರವೇಶದ ಭಕ್ತರಿಗೆ ನೀಡಲಾಯಿತು.

ಹಾಗಾಗಿ ಮಧ್ಯಾಹ್ನದ ವೇಳೆಗೆ ಖಾಲಿಯಾಗಿತ್ತು. ಈಗ ತಕ್ಷಣವೇ ಲಾಡುಗಳ ತಯಾರಿಸಿ ತರುವುದು ಅಸಾಧ್ಯ. ಇನ್ನೇನಿದ್ದರೂ ನಾಳೆ ಸಂಜೆಯೇ ಸಾಧ್ಯ ಅಲ್ಲಿ ತನಕ ಭಕ್ತರಿಗೆ ಪ್ರಸಾದ ಲಾಡು ಸಿಗುವುದಿಲ್ಲ.

ಚಾಮುಂಡೇಶ್ವರಿ ಶ್ರೀ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯಾದ ನಂತರ ದೇವಸ್ಥಾನದಲ್ಲಿ ಬಹಳಷ್ಟು ಸುಧಾರಣೆ ಆಗುತ್ತದೆ ಎಂದು ನಿರೀಕ್ಷೆ ಇತ್ತು. ಆದರೆ ಈಗ ಅಧ್ವಾನಗಳೆ ಹೆಚ್ಚಾಗಿವೆ ಎಂದೂ ಭಕ್ತವಲಯದಲ್ಲಿ ಕೇಳಿ ಬರುತ್ತದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ, ಪ್ರಸಾದ ಲಾಡುಗಳನ್ನು ಎಂದಿನಂತೆ ವಿತರಣೆ ಮಾಡಲಾಗುತ್ತಿದ್ದು, ಕೊರತೆ ಇಲ್ಲವಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಆದರೆ ಪ್ರಸಾದ ಲಾಡುಗಳ ಕೊರತೆ ಎದುರಾಗಿದೆ ಎಂದು ಭಕ್ತರು ದೂರಿದ್ದಾರೆ.

ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ವಾರ್ಷಿಕ ಮಹಾಸಭೆ



ಕರ್ನಾಟಕ ವಸ್ತುಪ್ರದರ್ಶನದ ಆವರಣದಲ್ಲಿ ಭಾನುವಾರ ಏರ್ಪಡಿಸಿದ್ದ ಮೈಸೂರಿನ ಗಾಂಧಿಚೌಕ ವೃತ್ತದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ಬ್ಯಾಂಕ್ ಅಧ್ಯಕ್ಷೆ ಪಿ.ರಾಜೇಶ್ವರಿ ಉದ್ಘಾಟಿಸಿದರು ಈ ವೇಳೆ ಉಪಾಧ್ಯಕ್ಷರಾದ ಸವಿತಾ, ನಿರ್ದೇಶಕರಾದ ರಾಜಕೀಯ ರವಿಕುಮಾರ್, ಎಸ್‌ಬಿಎಂ ಮಂಜು, ಜೆ.ಯೋಗೇಶ್, ಹರೀಶ್‌ಕುಮಾರ್, ಕೆ.ಉಮಾಶಂಕರ್, ಎಸ್.ಅರವಿಂದ, ಎ.ಮಂಚಪ್ಪ, ಪಡುವಾರಹಳ್ಳಿಯ ಎಂ.ರಾಮಕೃಷ್ಣ, ಸಿ.ರೇವಣ್ಣ, ಎಸ್.ಆರ್.ರವಿಕುಮಾರ್, ಎಸ್.ಶಿಲ್ಪ ಸೋಮಣ್ಣ, ವೃತ್ತಿಪರ ನಿರ್ದೇಶಕರಾದ ಸಿ.ಎಸ್.ರಾಮಕೃಷ್ಣಯ್ಯ, ಎಂ.ವೈ.ರಮೇಶ್‌ಗೌಡ, ಕಾರ್ಯದರ್ಶಿ ಕೆ.ಹರ್ಷಿತ್ ಗೌಡ ಇನ್ನಿತರರಿದ್ದರು.

ಸೈನಸೈಟಿಸ್ ಉಚಿತ ತಪಾಸಣಾ ಶಿಬಿರ

ಮೈಸೂರು,ಸೆ.16–ಮೈಸೂರಿನ ಸುಯೋಗ್ ಆಸ್ಪತ್ರೆ ವತಿಯಿಂದ ಸೆ.21ರವರೆಗೆ ಬೆಳಗ್ಗೆ 10ರಿಂದ ಸಂಜೆ 6ಗಂಟೆವರೆಗೆ ಸೈನಸೈಟಿಸ್ ಉಚಿತ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಮೂಗು ಸೋರುವಿಕೆ, ನೆಗಡಿ, ತಲೆಭಾರ, ತಲೆನೋವು, ಗಂಟಲು ಕೆರೆತ, ಗಂಟಲು ನೋವು ಮುಂತಾದ ಸಮಸ್ಯೆಗಳಿರುವ ರೋಗಿಗಳು ಶಿಬಿರದಲ್ಲಿ ಪಾಲ್ಗೊಂಡು ಶಿಬಿರದ ಉಪ ಯೋಗವನ್ನು ಪಡೆಯಬೇಕೆಂದು ಕೋರಲಾಗಿದೆ. ಮಾಹಿತಿಗೆ 0821–2566966, 9986399862 ಸಂಪರ್ಕಿಸಿ.

ಹಿಂದೂಗಳು ಸಾಫ್ಟ್ ಅಂತ ಗಲಭೆ ನಡೆಸಿದರೆ ಘೋರ ಪರಿಣಾಮ ಎದುರಿಸಬೇಕಾಗುತ್ತದೆ

ರಾಷ್ಟ್ರ ರಕ್ಷಣಾ ಪಡೆಯ ರಾಜ್ಯಾಧ್ಯಕ್ಷ ಪುನೀತ್ ಕೆರೆಹಳ್ಳಿ ಎಚ್ಚರಿಕೆ

ಮೈಸೂರು, ಸೆ.16(ಬಿಎಲ್‌ಯು)– ಹಿಂದೂಗಳು ಸಾಫ್ಟ್ (ಮೃದು) ಎಂದು ಪರಿಗಣಿಸಿ ನಾಗಮಂಗಲದಂತಹ ಗಲಭೆ ನಡೆಸಿದರೆ ಮುಂದೆ ಘೋರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ರಾಷ್ಟ್ರ ರಕ್ಷಣಾ ಪಡೆಯ ರಾಜ್ಯಾಧ್ಯಕ್ಷ ಪುನೀತ್ ಕೆರೆಹಳ್ಳಿ ಎಚ್ಚರಿಸಿದ್ದಾರೆ.

ನಗರದ ಕೃಷ್ಣಮೂರ್ತಿಪುರಂನ ಶ್ರೀರಾಮಮಂದಿರದಲ್ಲಿ ಇಂದು ರಾಷ್ಟ್ರ ರಕ್ಷಣಾ ಪಡೆಯ ಬೈಠಕ್ ವೇಳೆ ಪತ್ರಕರ್ತರ ಜೊತೆ ಮಾತನಾಡಿದ ಅವರು, ನಾಗಮಂಗಲದಂತಹ ಗಲಭೆಗಳನ್ನು ನಡೆಸುವ ಮೂಲಕ ಹಿಂದೂ ಧರ್ಮಿಯರನ್ನು ಹೆದರಿಸುವ ತಂತ್ರ ಅನುಸರಿಸಲಾಗುತ್ತಿದೆ ಎಂದು ಆರೋಪಿಸಿದರು.

ಗಣೇಶ ಮೆರವಣಿಗೆ ಸೇರಿದಂತೆ ಹಿಂದೂ ಧರ್ಮಿಯರ ಇತರೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಇಂತಹ ಗಲಭೆಗಳನ್ನು ಸೃಷ್ಟಿಸಿ



ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮಮಂದಿರದಲ್ಲಿ ನಡೆದ ರಾಷ್ಟ್ರ ರಕ್ಷಣಾ ಪಡೆಯ ಬೈಠಕ್‌ನಲ್ಲಿ ರಾಜ್ಯಾಧ್ಯಕ್ಷ ಪುನೀತ್ ಕೆರೆಹಳ್ಳಿ ಪಾಲ್ಗೊಂಡಿದ್ದರು.

ದರೆ ಹಿಂದೂಗಳು ಮನೆಯಿಂದ ಹೊರಗೆ ಬರುವುದಿಲ್ಲ ಎಂದು ತಿಳಿದಿದ್ದಾರೆ. ಈ ಮೂಲಕ ಹಿಂದೂ ಧರ್ಮಿಯರ ಧಾರ್ಮಿಕ ಆಚರಣೆಗೆ ಅಡ್ಡಿಪಡಿಸಿ, ಹಿಂದೂಗಳು ಸಂಘಟಿತರಾಗದಂತೆ ಕುತಂತ್ರ ರೂಪಿಸಲಾಗುತ್ತಿದೆ ಎಂದು ಆಪಾದಿಸಿದರು.

ಹಿಂದೂಗಳ ಹಬ್ಬ ಬಂದಾಗ ಮಾತ್ರ ವೇಕೆ ಗಲಾಟೆಯಾಗುತ್ತದೆ. ಇದಕ್ಕೆ ಪೊಲೀಸರೇಕೆ ಅವಕಾಶ ಮಾಡಿಕೊಡುತ್ತಾರೆ ಎಂದು ಪ್ರಶ್ನಿಸಿದ ಪುನೀತ್, ಹಾಗಾದರೆ ಮಸೀದಿ, ದರ್ಗಾಗಳ ಮುಂದೆ ಗಣಪತಿ ಮೆರವಣಿಗೆ ಹೋಗಬೇಡವೆ ಎಂದು ಕೇಳಿದರು. ರಾಜ್ಯಾದ್ಯಂತ ಇನ್ನು ಕೂಡ ಗಣೇಶ ಮೆರವಣಿಗೆ ನಡೆಯುತ್ತಿದೆ. ಎಲ್ಲೂ ಕೂಡ ನಾಗಮಂಗಲದಂತಹ ಕೃತ್ಯ ನಡೆಯಬಾರದು. ಇದಕ್ಕೆ ಪೊಲೀಸರು ಅವಕಾಶ ನೀಡದೆ ಮುಂಜಾಗ್ರತಾ ಕ್ರಮ ಕೈಗೊಂಡು ಬಿಗಿ ಪೊಲೀಸ್ ಬಂದೋಬಸ್ತ್ ಮಾಡಬೇಕು ಎಂದು ಒತ್ತಾಯಿಸಿದರು. ಹಿಂದುಗಳು ಮೃದು ಎಂದು ಪರಿಗಣಿಸಿ ಇಂತಹ ಗಲಭೆ ನಡೆಸಿದರೆ ಮುಂದೆ ಘೋರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಪುನೀತ್ ಕೆರೆಹಳ್ಳಿ ಎಚ್ಚರಿಸಿದರು.

ಸೆ. 19, ಇನ್‌ಫೋಸಿಸ್‌ನಲ್ಲಿ ಮೈಸೂರು ಬಿಗ್ ಟೆಕ್ ಶೋ–2024

ಮೈಸೂರು, ಸೆ. 16(ಆರ್‌ಕೆ)– ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಬಯೋ ಟೆಕ್ನಾಲಜಿ ಮತ್ತು ವಿಜ್ಞಾನ, ತಂತ್ರಜ್ಞಾನ ಇಲಾಖೆ ಹಾಗೂ ಕರ್ನಾಟಕ ಎಕಾನಮಿ ಮತ್ತು ಕರ್ನಾಟಕ ಎಕಾನಮಿ ಮಿಷನ್ (ಕೆಡಿಇಎಂ) ಸಂಯುಕ್ತಾಶ್ರಯದಲ್ಲಿ ಮೈಸೂರಿನ ಇನ್‌ಫೋಸಿಸ್ ಗ್ಲೋಬಲ್ ಸೆಂಟರ್‌ನಲ್ಲಿ ಸೆ.19ರಂದು ಮೈಸೂರು ಬಿಗ್ ಟೆಕ್ ಶೋ–2024 ಅನ್ನು ಆಯೋಜಿಸಲಾಗಿದೆ.

ಮೈಸೂರು ನಗರವನ್ನು ಪ್ರಮುಖ ದೀಪ್ ಟೆಕ್, ಸೈಬರ್ ಸೆಕ್ಯೂರಿಟಿ, ಆರ್ಟಿಫಿಷಿಯಲ್ ಇಂಟೆಲಿಜೆಂಟ್, ಟ್ಯಾಲೆಂಟ್ ಸಪ್ಲೈ, ESDM & GCC ಗ್ಲೋಬಲ್ ಹಬ್‌ಗೆ ಕೇಂದ್ರವಾಗಿಸುವುದು ಮೈಸೂರು ಬಿಗ್ ಟೆಕ್ ಶೋ ಉದ್ದೇಶವಾಗಿದೆ. ಹೆಚ್ಚು ಹೂಡಿಕೆ, ಹೊಸ ಉದ್ದಿಮೆಗೆ ಪ್ರೋತ್ಸಾಹ, ಸ್ಕಿಲ್ ಟ್ಯಾಲೆಂಟ್‌ನೊಂದಿಗೆ ಪ್ರಸ್ತುತ ಇರುವ ತಂತ್ರಜ್ಞಾನ ಉದ್ದಿಮೆಗಳನ್ನು ಬಲಪಡಿಸುವುದೂ ಸಹ ಇದರ ಮುಖ್ಯ ಉದ್ದೇಶವಾಗಿದೆ.


ಕಾರ್ಯಕ್ರಮದಲ್ಲಿ 450 ಪ್ರತಿನಿಧಿಗಳು, 45 ಗ್ಲೋಬಲ್ ಸ್ಪೀಕರ್‌ಗಳು, 60 ವಿದ್ಯಾರ್ಥಿಗಳು, 6 ದೇಶಗಳ ಪಾರ್ಟ್ನರ್ಸ್, 15 ಕಾಲೇಜುಗಳು, 25 ಸ್ಟಾರ್ಟ್‌ಅಪ್ ಸಪ್ಲೈ ಬೂತ್‌ಗಳು ಭಾಗವಹಿಸಲಿವೆ. ಹೆಚ್ಚಿನ ಮಾಹಿತಿಗಾಗಿ ಶಶಿಧರಗೌಡ (9535463850)ರನ್ನು ಸಂಪರ್ಕಿಸುವಂತೆ ವಾರ್ತಾ ಮತ್ತು ಪ್ರಸಾರ ಇಲಾಖೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈತ ಕದಿಯೋದು ಬರೀ ಹಳೇ ಸ್ಕೂಟರ್ ಬಿಡಿಭಾಗ!

ಬೆಂಗಳೂರು, ಸೆ.16– ಮನೆ ಮುಂದೆ ನಿಲ್ಲಿಸಿದ್ದ ಹಳೇ ಸ್ಕೂಟರ್‌ನ ಬಿಡಿ ಭಾಗಗಳನ್ನು ಕದ್ದೊಯ್ದಿರುವ ಘಟನೆ ರಾಜಧಾನಿಯಲ್ಲಿ ನಡೆದಿದೆ. ಬೇಗೂರಿನ ರಾಯಲ್ ಮೆರಿಡಿಯನ್ ಲೇಔಟ್‌ನಲ್ಲಿ ಸೆ.14ರಂದು ಹೆಲ್ಮೆಟ್ ಹಾಗೂ ಮಾಸ್ಕ್ ಹಾಕಿಕೊಂಡು, ಮನೆಯ ಗೇಟ್ ತೆಗೆದು ಆವರಣದಲ್ಲಿದ್ದ ಸ್ಕೂಟರ್‌ನ ಬಿಡಿಭಾಗಗಳನ್ನು ಕದ್ದೊಯ್ದಿರುವ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಒಂದೇ ತಿಂಗಳಿನಲ್ಲಿ ಎರಡು ಬಾರಿ ರಾತ್ರಿ ಸಮಯದಲ್ಲಿ ಬಂದಿರುವ ಕಳ್ಳ, ನಿರ್ಭೀತಿಯಿಂದ ದ್ವಿಚಕ್ರ ವಾಹನದ ಭಾಗಗಳನ್ನು ಬಿಚ್ಚಿಕೊಂಡು ಕದ್ದೊಯ್ದಿದ್ದಾನೆ. ಕಳ್ಳನ ಉಪಟಳದಿಂದ ಬೇಸತ್ತ ಸ್ಕೂಟರ್ ಮಾಲೀಕ, ಸಿಸಿ ಕ್ಯಾಮರಾದಲ್ಲಿ ಸೆರೆಯಾದ ಕಳ್ಳತನದ ದೃಶ್ಯಾವಳಿಯನ್ನು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ಬೆಂಗಳೂರು ಪೊಲೀಸರ ಗಮನಕ್ಕೆ ತಂದಿದ್ದಾರೆ. ಈ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಪೊಲೀಸರು, ಘಟನೆ ಕುರಿತು ಹೆಚ್ಚಿನ ಮಾಹಿತಿ ನೀಡುವಂತೆ ಕೋರಿದ್ದಾರೆ.

ವಿಜಯೇಂದ್ರ ಭ್ರಷ್ಟ, ಅವನಿಗೆ ಯಾವುದೇ ಐಡಿಯಾಲಜಿ ಇಲ್ಲ

ಬೆಳಗಾವಿ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಒಬ್ಬ ಭ್ರಷ್ಟ, ಅವನಿಗೆ ಯಾವುದೇ ಐಡಿಯಾಲಜಿ ಇಲ್ಲ ಎಂದು ತಮ್ಮದೇ ಪಕ್ಷದ ರಾಜ್ಯಾಧ್ಯಕ್ಷರ ವಿರುದ್ಧ ಮಾಜಿ ಸಚಿವ ಹಾಗೂ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಅವರು ಏಕವಚನದಲ್ಲೇ ವಾಗ್ದಾಳಿ ನಡೆಸಿದ್ದಾರೆ.



ರಮೇಶ್ ಜಾರಕಿಹೊಳಿ

ವಿಜಯೇಂದ್ರ ರಾಜ್ಯಾಧ್ಯಕ್ಷ ಎಂದು ನಾನು ಒಪ್ಪೋದಿಲ್ಲ. ಮುಂದಿನ ಅಧ್ಯಕ್ಷ ಯಾರು ಎಂಬುದು ಪಕ್ಷದ ವರಿಷ್ಠರು ತೀರ್ಮಾನ ಮಾಡಬೇಕು. ವಿಜಯೇಂದ್ರ ಬಿಜೆಪಿ ಪಕ್ಷದಲ್ಲಿ ಇನ್ನೂ ಜೂನಿಯರ್, ಅವನಿಗೆ ಯಾವುದೇ ಐಡಿಯಾಲಜಿ ಇಲ್ಲ. ಬಿಜೆಪಿಯ ಭ್ರಷ್ಟ ಎಂಬ ಲೇಬಲ್ ವಿಜಯೇಂದ್ರಮೇಲಿದೆ ಎಂದು ರಮೇಶ್ ಜಾರಕಿಹೊಳಿ ಕಿಡಿಕಾರಿದ್ದಾರೆ.

ವಿಜಯೇಂದ್ರ ಅಧ್ಯಕ್ಷ ಆಗಿದ್ದಕ್ಕೆ ನನ್ನ ವಿರೋಧ ಇದೆ. ಹಾಗಂತ ನಾನೆಂದೂ ಯಡಿಯೂರಪ್ಪನವರಿಗೆ ವಿರೋಧಿ ಅಲ್ಲ. ಯಡಿಯೂರಪ್ಪ ನಮ್ಮ ಪಕ್ಷಕ್ಕೆ ಪ್ರಶ್ನಾತೀತ ನಾಯಕ. ಯಡಿಯೂರಪ್ಪರ ಬಗ್ಗೆ ನಮಗೆ ತುಂಬಾ ಗೌರವವಿದೆ. ಆದರೆ, ವಿಜಯೇಂದ್ರ ನಮ್ಮ ಪಕ್ಷದ ನಾಯಕನಲ್ಲ ಎಂದು ಆಕ್ರೋಶ ಹೊರಹಾಕಿದ್ದಾರೆ.

ಆರ್‌ಎಸ್‌ಎಸ್ ಪ್ರಮುಖ ನಾಯಕರು, ಬಿಜೆಪಿ ನಾಯಕರ ಸಭೆಯ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ರಮೇಶ್ ಜಾರಕಿಹೊಳಿ, ಸಭೆಯಲ್ಲಿ ಏನು ಚರ್ಚೆಯಾಯಿತು ಎಂದು ಹೇಳುವುದಕ್ಕೆ ಆಗುವುದಿಲ್ಲ. ತಪ್ಪು ಮಾಡಿದವರನ್ನು ಸಭೆಯಲ್ಲಿ ಮುಖಂಡರು ಬೈದಿದ್ದಾರೆ ಅಷ್ಟೇ ಎಂದರು.

ಅಥಣಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಮೇಶ್ ಜಾರಕಿಹೊಳಿ, 15ರಿಂದ 20 ಜನರ ಸಾಮೂಹಿಕ ನಾಯಕತ್ವದಲ್ಲಿ ಪಕ್ಷ ಮುನ್ನಡೆಸಲಿ ಎಂದು ಬಿಜೆಪಿ, ಆರ್‌ಎಸ್‌ಎಸ್ ಪ್ರಮುಖರ ಸಭೆಯಲ್ಲಿ ಮನವಿ ಮಾಡಿದ್ದೇವೆ. ವರಿಷ್ಠರು ನೀವು ಇಂತಿಂಥ ಕೆಲಸ ಮಾಡುವಂತೆ ಟಾಸ್ಕ್ ನೀಡಿದ್ದಾರೆ. 120ರಿಂದ 130 ಕ್ಷೇತ್ರಗಳನ್ನು ಗೆಲ್ಲಿಸಿಕೊಡುವ ಶಕ್ತಿ ನಮ್ಮಲ್ಲಿದೆ. ವರಿಷ್ಠರು ನೀಡಿದ ಟಾಸ್ಕ್‌ನಲ್ಲಿ ನಾನು ವಿಫಲನಾದರೆ ನನ್ನನ್ನು ಒದ್ದು ಹೊರಹಾಕಿ ಎಂದು ಸಂಘ ಪರಿವಾರದ ಪ್ರಮುಖರ ಸಭೆಯಲ್ಲಿ ಹೇಳಿದ್ದೇನೆ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷರಾಗಿ ಶಾಮನೂರು ಶಿವಶಂಕರಪ್ಪ ಅವಿರೋಧ ಆಯ್ಕೆ



ಬೆಂಗಳೂರು, ಸೆ.16– ಪ್ರತಿಷ್ಠಿತ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷರಾಗಿ ಹಿರಿಯ ಕಾಂಗ್ರೆಸ್ ನಾಯಕ, ಶಾಸಕ ಶಾಮನೂರು ಶಿವಶಂಕರಪ್ಪ ಪುನರಾಯ್ಕೆಯಾಗಿದ್ದಾರೆ.

ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷರಾಗಿದ್ದ ಶಾಮನೂರು ಶಿವಶಂಕರಪ್ಪ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಎಂ.ಬಿ. ದ್ಯಾಬೇರಿ ಅವರು ಅವಿರೋಧ ಆಯ್ಕೆಯನ್ನು ಘೋಷಿಸಿದರು. ಶಾಮನೂರು ಶಿವಶಂಕರಪ್ಪ ಅವರು ಸತತವಾಗಿ ಮೂರನೇ ಬಾರಿಗೆ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರ ಅವಧಿಯು ಐದು ವರ್ಷಗಳಾಗಿರುತ್ತದೆ. ಅಖಿಲ ಭಾರತ ವೀರಶೈವ ಮಹಾಸಭಾದ ವಿವಿಧ ಸ್ಥಾನಗಳಿಗೆ ಚುನಾವಣೆ ನಡೆಸಲಾಗಿದ್ದು, ಮಹಾಸಭಾದ ರಾಜ್ಯಾಧ್ಯಕ್ಷರಾಗಿ ನಿವೃತ್ತ ಡಿಜಿಪಿ ಶಂಕರಬಿದರಿ ಅವರು ಈಗಾಗಲೇ ಆಯ್ಕೆಯಾಗಿದ್ದಾರೆ.

ಪ್ರೋತ್ಸಾಹದಾಯಿಕ ಯೋಜನೆಯಡಿ ಪತ್ನಿ ಹೆಸರಲ್ಲಿ ನಿವೇಶನ ಖರೀದಿ

ಬಿಜೆಪಿ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ವಿರುದ್ಧ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಂ ಆರೋಪ

ಮೈಸೂರು, ಸೆ.16(ಜಿಎ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ ವೃದ್ಧ ಸಹೋದರ, ಸಹೋದರಿಗೆ ಅಕ್ರಮವಾಗಿ ಪ್ರೋತ್ಸಾಹದಾಯಿಕ ಯೋಜನೆಯಡಿ ಸುಮಾರು 7 ಕೋಟಿ ರೂ. ಮೌಲ್ಯದ ನಿವೇಶನವನ್ನು ಮಂಜೂರು ಮಾಡಿಸಿ, ಅದನ್ನು ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಅವರು ತಮ್ಮ ಪತ್ನಿ ಹೆಸರಿಗೆ 1.45 ಕೋಟಿಗೆ ಖರೀದಿ ಮಾಡುವ ಮೂಲಕ ಅಕ್ರಮವೆಸಗಿದ್ದಾರೆ ಎಂದು ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಂ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮುಡಾದ ಹಿಂದಿನ ಆಯುಕ್ತ ನಟೇಶ್ ಹಾಗೂ ಎಲ್.ಆರ್. ಮಹದೇವಸ್ವಾಮಿ ಜೊತೆಗೂಡಿ ಸುಭಾಷ್‌ನಗರದ



ವೃದ್ಧ ಸಹೋದರ, ಸಹೋದರಿಗೆ ಪ್ರೋತ್ಸಾಹದಾಯಕ ಯೋಜನೆಯಡಿ ಮುಡಾಗೆ ಕೇವಲ 5,35,200 ರೂ. ಪಾವತಿಸಿಕೊಂಡು ಮೈಸೂರಿನ ಸರಸ್ವತಿಪುರಂ ವೆಸ್ಟ್ ಆಫ್ ತೊಣಚಿಕೊಪ್ಪಲು 4ನೇ ಹಂತದಲ್ಲಿರುವ 15x24 ಮೀ ವಿಸ್ತೀರ್ಣದ ನಿವೇಶನ ಸಂಖ್ಯೆ 1311ಜಿ ಅನ್ನು 2022ರ ಮೇ 12ರಂದು ಮುಡಾದಿಂದ ಕ್ರಯಪತ್ರ ಮಾಡಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಸುಭಾಷ್‌ನಗರದ ಶ್ರೀಮತಿ ಸಯ್ಯದಾ ನಸ್ರುತ್ ಅಫ್ಜ(77) ಮತ್ತು ಇವರ ಸಹೋದರ ಸಯ್ಯದ್ ಶಾಕೀದ್ ಉರ್ ರೆಹಮಾನ್ (71) ಅವರುಗಳು ತಮ್ಮ ಕುಟುಂಬಕ್ಕೆ ಸೇರಿದ ಈರನಗೆರೆ ಸರ್ವೆ ನಂ. 85/2ರಲ್ಲಿ 1.3 ಎಕರೆ ಜಮೀನನ್ನು ಮುಡಾ ಭೂ ಸ್ವಾಧೀನ ಪಡಿಸಿಕೊಳ್ಳದೆ ಬಳಸಿಕೊಂಡಿದ್ದು ಅದಕ್ಕೆ ಪರಿಹಾರವಾಗಿ 50:50 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನ ನೀಡಬೇಕೆಂದು ಮುಡಾಗೆ ಅರ್ಜಿ ಸಲ್ಲಿಸಿದ್ದರು. ಇವರಿಗೆ ಸರಸ್ವತಿಪುರಂನ 15x24 ಮೀ ವಿಸ್ತೀರ್ಣದ ನಿವೇಶನ ಸಂಖ್ಯೆ 1311ಜಿ ಅನ್ನು ಪ್ರೋತ್ಸಾಹದಾಯಿಕ ಯೋಜನೆಯಡಿ ನೀಡಲಾಗಿದೆ.

ಇದಾದ ನಾಲ್ಕೇ ತಿಂಗಳಿನಲ್ಲಿ ಎಲ್.ಆರ್. ಮಹದೇವಸ್ವಾಮಿ ಅವರ ಪತ್ನಿ ಶ್ರೀಮತಿ ಸೌಮ್ಯ ಎಂ. ಸ್ವಾಮಿ ಅವರ ಹೆಸರಿಗೆ 2022ರ ಸೆಪ್ಟೆಂಬರ್ 19ರಂದು 1.45 ಕೋಟಿ ರೂ.ಗಳಿಗೆ ಇದೇ ನಿವೇಶನವನ್ನು ಖರೀದಿಸಲಾಗಿದೆ. ಈ ಮೂಲಕ ಸುಮಾರು 7 ಕೋಟಿ ರೂ. ಮೌಲ್ಯದ ಮುಡಾ ನಿವೇಶನವನ್ನು ಅಕ್ರಮವಾಗಿ ವೃದ್ಧ ಸಹೋದರ, ಸಹೋದರಿಗೆ ಮಂಜೂರು ಮಾಡಿ, ನಂತರ ಅದನ್ನು ಶ್ರೀಮತಿ ಸೌಮ್ಯ ಎಂ. ಸ್ವಾಮಿ ಅವರಿಗೆ ಕಡಿಮೆ ಬೆಲೆಗೆ ಖರೀದಿಸುವ ಮೂಲಕ ಮುಡಾಗೆ ನಷ್ಟವನ್ನುಂಟು ಮಾಡಲಾಗಿದೆ ಈ ಪ್ರಕರಣದಲ್ಲಿ ಎಲ್.ಆರ್. ಮಹದೇವಸ್ವಾಮಿ ಮತ್ತು ಮುಡಾ ಹಿಂದಿನ ಆಯುಕ್ತ ನಟೇಶ್ ವ್ಯವಸ್ಥಿತವಾಗಿ ಅಕ್ರಮವೆಸಗಿದ್ದಾರೆ ಎಂದು ಅವರು ಆರೋಪಿಸಿದರು. ಅಲ್ಲದೆ, ಈ ನಿವೇಶನವನ್ನು ಮುಡಾ ಹಿಂದಕ್ಕೆ ಪಡೆದುಕೊಂಡು ಅಕ್ರಮವೆಸಗಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

> ನಾನು ಪತ್ನಿ ಶ್ರೀಮತಿ ಸೌಮ್ಯ ಎಂ. ಸ್ವಾಮಿ ಹೆಸರಿನಲ್ಲಿ ಅಕ್ರಮವಾಗಿ ನಿವೇಶನ ಖರೀದಿ ಮಾಡಿಲ್ಲ ನಿವೇಶನ ವನ್ನು ಸರ್ಕಾರ ನಿಗದಿಪಡಿಸಿರುವ ಬೆಲೆಯನ್ನು ನೀಡಿಯೇ ಖರೀದಿಸಲಾಗಿದೆ. ಕೆ.ಎಸ್. ಶಿವರಾಮು ಮಾಡಿರುವ ಆರೋಪ ಸತ್ಯಕ್ಕೆ ದೂರವಾದುದು. ಈ ಖರೀದಿ ಬಗ್ಗೆ ಶಿವರಾಮು ಅವರಿಗೆ ಅನುಮಾನಗಳಿದ್ದರೆ ಕಾನೂನು ಹೋರಾಟ ನಡೆಸಬಹುದು.
>
> 
>
> – ಎಲ್.ಆರ್. ಮಹದೇವಸ್ವಾಮಿ, ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ.

ಮೈಸೂರು ಮಿತ್ರ

ಮಂಗಳವಾರ 17 ಸೆಪ್ಟೆಂಬರ್ 2024

ಶಾಸಕ ಮುನಿರತ್ನ ವಜಾಗೆ ಆಗ್ರಹಿಸಿ ಪ್ರತಿಭಟನೆ



ಶಾಸಕ ಮುನಿರತ್ನ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಂಜನಗೂಡು, ಸೆ.16– ದಲಿತ, ಒಕ್ಕಲಿಗ ಸಮುದಾಯದ ಜಾತಿ ನಿಂದನೆ ಮಾಡಿ, ಮಹಿಳೆಯರನ್ನು ಅಪಮಾನಗೊಳಿಸಿರುವ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಕೂಡಲೇ ಶಾಸಕ ಸ್ಥಾನದಿಂದ ವಜಾಗೊಳಿಸಿ, ಕಾನೂನು ಶಿಕ್ಷೆಗೆ ಒಳಪಡಿಸಬೇಕೆಂದು ಒತ್ತಾಯಿಸಿ ಕಾಂಗ್ರೆಸ್ ವತಿಯಿಂದ ಸೋಮವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಹಲ್ಲಹಳ್ಳಿ ವೃತ್ತದ ಬಳಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು, ಮೈಸೂರು ಮತ್ತು ನಂಜನಗೂಡು ರಾಷ್ಟ್ರೀಯ ಹೆದ್ದಾರಿ ತಡೆದು ಮಾನವ ಸರಪಳಿ ನಿರ್ಮಿಸಿ, ಮುನಿರತ್ನ ಪ್ರತಿಕೃತಿ ದಹಿಸಿ ಶಾಸಕ ಸ್ಥಾನದಿಂದ ವಜಾಗೊಳಿಸುವಂತೆ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ದರ್ಶನ್ ಮಾತನಾಡಿ, ಒಬ್ಬ ಶಾಸಕನಾಗಿ ಸಂವಿಧಾನಿಕ ಹುದ್ದೆಯಲ್ಲಿದ್ದುಕೊಂಡು ಸರ್ವ ಜನಾಂಗವನ್ನು ಸಮವಾಗಿ ಕಾಣಬೇಕಿದ್ದ ಬೆಂಗಳೂರಿನ ರಾಜ ರಾಜೇಶ್ವರಿ ನಗರದ ಶಾಸಕ ಮುನಿರತ್ನ ಅವರು ದಲಿತರು, ಒಕ್ಕಲಿಗರು, ಮಹಿಳೆಯರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ಅಕ್ಷಮ್ಯ ಅಪರಾಧವಾಗಿದೆ. ಇಂತಹ ಪ್ರಕರಣ ಮುನಿರತ್ನ ಅವರಿಗೆ ಹೊಸತೇನಲ್ಲ ರಾಜರಾಜೇಶ್ವರಿ ನಗರದ ಉಪ ಚುನಾವಣೆ ಸಂದರ್ಭದಲ್ಲೂ ಕೂಡ ದಲಿತರ ಮೇಲೆ ದಾಳಿ ನಡೆಸಿರುವ ಬಗ್ಗೆ ನನ್ನ ತಂದೆ ಧ್ರುವ ನಾರಾಯಣ್ ನನ್ನ ಬಳಿ ಹೇಳಿಕೊಂಡಿದ್ದರು. ಅಂತಹ ನೀಚ ಮನಸ್ಥಿತಿಯುಳ್ಳ ಮುನಿರತ್ನ ಶಾಸಕರಾಗಿ ಸಂವಿಧಾನಿಕ ಹುದ್ದೆಯಲ್ಲಿ ಇರಲು ನಾಲಾಯಕ್. ಆದ್ದರಿಂದ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಬಿಜೆಪಿ ನಾಯಕರೂ ಕೂಡ ಅವರ ಮೇಲೆ ಶಿಸ್ತು ಕ್ರಮವಹಿಸಿ ರಾಜೀನಾಮೆ ಸಲ್ಲಿಸುವಂತೆ ಸೂಚನೆ ನೀಡಬೇಕು ಎಂದು ಆಗ್ರಹಿಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಶಾಸಕ ಮುನಿರತ್ನ ಸಾರ್ವಜನಿಕರ ಜೀವನದಲ್ಲಿದ್ದುಕೊಂಡು ಕಮಿಷನ್ ವಿಚಾರವಾಗಿ ದಲಿತ ಮತ್ತು ಒಕ್ಕಲಿಗ ಸಮುದಾಯದ ಜಾತಿ ನಿಂದನೆ ಮಾಡಿರುವುದು ಖಂಡನೀಯ. ಅವರು ಈ ಕೂಡಲೇ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲವಾದಲ್ಲಿ ಈ ಪ್ರಕರಣ ಸಂಬಂಧ ಈಗಾಗಲೇ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಲಾಗಿದೆ. ಈ ದೂರನ್ನು ಆಧರಿಸಿ ರಾಜ್ಯಪಾಲರು ಮುನಿರತ್ನ ಮೇಲೆ ಕ್ರಮವಹಿಸಿ ಶಾಸಕ ಸ್ಥಾನ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ತಾಪಂ ಮಾಜಿ ಸದಸ್ಯ ಹೆಚ್.ಎಸ್.ಮೂಗಶೆಟ್ಟಿ, ಎಸ್ಸಿ ಘಟಕದ ಜಿಲ್ಲಾ ಉಪಾಧ್ಯಕ್ಷ ರವಿಪ್ರಕಾಶ್, ವಿಶ್ವಕರ್ಮ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಅಧ್ಯಕ್ಷ ಶ್ರೀಕಂಠಸ್ವಾಮಿ, ನಗರಸಭಾ ಸದಸ್ಯರಾದ ಗಾಯತ್ರಿ, ಪ್ರದೀಪ್, ಗಂಗಾಧರ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಕೆಂಡ ಗಣ್ಣಪ್ಪ, ಮುಖಂಡರಾದ ರಾಜು, ಸಿದ್ದಿಖ್, ರಾಜೇಶ್, ಶಿವಣ್ಣ, ನಾಗರಾಜಯ್ಯ, ಜಿ. ಬಸವರಾಜು, ಅಜ್ಗರ್, ಎಂ.ಎನ್. ಮಂಜುನಾಥ್, ದೊರೆಸ್ವಾಮಿ, ಗ್ರಾಪಂ ಸದಸ್ಯ ಮುದ್ದುಮಾದಶೆಟ್ಟಿ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.

ಹೈನುಗಾರಿಕೆ ಕೈಗೊಂಡು ಆರ್ಥಿಕವಾಗಿ ಸಬಲರಾಗಿ

ಹೊಸಕೋಟೆ ಕೊಪ್ಪಲು ಡೈರಿ ಕಾಮಗಾರಿಗೆ ಶಾಸಕ ರವಿಶಂಕರ್ ಚಾಲನೆ



ಹೊಸಕೋಟೆ ಕೊಪ್ಪಲು ಡೈರಿ ಕಟ್ಟಡ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಕೆ.ಆರ್.ನಗರ, ಸೆ.16– ರೈತರು ಕೃಷಿ ಜೊತೆಗೆ ಹೈನುಗಾರಿಕೆಯನ್ನು ಉಪ ಕಸುಬಾಗಿ ರೂಢಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹೊಸಕೋಟೆ ಕೊಪ್ಪಲು ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮದ ಪ್ರತಿಯೊಬ್ಬರೂ ಸಂಘದ ಸದಸ್ಯರಾಗಿ ಗೋವುಗಳನ್ನು ಸಾಕಣೆ ಮಾಡಿ ಆ ಮೂಲಕ ಹಣ ಸಂಪಾದನೆ ಮಾಡಿ ಆರ್ಥಿಕವಾಗಿ ಸಬಲರಾಗಿ. ನಮ್ಮ ಸರ್ಕಾರ ರೈತರ ಹಿತ ಪರಿಗಣಿಸಿ ಮುಂದಿನ ದಿನಗಳಲ್ಲಿ ರೈತರಿಂದ ಪಡೆಯುವ ಹಾಲಿಗೆ ದರ ಹೆಚ್ಚಿಸಲು ತೀರ್ಮಾನಿಸಿದ್ದು, ಇದಕ್ಕಾಗಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ ಎಂದರು.

ರಾಜ್ಯದ 14 ಹಾಲು ಒಕ್ಕೂಟಗಳ ಪೈಕಿ ಮೈಮುಲ್ ಹಾಲು ಉತ್ಪಾದಕರಿಗೆ ಹೆಚ್ಚು ದರ ನೀಡುವ ಜೊತೆಗೆ ನಿತ್ಯ ಅತ್ಯಧಿಕ ಹಾಲು ಸಂಗ್ರಹ ಮಾಡುತ್ತಿದ್ದು, ಇದರಿಂದ ಜಿಲ್ಲೆಯ ರೈತರ ಬದುಕು ಹಸನಾಗುವುದರ ಜೊತೆಗೆ ಆರ್ಥಿಕ ಶಕ್ತಿಯೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇದಕ್ಕೆ ಹೈನುಗಾರಿಕೆ ಪ್ರಮುಖ ಕಾರಣ ಎಂದರು.

ಡೈರಿ ನಿರ್ಮಾಣ ಕಾಮಗಾರಿಗೆ ಶಾಸಕರ ನಿಧಿಯಿಂದ ಅನುದಾನ ಬಿಡುಗಡೆ ಮಾಡಿದ್ದು, ಮುಂದಿನ ದಿನಗಳಲ್ಲಿ ಕಾಮಗಾರಿಗೆ ಹೆಚ್ಚುವರಿ ಅನುದಾನ ನೀಡಲು ಬದ್ಧನಾಗಿದ್ದು, 6 ತಿಂಗಳೊಳಗೆ ಹೊಸ ಕಟ್ಟಡ ನಿರ್ಮಾಣವಾಗಲಿದೆ ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ. ಸೋಮಶೇಖರ್ ಮಾತನಾಡಿ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟ ವ್ಯಾಪ್ತಿಯಲ್ಲಿ ಕೆಆರ್.ನಗರ ವಿಧಾನ ಸಭಾ ಕ್ಷೇತ್ರ ಅತೀ ಹೆಚ್ಚು ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಹೊಂದಿದ್ದು ಇದರಿಂದ ನಮ್ಮ ರೈತರ ಹಸನಾಗುತ್ತಿದೆ ಎಂದರು.

ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿದರು. ತಾಪಂ ಮಾಜಿ ಸದಸ್ಯ ಚಿಕ್ಕೇಗೌಡ, ಡೈರಿ ಅಧ್ಯಕ್ಷ ಲೋಕೇಶ್, ಉಪಾಧ್ಯಕ್ಷ ಪ್ರಕಾಶ್, ಸದಸ್ಯರಾದ ಭಾಗ್ಯ, ಸೋಮಣ್ಣ, ಅಶೋಕ್, ಜಲೇಂದ್ರ, ಕರ್ಣ, ಮಂಜುನಾಥ್, ವನಜಾಕ್ಷಿ, ಗ್ರಾಪಂ ಅಧ್ಯಕ್ಷ ಜಗದೀಶ್, ಮಾಜಿ ಅಧ್ಯಕ್ಷ ಸಿ.ಕೆ. ಬಸವರಾಜು, ಸದಸ್ಯರಾದ ಕೃಷ್ಣ, ರತ್ನ, ದೇವೇಂದ್ರ, ಪಾಪಣ್ಣ, ಪುನೀತ್, ಮುಖಂಡರಾದ ವೆಂಕಟೇಶ್, ಚೆಲುವರಾಜು, ರೇವಣ್ಣಸ್ವಾಮಿ, ಜಯಣ್ಣ, ಹೆಚ್.ಪಿ.ಶಿವಕುಮಾರ್, ಯಜಮಾನರಾದ ಚಿಕ್ಕೇಗೌಡ, ಶಂಕರೇಗೌಡ, ನಾಗರಾಜು, ಸಾಲಿಗ್ರಾಮ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್ ಸೇರಿದಂತೆ ಇನ್ನಿತರರಿದ್ದರು.

ಪೌರಕಾರ್ಮಿಕ ಮಹಿಳೆಯರಿಗೆ ಬಾಗಿನ



ಗೌರಿ–ಗಣೇಶ ಹಬ್ಬದ ಅಂಗವಾಗಿ ಪಿರಿಯಾಪಟ್ಟಣ ಪುರಸಭೆ ಸದಸ್ಯೆ ಮಂಜುಳಾ ರಾಜ್ ಅವರು ಪೌರಕಾರ್ಮಿಕ ಮಹಿಳೆಯರಿಗೆ ಬಾಗಿನ ನೀಡಿ ಗೌರವಿಸಿದರು. ಈ ವೇಳೆ ಮುಖ್ಯಾಧಿಕಾರಿ ಮುತ್ತಪ್ಪ, ಹಿರಿಯ ಆರೋಗ್ಯಾಧಿಕಾರಿ ಮೋಹನ್, ಪೌರ ಕಾರ್ಮಿಕರ ಮೇಲ್ವಿಚಾರಕ ಮಹೇಶ್, ಸಿಬ್ಬಂದಿ ರಾಜು, ಮಂಜು ಇನ್ನಿತರಿದ್ದರು.

ಕೋಟೆ, ಸರಗೂರಿನ ಬಡವರಿಗೆ 5 ಸಾವಿರ ಮನೆ ನಿರ್ಮಾಣ

2 ಕೋಟಿ ವೆಚ್ಚದ ಬಾಬೂಜಿ ಭವನಕ್ಕೆ ಶಾಸಕ ಅನಿಲ್ ಭೂಮಿಪೂಜೆ

ಸರಗೂರು, ಸೆ.16– ಕೋಟೆ, ಸರಗೂರು ತಾಲೂಕು ಒಳಗೊಂಡಂತೆ ವಸತಿ ರಹಿತ ಕಡು ಬಡವರಿಗೆ ವಿವಿಧ ವಸತಿ ಯೋಜನೆಗಳಡಿ 5 ಸಾವಿರ ಮನೆ ನಿರ್ಮಿಸಲಾಗುವುದು ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಹಿಂಭಾಗ 2 ಕೋಟಿ ರೂ. ವೆಚ್ಚದ ಡಾ.ಬಾಬು ಜಗಜೀವನರಾಂ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಎರಡೂ ತಾಲೂಕುಗಳಲ್ಲೂ ಅರ್ಹ ಕಡುಬಡವರನ್ನು ಗುರುತಿಸಲು ಸಮೀಕ್ಷೆ ನಡೆಸಲಾಗುವುದು. ಅಲ್ಲದೇ ಅವರಿಗೆ ಸರ್ಕಾರದ ಸವಲತ್ತುಗಳನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಬಡವರ ಏಳ್ಗೆಯೇ ನಮ್ಮ ಮುಖ್ಯ ಧ್ಯೇಯ ಎಂದರು.



ಬಾಬು ಜಗಜೀವನ ರಾಂ ಸಮುದಾಯ ಭವನಕ್ಕೆ ಶಾಸಕ ಅನಿಲ್ ಭೂಮಿ ಪೂಜೆ ನೆರವೇರಿಸಿದರು.

ಭವನ ನಿರ್ಮಾಣಕ್ಕೆ ಮೊದಲ ಹಂತದಲ್ಲಿ 25 ಲಕ್ಷ ರೂ. ಬಿಡುಗಡೆಯಾಗಿದೆ. ಭವನದ ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು. ನೆಲಮಹಡಿ ಒಳಗೊಂಡಂತೆ ಮುಂಭಾಗ ಹೊಸ ವಿನ್ಯಾಸದೊಂದಿಗೆ ಸುಸಜ್ಜಿತವಾಗಿರಬೇಕು. ಭವನದಲ್ಲಿ ವಿವಾಹ ಮಂಟಪವನ್ನು ಸ್ವಂತ ವೆಚ್ಚದಲ್ಲಿ ತಮ್ಮ ತಂದೆ ಚಿಕ್ಕಮಾದು ಹೆಸರಿನಲ್ಲಿ ನಿರ್ಮಿಸಿ ಕೊಡಲಾಗುವುದು ಎಂದ ಅವರು, ನಾನು 2ನೇ ಬಾರಿ ಶಾಸಕರಾಗುವಲ್ಲಿ ನಿಮ್ಮ ಸಮಾಜದ ಪಾತ್ರ ಪ್ರಮುಖವಾಗಿದೆ. ಹೀಗಾಗಿ ಜನಾಂಗದ ಶ್ರೇಯೋಭಿವೃದ್ಧಿ ನನ್ನ ಗುರಿಯಾಗಿದೆ ಎಂದರು.

ಸಮುದಾಯದವರು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಬೇಕು. ಆ ಮೂಲಕ ಉತ್ತಮ ಪ್ರಜೆಗಳಾಗಿ ರೂಪಿಸಬೇಕು. ಯುವಕರು ದುಶ್ಚಟಗಳಿಗೆ ಬಲಿಯಾಗದೇ ತಮ್ಮ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪಟ್ಟಣದ ಗಡಿ ಯಜಮಾನ, ದೊಡ್ಡ ಯಜಮಾನರು, ಗುಡಿಗೌಡರು, ಚಿಕ್ಕಯಜಮಾನರು, ಪಪಂ ಸದಸ್ಯೆ ಸಣ್ಣತಾಯಮ್ಮ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಟೌನ್ ಅಧ್ಯಕ್ಷ ಟೋಕನ್ ನಾಗರಾಜು, ಸರಗೂರು ಬಾಬೂ ಜಗಜೀವನರಾಂ ಸಮುದಾಯಗಳ ಗ್ರಾಮಗಳಾದ ಹಂಚೀಪುರ, ಬಿ.ಮಟಕೆರೆ, ಮೊಳೆಯೂರು, ಕುರ್ಣೆಗಾಲ, ಕಲ್ಲಂಬಾಳು, ಚಾಮಲಾಪುರ, ಮುಳ್ಳೂರು, ಕೊತ್ತೇಗಾಲ, ಕೆ.ಬೆಳತ್ತೂರಿನ ಯಜಮಾನರು, ಮುಖಂಡರು, ಬಾಬು ಜಗಜೀವನ್ ರಾಂ ಯುವಕ ಸಂಘದವರು, ಎಇಇ ಜೀವನ್, ಎಇ ಸುಪ್ರೀತ್, ಗುತ್ತಿದಾರ ಪರಶಿವಮೂರ್ತಿ ಸೇರಿದಂತೆ ಇನ್ನಿತರರಿದ್ದರು.

ಸಮಾಜಕ್ಕೆ ಧರ್ಮಸ್ಥಳ ಸಂಸ್ಥೆ ಕೊಡುಗೆ ಅಪಾರ

ಮದ್ಯವರ್ಜನ ಶಿಬಿರದಲ್ಲಿ ಮಾಜಿ ಶಾಸಕ ಕೆ.ಮಹದೇವ್ ಮೆಚ್ಚುಗೆ



ಶಿಬಿರವನ್ನು ಮಾಜಿ ಶಾಸಕ ಕೆ.ಮಹದೇವ್ ಉದ್ಘಾಟಿಸಿದರು.

ಕಂಪಲಾಪುರ, ಸೆ.16– ಸರ್ಕಾರ ಮಾಡಬೇಕಾದ ಕೆಲಸಗಳನ್ನು ಧರ್ಮಸ್ಥಳ ಸಂಸ್ಥೆ ಮಾಡುತ್ತಿರುವುದು ಶ್ಲಾಘನೀಯ ಎಂದು ಮಾಜಿ ಶಾಸಕ ಕೆ.ಮಹದೇವ್ ಅಭಿಪ್ರಾಯಪಟ್ಟರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ, ಎಸ್‌ಡಿಎಂ ವ್ಯಸನಮುಕ್ತ ಮತ್ತು ಸಂಶೋಧನಾ ಕೇಂದ್ರ ಉಜಿರೆ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು, ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟ, ನವಜೀವನ ಸಮಿತಿ ಒಕ್ಕೂಟದ ಸಹಯೋಗದಲ್ಲಿ ಎಸ್‌ಎಂಎಸ್ ಕಲ್ಯಾಣ ಮಂಟಪದಲ್ಲಿ ನಡೆದ 1852ನೇ ಮದ್ಯವರ್ಜನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಒಬ್ಬ ವ್ಯಕ್ತಿ ಅಥವಾ ಕುಟುಂಬ ಸನ್ಮಾರ್ಗದಲ್ಲಿ ನಡೆಯಲು ಯಾವುದೇ ದುಶ್ಚಟಗಳು ಇರಬಾರದು. ಅವು ಇಡೀ ಕುಟುಂಬವನ್ನು ಬೀದಿ ಪಾಲು ಮಾಡುತ್ತವೆ. ಅದರಲ್ಲೂ ಮದ್ಯಪಾನ ಚಟಕ್ಕೆ ಬಿದ್ದರೆ ತನ್ನ ಸಾವನ್ನು ತಾನೇ ತಂದುಕೊಳ್ಳುತ್ತಾನೆ. ಆದ್ದರಿಂದ ಇಂತಹ ಶಿಬಿರಗಳಿಗೆ ಸೇರಿ ಮದ್ಯಪಾನ ಮುಕ್ತಾಗಿ ಬಾಳಿ. ಜೊತೆಗೆ ಇತ್ತೀಚೆಗೆ ಹಳ್ಳಿಗಳ ಕೆಲ ಅಂಗಡಿ, ಮನೆಗಳಲ್ಲಿ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ. ಇದಕ್ಕೆ ಸರ್ಕಾರ ಕಡಿವಾಣ ಹಾಕಬೇಕು. ಆಗ ಮಾತ್ರ ಶಿಬಿರ ಸಾರ್ಥಕವಾಗುತ್ತದೆ. ಇಲ್ಲವಾದರೆ ಇಂತಹ ಶಿಬಿರಕ್ಕೆ ಫಲ ಸಿಗುವುದಿಲ್ಲ ಎಂದರು.

ಶಿಬಿರಾಧಿಕಾರಿ ನಂದಕುಮಾರ್ ಮಾತನಾಡಿ, 44 ವರ್ಷಗಳ ಹಿಂದೆ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಈ ಮದ್ಯವರ್ಜನ ಶಿಬಿರವನ್ನು ಅನುಷ್ಠಾನಕ್ಕೆ ತಂದರು. ರಾಜ್ಯದ 31 ಜಿಲ್ಲೆಗಳಲ್ಲೂ ಮದ್ಯವರ್ಜನ ಶಿಬಿರ ಆಯೋಜಿಸಿದ್ದು, 1.46 ಲಕ್ಷ ಶಿಬಿರಾರ್ಥಿಗಳು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದರು.

ಕೊಡಗು ಜಿಲ್ಲೆ ಜನಜಾಗೃತಿ ವೇದಿಕೆ ಅಧ್ಯಕ್ಷ ಅಭಿಮನ್ಯು ಕುಮಾರ್, ಬಿ.ಸಿ.ಟ್ರಸ್ಟ್ ನಿರ್ದೇಶಕಿ ಲೀಲಾವತಿ, ರೋಟರಿ ಐಕಾನ್ ಅಧ್ಯಕ್ಷ ಜೆ.ಎಸ್.ನಾಗರಾಜ್, ಮದ್ಯವರ್ಜನ ಶಿಬಿರ ಗೌರವಾಧ್ಯಕ್ಷ ಗಿರೀಶ್, ಅಧ್ಯಕ್ಷೆ ಮಂಜುಳಾರಾಜ್, ಟಿಎಪಿಸಿಎಂಎಸ್ ನಿರ್ದೇಶಕ ಕೆ.ಕುಮಾರ್, ಸಹಕಾರ ಸಂಘದ ಅಧ್ಯಕ್ಷ ಸಂತೋಷ್, ಜಯಣ್ಣ , ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ರಮೇಶ್, ಗ್ರಾಪಂ ಅಧ್ಯಕ್ಷೆ ಜಾನಕಿ, ಮಾಜಿ ಅಧ್ಯಕ್ಷ ಆಸೀಫ್ ಖಾನ್, ಸದಸ್ಯ ನಾಗರಾಜ್, ಪ್ರತಿಭಾ, ತಾ. ಯೋಜನಾಧಿಕಾರಿ ರವಿ, ಸಂತೋಷ್, ಮೇಲ್ವಿಚಾರಕಿ ರವಿಕಲಾ, ರಾಣಿ, ಸೇವಾಪ್ರತಿನಿಧಿಗಳು, ಒಕ್ಕೂಟದ ಪದಾಧಿಕಾರಿಗಳು ಸೇರಿದಂತೆ 60ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಕಾಂಗ್ರೆಸ್ ಬ್ಲಾಕ್ ಸಮಿತಿಗೆ ಫಣೇಂದ್ರ ಅಧ್ಯಕ್ಷ



ಬೆಟ್ಟದಪುರ, ಸೆ.16– ಬೆಟ್ಟದಪುರ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರಾಗಿ ಫಣೇಂದ್ರ ಅವರನ್ನು ನೇಮಕ ಮಾಡಿ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ ಕುಮಾರ್ ಆದೇಶ ಹೊರಡಿಸಿದ್ದಾರೆ.

ಪಕ್ಷದ ನಿಯಮಾನುಸಾರ ಮತ್ತು ಸಿದ್ಧಾಂತಗಳಿಗೆ ಅನುಗುಣವಾಗಿ ಪಕ್ಷದ ಸಬಲೀಕರಣ ಕಾರ್ಯದಲ್ಲಿ ತಮ್ಮನ್ನು ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳುತ್ತೇನೆ. ಈ ಜವಾಬ್ದಾರಿ ವಹಿಸಿದ ಸಚಿವ ಕೆ.ವೆಂಕಟೇಶ್ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಅವರಿಗೆ ಧನ್ಯವಾದ ಅರ್ಪಿಸುವುದಾಗಿ ಫಣೇಂದ್ರ ತಿಳಿಸಿದ್ದಾರೆ.

ಜೀತದಾಳು ವಿಮುಕ್ತಿಗಾಗಿ ಜೀವಿಕ ಸಂಘಟನೆ ಕಾರ್ಯ

ಜಿಲ್ಲಾ ಸಂಚಾಲಕ ಬಸವರಾಜ್



ಹ್ಯಾಂಡ್‌ಪೋಸ್ಟ್‌ನ ಜೀವಿಕ ತರಬೇತಿ ಕೇಂದ್ರದಲ್ಲಿ ಜೀವಿಕ ದಿನಾಚರಣೆ ನಡೆಯಿತು.

ಹೆಚ್.ಡಿ.ಕೋಟೆ, ಸೆ.16– ಜೀವಿಕ ಸಂಘಟನೆಯ ಸಂಸ್ಥಾಪಕ ಸಂಚಾಲಕ ಕಿರಣ್ ಕಮಲ್ ಪ್ರಸಾದ್ ನೇತೃತ್ವದಲ್ಲಿ ರಾಜ್ಯಾದ್ಯಂತ ಜೀತದಾಳು ಮತ್ತು ಶೋಷಿತ ಸಮುದಾಯಗಳ ವಿಮೋಚನೆಗಾಗಿ ಕೆಲಸ ಮಾಡುತ್ತಿದೆ ಎಂದು ಜಿಲ್ಲಾ ಸಂಚಾಲಕ ಬಸವರಾಜ್ ತಿಳಿಸಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಜೀವಿಕ ತರಬೇತಿ ಕೇಂದ್ರದಲ್ಲಿ ನಡೆದ ಜೀವಿಕ ದಿನಾಚರಣೆಯನ್ನು ಸಂವಿಧಾನ ಪೀಠಿಕೆ ಓದುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಜೀವಿಕ ಸಂಘಟನೆಯಡಿ ಸಾವಿರಾರು ಮಂದಿ ಜೀತದಿಂದ ಮುಕ್ತಿ ಪಡೆದು ಸ್ವತಂತ್ರ ಜೀವನ ನಡೆಸುತ್ತಿದ್ದಾರೆ ಎಂದು ಜೀವಿಕ ಸಂಘಟನೆ ಪ್ರಾರಂಭದ ದಿನಗಳನ್ನು ಮೆಲುಕು ಹಾಕಿದರು.

ಜೀವಿಕ ರಾಜ್ಯ ಸಂಘಟನಾ ಸಂಚಾಲಕ ಉಮೇಶ್ ಮಾತನಾಡಿ, ಕಳೆದ 35 ವರ್ಷಗಳ ಹಿಂದೆ ಪ್ರಾರಂಭವಾದ ಜೀವಿಕ ಸಂಘಟನೆ ತಾಲೂಕಿನಲ್ಲಿ ಅತ್ಯಂತ ಪ್ರಾಮಾಣಿಕ ಹಾಗೂ ನ್ಯಾಯಯುತ ಸಂಘಟನೆಯಾಗಿ ಕೆಲಸ ಮಾಡುತ್ತಿದೆ. ಅಲ್ಲದೇ ಎಲ್ಲಾ ಪ್ರಗತಿಪರ, ಸಲಿತ ಸಂಘಟನೆಗಳ ಸಹಕಾರದಿಂದ ಸಂಘಟನೆ ಈ ಮಟ್ಟಕ್ಕೆ ಬೆಳೆದಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಬೆಳವಣಿಗೆ ಹೊಂದಲಿದೆ. ಇದಕ್ಕೆ ಪ್ರತಿಯೊಬ್ಬರ ಸಹಕಾರ ಅವಶ್ಯಕ ಎಂದರು.

ಜೀತ ಮುಕ್ತರಾದ ವಡ್ಡರಪಾಳ್ಯ ಗೋಪಾಲ್, ಕಲ್ಲಂಬಾಳು ಮಂಜುನಾಥ್ ಮಾತನಾಡಿ, ನಾವು ಬಾಲ್ಯದಿಂದಲೂ 500, ಸಾವಿರ ರೂ.ಗಳಿಗೆ ವರ್ಷವೆಲ್ಲಾ ದುಡಿಯುತ್ತಿದ್ದೇವು. ಅಲ್ಲದೇ ಊಟ, ಬಟ್ಟೆಗಾಗಿ ಜೀವ ಸವೆಸುತ್ತಾ, ತಂದೆ–ತಾಯಿ, ಹೆಂಡತಿ ಮಕ್ಕಳನ್ನು ನೋಡಲು ಆಗದ ವೇಳೆ ಜೀವಿಕ ಸಂಘಟನೆ ನಮ್ಮನ್ನು ರಕ್ಷಣೆ ಮಾಡಿ ನಾಗರಿಕ ಸಮಾಜ ನಮ್ಮನ್ನು ಮನುಷ್ಯರಾಗಿ ಕಾಣುವಂತೆ ಮಾಡಿದೆ ಎಂದು ತಮ್ಮ ಅನುಭವ ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಪ್ರಗತಿಪರ ರೈತ ಪುಟ್ಟಯ್ಯ, ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಚಾ.ನಂಜುಂಡಮೂರ್ತಿ, ಅಕ್ಬರ್ ಪಾಷ, ಹೆಚ್.ಬಿ.ಬಸವರಾಜ್, ಜವರಯ್ಯ, ತಾಪಂ ಮಾಜಿ ಅಧ್ಯಕ್ಷ ಗೋಪಾಲಸ್ವಾಮಿ, ದಸಂಸ ಜಿಲ್ಲಾ ಸಂಚಾಲಕ ರಾಜಣ್ಣ, ಶಿವಣ್ಣ, ಎಇಇ ವಸಂತ ಕುಮಾರ್, ಶಿವಕುಮಾರ್, ಪೀಪಲ್ ಟ್ರಿ ಜವರೇಗೌಡ, ಸುರೇಶ್, ಒಕ್ಕೂಟದ ಮುಖಂಡರಾದ ಶಿವಣ್ಣ, ಮಲ್ಲಿಗಮ್ಮ, ನಿಂಗಯ್ಯ, ಲಕ್ಷ್ಮಮ್ಮ, ಜಯಮ್ಮ, ನಂಜುಂಡಯ್ಯ, ಬಸವರಾಜ್, ಗಣೇಶ, ಜೀವಿಕ ಕಾರ್ಯಕರ್ತರಾದ ವೆಂಕಟೇಶ್, ನಾಗಮ್ಮ, ಮಲ್ಲಿಗಮ್ಮ, ಚಂದ್ರಶೇಖರ್ ಮೂರ್ತಿ, ಶಿವರಾಜ್, ಗೋಪಾಲ್ ಇತರರಿದ್ದರು.

ಅತ್ತಳ್ಳಿಯಲ್ಲಿ ಗಣೇಶ ಮೂರ್ತಿ ವಿಸರ್ಜನೆ



ಬನ್ನೂರು ಸಮೀಪದ ಅತ್ತಳ್ಳಿಯಲ್ಲಿ ಯುವಕರ ಬಳಗದಿಂದ ಇತ್ತೀಚೆಗೆ ಸಾಮೂಹಿಕ ಗಣೇಶ ಮೂರ್ತಿ ವಿಸರ್ಜನಾ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಗ್ರಾಮದ ಎಲ್ಲಾ ಮುಖಂಡರು, ಯುವಕರು ಭಾಗವಹಿಸಿ ವಿನಾಯಕನ ಕೃಪೆಗೆ ಪಾತ್ರರಾದರು.

ಕೇತಹಳ್ಳಿ ಡೈರಿಗೆ 1.52 ಲಕ್ಷ ನಿವ್ವಳ ಲಾಭ



ವಾರ್ಷಿಕ ಮಹಾಸಭೆಯಲ್ಲಿ ಮೈಮುಲ್ ವಿಸ್ತರಣಾಧಿಕಾರಿ ಕೆ.ಎನ್.ಶೃತಿ ಮಾತನಾಡಿದರು

ತಿ.ನರಸೀಪುರ, ಸೆ.16– ಷೇರುದಾರರು ಹಾಗೂ ಹಾಲು ಉತ್ಪಾದಕರ ಸಹಕಾರದಿಂದ ಸಂಘವು 2023–24ನೇ ಸಾಲಿನಲ್ಲಿ 1,52,843 ರೂ. ನಿವ್ವಳ ಲಾಭ ಗಳಿಸಿದೆ ಎಂದು ಕೇತಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ನಿಂಗಶೆಟ್ಟಿ ತಿಳಿಸಿದರು.

ಸಂಘದ ಡೈರಿ ಆವರಣದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮದ ಹೆಚ್ಚಿನ ರೈತರು ಹೈನುಗಾರಿಕೆಯನ್ನು ಉಪಕಸುಬಾಗಿಸಿಕೊಂಡಿದ್ದಾರೆ. ರಾಸುಗಳು ಆರೋಗ್ಯವಾಗಿದ್ದರೆ ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಆರ್ಥಿಕವಾಗಿ ಸದೃಢವಾಗಿ ಬೆಳೆಯಲು ಸಾಧ್ಯ. ಹೀಗಾಗಿ ಗುಣಮಟ್ಟದ ಹಾಕುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಸಂಘದ ಸದಸ್ಯರು ವಾರ್ಷಿಕ ಸಭೆಯಲ್ಲಿ ಭಾಗವಹಿಸಿ ಸಂಘದ ಲಾಭ–ನಷ್ಟದ ಬಗ್ಗೆ ಆರೋಗ್ಯ ಕರ ಚರ್ಚೆ ಮಾಡಬೇಕು. ಆ ಮೂಲಕ ಮುಂಬರುವ ಆರ್ಥಿಕ ವರ್ಷದಲ್ಲಿ ಸಂಘ ಮತ್ತಷ್ಟು ಲಾಭಾಂಶದತ್ತ ಮುನ್ನಡೆಯಲು ಎಲ್ಲರೂ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಮೈಮುಲ್ ವಿಸ್ತರಣಾಧಿಕಾರಿ ಕೆ.ಎನ್.ಶೃತಿ ಮಾತನಾಡಿ, ಹೆಚ್ಚು ಹಾಲು ನೀಡುವ ವಿವಿಧ ತಳಿಯ ಜಾನುವಾರಗಳ ಬಗ್ಗೆ, ಜಾನುವಾರುಗಳ ಆರೋಗ್ಯ ನಿರ್ವಹಣೆಯಲ್ಲಿ ಸಮತೋಲನ, ಪಶು ಆಹಾರದ ಮಹತ್ವ, ಜಾನುವಾರುಗಳಲ್ಲಿ ಬರುವ ರೋಗಗಳು ಹಾಗೂ ಹತೋಟಿ ಕ್ರಮಗಳು, ವೈಜ್ಞಾನಿಕ ಕೊಟ್ಟಿಗೆ ನಿರ್ಮಾಣ, ಸುಧಾರಿತ ಮೇವಿನ ಬೆಳೆಗಳ ಉತ್ಪಾದನೆ, ಜಾನುವಾರು ವಿಮೆ, ಶುದ್ಧ ಹಾಲು ಉತ್ಪಾದನೆ ಮಹತ್ವ ಹಾಲಿನಲ್ಲಿರುವ ಘಟಕಗಳು ಮತ್ತು ಹಾಲಿನ ಮೌಲ್ಯವರ್ಧನೆ ಮತ್ತು ಹಾಲಿನಿಂದ ಬರುವ ವಿವಿಧ ಉತ್ಪನ್ನಗಳು ಮತ್ತು ಅವುಗಳ ಮಹತ್ವದ ಬಗ್ಗೆ ಉಪಯುಕ್ತ ಮಾಹಿತಿ ನೀಡಿದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷೆ ನಂಜಮ್ಮಣ್ಣಿ, ನಿರ್ದೇಶಕರಾದ ಚಿಕ್ಕಸ್ವಾಮಿನಾಯಕ, ಕೆ.ಎಸ್.ಶಿವಕುಮಾರ್, ಮಲ್ಲಣ್ಣ, ಮಾದನಾಯಕ, ಮಹದೇವಮ್ಮ, ಎಸ್.ಸಿದ್ದನಾಯಕ, ಎಂ.ರವೀಂದ್ರ, ಕೆ.ಬಿ.ಜಗದೀಶ್, ಬಸವರಾಜು, ಗೌರಮ್ಮ, ಊರಿನ ಗೌಡರಾದ ಕೆ.ಬಿ.ಶಾಂತಮೂರ್ತಿ, ಸಿಇಓ ಕೆ.ಎಸ್.ಕೋಮಲ, ಹಾಲು ಪರೀಕ್ಷಕಿ ರತ್ನಮ್ಮ, ಸಿದ್ದಶೆಟ್ಟಿ ಸೇರಿದಂತೆ ಷೇರುದಾರರು, ಗ್ರಾಮಸ್ಥರು ಭಾಗವಹಿಸಿದ್ದರು.

ಗುಣಮಟ್ಟದ ಹಾಲಿನೊಂದಿಗೆ ಸಂಘದ ಅಭಿವೃದ್ಧಿಗೆ ಸಹಕರಿಸಿ

ವ್ಯಾಸರಾಜಪುರ ಡೈರಿ ಅಧ್ಯಕ್ಷ ಟಿ.ರಂಗಸ್ವಾಮಿ ಮನವಿ



ವ್ಯಾಸರಾಜಪುರ ಡೈರಿ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಟಿ.ರಂಗಸ್ವಾಮಿ ಉದ್ಘಾಟಿಸಿದರು.

ತಿ.ನರಸೀಪುರ, ಸೆ.16– ವ್ಯಾಸರಾಜಪುರ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ 5 ಗ್ರಾಮಗಳು ಸೇರ್ಪಡೆಯಾಗಿದ್ದರೂ, ಹಾಲು ನಿರೀಕ್ಷಿತ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಿಲ್ಲ ಎಂದು ಸಂಘದ ಅಧ್ಯಕ್ಷ ಟಿ.ರಂಗಸ್ವಾಮಿ ತಿಳಿಸಿದರು.

ತಾಲೂಕಿನ ವ್ಯಾಸರಾಜಪುರ ಡೈರಿ ಆವರಣದಲ್ಲಿ ಸೋಮವಾರ ನಡೆದ 2023–2024ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘಕ್ಕೆ ಎಸ್.ಕೆಬ್ಬೇಹುಂಡಿ, ಸಿದ್ದನಹುಂಡಿ, ಗದ್ದೆಮೋಳೆ ಹಾಗೂ ಜಗಜೀವನ ಗ್ರಾಮಗಳು ಸೇರಿದ್ದರೂ ಹಾಲು ಉತ್ಪಾದಕರು ಹಾಗೂ ಷೇರುದಾರರು ಕಡಿಮೆ ಪ್ರಮಾಣದಲ್ಲಿದ್ದಾರೆ. ಹಾಗಾಗಿ ಸಹಕಾರ ಸಂಘಕ್ಕೆ 2 ಸಾವಿರ ಲೀಟರ್ ಹಾಲು ಮಾತ್ರ ಸರಬರಾಜಾಗುತ್ತಿದೆ. ಸಂಘ ಹೆಚ್ಚಿನ ಲಾಭ ಗಳಿಸಲು ಹಾಲು ಉತ್ಪಾದನೆ ಹೆಚ್ಚಾಗಬೇಕು. ಹೆಚ್ಚಿನ ರೈತರು ಹೈನುಗಾರಿಕೆಯಲ್ಲಿ ತೊಡಗಿ ಡೈರಿಗೆ ಅಧಿಕ ಗುಣಮಟ್ಟದ ಹಾಲು ಪೂರೈಸುವ ಮೂಲಕ ಸಹಕಾರ ಸಂಘದ ಬೆಳವಣಿಗೆಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಸಂಘದ ಅಧ್ಯಕ್ಷನಾದ ನಂತರ ಡೈರಿಗೆ ನೂತನ ಕಟ್ಟಡ ನಿರ್ಮಾಣ ಮಾಡಿದ್ದೇನೆ. ತಿಂಗಳಿಗೆ 3 ಬಾರಿ ಹಾಲು ಒಕ್ಕೂಟಕ್ಕೆ ಭೇಟಿ ನೀಡಿ ರೈತರು ಮತ್ತು ಷೇರುದಾರರಿಗೆ ಸಿಗಬಹುದಾದ ಸವಲತ್ತುಗಳನ್ನು ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ಮೈಮುಲ್ ವಿಸ್ತರಣಾಧಿಕಾರಿ ಆರ್.ಪ್ರಮೋದ್ ಮಾತನಾಡಿ, ಪ್ರಸ್ತುತ ಹೈನುಗಾರಿಕೆ ಜನರ ಪ್ರಮುಖ ಕಸುಬಾಗಿದೆ. ಸಹಕಾರ ಸಂಘಕ್ಕೆ ಗುಣಮಟ್ಟದ ಹಾಲನ್ನು ರೈತರು ಸರಬರಾಜು ಮಾಡಿದರೆ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿ ಸಾಧ್ಯ. ಇದರಿಂದ ರೈತರಿಗೂ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಉತ್ಪಾದಕರು ತಮ್ಮ ಮನೆ ಬಳಕೆಗೆ ಅಗತ್ಯವಾದ ಹಾಲನ್ನು ಇಟ್ಟುಕೊಂಡು ಸೇವಿಸಬೇಕು. ಇದರಿಂದ ದೇಹಕ್ಕೆ ಬೇಕಾದ ಪೌಷ್ಟಿಕಾಂಶಗಳು ಹಾಲಿನಿಂದ ದೊರೆಯಲಿವೆ. ಕೃಷಿಯೊಂದಿಗೆ ಉಪಕಸುಬಾಗಿ ಹೈನುಗಾರಿಕೆ, ಕೋಳಿ/ಕುರಿ ಸಾಕಣೆಯಂತಹ ಉಪ ಕಸುಬುಗಳನ್ನು ರೂಢಿಸಿಕೊಳ್ಳಬೇಕು. ಇಲ್ಲದಿದ್ದರೆ ಆರ್ಥಿಕ ಸಂಷಕ್ಟಕ್ಕೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಸಿದ ಅವರು, ಸಂಘಕ್ಕೆ ಉತ್ತಮ ಕಟ್ಟಡ ದೊರಕಿದೆ. ಆದರೆ ಹಾಲು ಉತ್ಪಾದನೆ ಕಡಿಮೆ ಇದೆ ಹಾಗಾಗಿ ರೈತರು ಹಾಲು ಉತ್ಪಾದನೆ ಹೆಚ್ಚಿಸುವ ಮೂಲಕ ಆರ್ಥಿಕಾಭಿವೃದ್ಧಿ ಹೊಂದಲು ಮುಂದಾಗಬೇಕೆಂದು ತಿಳಿಸಿದರು.

ಸಂಘದ ವಾರ್ಷಿಕ ವರದಿ ಮಂಡಿಸಿ ಮಾತನಾಡಿದ ಮುಖ್ಯ ಕಾರ್ಯ ನಿರ್ವಾಹಕ ಎಸ್.ಅಂದಾನಿಗೌಡ, ಷೇರುದಾರರ ಸಹಕಾರದಿಂದ ಸಂಘ ಪ್ರಸಕ್ತ ಸಾಲಿನಲ್ಲಿ 1,06,892 ರೂ. ನಿವ್ವಳ ಲಾಭಗಳಿಸಿ ಯಶಸ್ವಿಯಾಗಿ ಮುನ್ನಡೆದಿದೆ ಎಂದರು.

ಈ ವೇಳೆ ಸಂಘಕ್ಕೆ ಹೆಚ್ಚು ಹಾಲು ಪೂರೈಕೆ ಮಾಡಿದ ವ್ಯಾಸರಾಜಪುರದ ಪುಟ್ಟಸ್ವಾಮಿ, ಎಸ್.ಕೆಬ್ಬೇಹುಂಡಿ ರತ್ನಮ್ಮ, ಸಿದ್ದನಹುಂಡಿ ಮಂಗಳಮ್ಮ, ಗದ್ದೆಮೋಳೆ ಮುತ್ತನಾಯಕ ಹಾಗೂ ಜಗಜೀವನ್ ಗ್ರಾಮದ ದೊಳ್ಳಯ್ಯ ಅವರಿಗೆ ಉಡುಗೊರೆ ನೀಡಿ ಸನ್ಮಾನಿಸಲಾಯಿತು.

ಸಭೆಯಲ್ಲಿ ನಿರ್ದೇಶಕರಾದ ಎಂ.ಮುದ್ದಯ್ಯ, ಶಂಕರ, ಮಾರನಾಯಕ, ಸಿದ್ದೇಗೌಡ, ಪುಟ್ಟಸ್ವಾಮಿ, ನಾಗ, ಎಸ್.ಗಂಗಾಧರ, ರಾಜಣ್ಣ, ಎಸ್.ರಾಧ, ತಾಪಂ ಮಾಜಿ ಅಧ್ಯಕ್ಷರಾದ ಶಿವಸ್ವಾಮಿ, ಗ್ರಾಪಂ ಸದಸ್ಯ ಸುಂದರ, ಗ್ರಾಪಂ ಮಾಜಿ ಅಧ್ಯಕ್ಷ ಚೋಟಯ್ಯ, ಮಾಜಿ ಉಪಾಧ್ಯಕ್ಷ ಜೆ.ರಂಗಸ್ವಾಮಿ, ಹಾಲು ಪರೀಕ್ಷಕ ರಾಜೇಶ್, ಸಹಾಯಕ ಎಸ್.ಪ್ರಕಾಶ್ ಸೇರಿದಂತೆ ಗ್ರಾಮಸ್ಥರು, ಷೇರುದಾರರು ಭಾಗವಹಿಸಿದ್ದರು.

ಪ್ರೇಮ ನಿಧನ



ತಿ.ನರಸೀಪುರ, ಸೆ.16– ಪಟ್ಟಣದ ದಾಸ ನಾಯಕರ ಬೀದಿ ನಿವಾಸಿ ಪ್ರೇಮ(45) ಸೋಮವಾರ ನಿಧನರಾದರು. ಮೃತರು ಪತಿ ಕಾರ್ ನಂಜುಂಡ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಕುರುಬರ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಪುರಸಭಾ ಸದಸ್ಯ ಬಾದಾಮಿ ಮಂಜು, ಎಸ್.ಕೆ.ಕಿರಣ್ ಸಂತಾಪ ಸೂಚಿಸಿದ್ದಾರೆ.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಪದಾಧಿಕಾರಿಗಳ ಪದಗ್ರಹಣ

ಒಕ್ಕಲಿಗರು ಪಕ್ಷಾತೀತವಾಗಿ ಸಮುದಾಯದ ಏಳಿಗೆಗೆ ಶ್ರಮಿಸಬೇಕು

ಸಚಿವ ಕೆ.ವೆಂಕಟೇಶ್ ಕರೆ



ಮೈಸೂರಿನ ಕಲಾಮಂದಿರದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ವತಿಯಿಂದ ಆಯೋಜಿಸಿದ್ದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಡಾ.ಬಾಲಗಂಗಾಧರನಾಥ ಸ್ವಾಮಿ ಸೇವಾರತ್ನ ಪ್ರಶಸ್ತಿ ವಿತರಿಸಲಾಯಿತು

ಮೈಸೂರು,ಸೆ.16(ಎಂಟಿವೈ)– ಒಕ್ಕಲಿಗ ಸಮುದಾಯದ ನಾಯಕರು ಯಾವುದೇ ಪಕ್ಷದಲ್ಲಿದ್ದರೂ ಸಮುದಾಯದ ಏಳಿಗೆಗೆ ಶ್ರಮಿಸುವುದರೊಂದಿಗೆ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ ಆದರ್ಶವನ್ನು ಮೈಗೂಡಿಸಿಕೊಳ್ಳಬೇಕು ಎಂದು ಪಶು ಸಂಗೋಪನ ಸಚಿವ ಕೆ.ವೆಂಕಟೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ, ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ, ಸಾಧಕರಿಗೆ ಡಾ.ಬಾಲಗಂಗಾಧರನಾಥ ಸ್ವಾಮಿ ಸೇವಾರತ್ನ ಪ್ರಶಸ್ತಿ ಹಾಗೂ ಸಮುದಾಯದ ಆದರ್ಶ ದಂಪತಿಗಳಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮುದಾಯದ ಅಭಿವೃದ್ಧಿಗೆ ಪಕ್ಷಾತೀತವಾಗಿ ಭಿನ್ನಾಭಿಪ್ರಾಯ ಬದಿಗಿರಿಸಿ ಕೆಲಸ ಮಾಡಬೇಕು. ಸಮಾಜದ ಒಳಿತಿಗೆ ನಡೆಯುವ ಕೆಲಸಗಳಲ್ಲಿ ಹಿಂದೇಟು ಹಾಕಬಾರದು. ಹಳೆ ಮೈಸೂರು ಭಾಗವಲ್ಲದೇ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಒಕ್ಕಲಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಉಪ ಪಂಗಡಗಳಾಗಿ ಹಂಚಿ ಹೋಗಿದ್ದಾರೆ. ಹೀಗಾಗಿ ಎಲ್ಲ ಸಮುದಾಯವನ್ನು ಒಗ್ಗೂಡಿಸುವ ಉದ್ದೇಶದಿಂದ ಈ ಸಂಘ ಅಸ್ತಿತ್ವಕ್ಕೆ ಬಂದಿದ್ದು, ಸಂಘದ ರಾಜ್ಯಾಧ್ಯಕ್ಷ ಗಂಗಾಧರ ಗೌಡ ಸಮುದಾಯವನ್ನು ಕಟ್ಟುವ ಕೆಲಸ ಮಾಡಲು ಮುಂದಾಗಬೇಕು. ಇದಕ್ಕೆ ನಮ್ಮ ಸಂಪೂರ್ಣ ಸಹಕಾರ ಇರಲಿದೆ ಎಂದರು.

ಸಮಾಜ ವಿಚಾರ ಬಂದಾಗ ಕ್ಷುಲ್ಲಕ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳದೇ ಜನರಿಗೆ ಆತ್ಮವಿಶ್ವಾಸ ತುಂಬುವ ಕೆಲಸವನ್ನು ರಾಜಕಾರಣಿಗಳು ಮಾಡಬೇಕು. ಸಂಘ ಹಾಗೂ ಸಂಸ್ಥೆಗಳು ಸಮಾಜಮುಖಿಯಾಗಿ ಕೆಲಸ ಮಾಡಬೇಕು. ಎಲ್ಲ ಸಮಾಜಗಳನ್ನು ಒಂದಾಗಿ ಕಂಡು ಬೆಂಗಳೂರು ಕಟ್ಟಿದ ಕೆಂಪೇಗೌಡ ಆದರ್ಶವಾಗಬೇಕು ಎಂದು ತಿಳಿಸಿದರು.

ಹೆಣ್ಣು ಮಕ್ಕಳು ಲವ್ ಜಿಹಾದ್‌ಗೆ ಬಲಿ: ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಒಕ್ಕಲಿಗ ಸಮುದಾಯದ ಹೆಣ್ಣು ಮಕ್ಕಳು ಲವ್ ಜಿಹಾದ್‌ಗೆ ಬಲಿಯಾಗುತ್ತಿರುವ ಕೆಟ್ಟ ಘಟನೆಗಳೂ ನಡೆಯುತ್ತಿವೆ. ಪೊರಕೆ ಕಡ್ಡಿಗಳು ಒಟ್ಟಾಗಿದ್ದರೆ ಕಸ ಗುಡಿಸಬಹುದು. ಬಿಡಿಬಿಡಿಯಾದರೆ ಸವಾಲು ಎದುರಿಸಬೇಕಾಗುತ್ತದೆ. ಸಮುದಾಯದ ವ್ಯಕ್ತಿ ಬೆಳೆಯುತ್ತಿದ್ದರೆ ಏಣಿಯಾಗಬೇಕೇ ಹೊರತು ಕಾಲೆಳೆಯಬಾರದು. ಅಖಿಲ ಕರ್ನಾಟಕ ಒಕ್ಕಲಿಗರ ಸಂಘವು ಸಮುದಾಯದ ಉಪ ಪಂಗಡಗಳನ್ನು ಸಂಘಟಿಸುತ್ತಿರುವುದು ಶ್ಲಾಘನೀಯ. ಒಕ್ಕಲಿಗ ಸಮುದಾಯವು ಒಳಪಂಗಡಗಳಲ್ಲಿ ಹರಿದು ಹಂಚಿಹೋಗಿದೆ. ಉಪ ಪಂಗಡಗಳಲ್ಲಿ ಗುರುತಿಸಿಕೊಂಡ ಕಾರಣಕ್ಕೆ ಮೂಲ ಅಸ್ಮಿತೆ ಮರೆಯಬಾರದು. ರೈತ ಆತ್ಮವಿಶ್ವಾಸ ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕು. ಹಿಂದು ಧರ್ಮ ವಂಶವೃಕ್ಷವಾದರೆ ಒಕ್ಕಲಿಗ, ಕುರುಬ, ಲಿಂಗಾಯತ ಸೇರಿದಂತೆ ಎಲ್ಲ ಸಮುದಾಯಗಳು ಕವಲುಗಳಾಗಿವೆ. ಜಾತಿ ಹೆಸರಿನಲ್ಲಿ ಬೈದಾಗ ಪ್ರತಿಕ್ರಿಯೆ ಕೊಡುತ್ತಾರೆ. ಆದರೆ, ಧರ್ಮದ ವಿಷಯ ಬಂದಾಗ ಮೌನಿಗಳಾಗುತ್ತಾರೆ ಎಂದು ವಿಷಾದಿಸಿದರು.

ಈ ಹಿಂದೆ ಒಕ್ಕಲಿಗರು ಕೃಷಿ ಭೂಮಿಯನ್ನು ಮಾರುತ್ತಿರಲಿಲ್ಲ. ಈಗ ಮಾರುವ ಸಾಲಿನಲ್ಲಿ ಮೊದಲಿಗರು ಒಕ್ಕಲಿಗರಾಗಿದ್ದಾರೆ. ರೈತರು ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಜೊತೆಗೆ ನೇಗಿಲ ಯೋಗಿಗಳು ಮದುವೆಯಾಗಿ ಕಾಯುತ್ತಿದ್ದಾರೆ. ಆದರೆ, ಸಮುದಾಯದ ಕೆಲ ಹೆಣ್ಣು ಮಕ್ಕಳು ಲವ್ ಜಿಹಾದಿಗೆ ಒಳಗಾಗಿ ಬದುಕು ಕಳೆದುಕೊಳ್ಳುತ್ತಿದ್ದಾರೆ ಎಂದರು.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಅಂದಿನ ಕಾಲದಲ್ಲಿ ಸಮುದಾಯದಲ್ಲಿ ಹೆಚ್ಚು ವಿದ್ಯಾವಂತರು ಇರಲಿಲ್ಲ. ರಾಷ್ಟ್ರಕವಿ ಕುವೆಂಪು ಅವರು ಮೈಸೂರು ವಿವಿ ಕುಲಪತಿಯಾದಾಗ ಒಕ್ಕಲಿಗರ ವಿದ್ಯಾಭ್ಯಾಸಕ್ಕೆ ನೀಡಿದ ಪ್ರೇರಣೆ ಮತ್ತು ಬಾಲಗಂಗಾಧರನಾಥ ಸ್ವಾಮೀಜಿ ಅವರ ಸಮುದಾಯ ಕಾಳಜಿಯಿಂದ ಪ್ರಸ್ತುತ ಎಲ್ಲ ರಂಗದಲ್ಲಿಯೂ ಬೃಹದಾಕಾರದಲ್ಲಿ ಒಕ್ಕಲಿಗರು ಗುರುತಿಸಿಕೊಂಡಿದ್ದಾರೆ. ಗುಲ್ಬರ್ಗ, ರಾಯಚೂರು ಹಾಗೂ ಉತ್ತರ ಕರ್ನಾಟಕದಲ್ಲಿ ಕೂಡು ಒಕ್ಕಲಿಗರಿದ್ದು, ಇವರನ್ನು ಸಂಘಟಿಸಬೇಕು ಎಂದು ಹೇಳಿದರು.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್‌ಗೌಡ ಮಾತನಾಡಿ, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದಿಂದ ಇರಿಸಿದ್ದ 30 ಲಕ್ಷ ರೂ.ಠೇವಣಿಯಿಂದ ಬಂದ ಬಡ್ಡಿ ಹಣದಿಂದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗಲಿದೆ. ಸಮುದಾಯದಲ್ಲಿ ಅನ್ಯಾಯಕ್ಕೆ ಒಳಗಾದವರಿಗೆ ಸಹಾಯಸ್ತ ನೀಡಲಿದ್ದೇವೆ. ಅಧಿಕಾರಿಗಳು, ಜನಪ್ರತಿನಿಧಿಗಳು ಒಕ್ಕಲಿಗರ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಆದರ್ಶ ದಂಪತಿ: ಹಿರಿಯ ದಂಪತಿಗಳಾದ ಗೋವಿಂದೇಗೌಡ ಮತ್ತು ಜಯಮ್ಮ, ಉದ್ಯಮಿ ಸಿ.ವೈ.ಶಿವೇಗೌಡ ಮತ್ತು ಉಮಾರಾಣಿ–ಶಿವೇಗೌಡ, ಡಾ.ರಾಜಶೇಖರ್–ಡಾ.ಲತಾ ರಾಜಶೇಖರ್, ಶ್ರೀಕಂಠಯ್ಯ – ಶಾಂತಕುಮಾರಿ ಹೋಟೆಲ್ ಉದ್ಯಮಿ ಮಂಜುನಾಥ್–ವಿಜಯ, ಶಿವಶಂಕರ್ – ಉಮಾದೇವಿ ದಂಪತಿಗೆ ಆದರ್ಶ ಒಕ್ಕಲಿಗ ದಂಪತಿ ಪ್ರಶಸ್ತಿ ನೀಡಲಾಯಿತು.

20 ಮಂದಿಗೆ ಸೇವಾರತ್ನ ಪ್ರಶಸ್ತಿ: ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್, ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದ ಪ್ರೊ.ಆರ್.ಅನುರಾಧ ಪಟೇಲ್, ಪ್ರಗತಿಪರ ರೈತ ಎಂ.ಸಿ.ರಂಗಸ್ವಾಮಿ, ವೈದ್ಯ ಡಾ.ಶುಶ್ರುತ್ ಗೌಡ, ಬಿಜೆಪಿ ಮುಖಂಡ ಇ.ಸಿ.ನಿಂಗರಾಜೇಗೌಡ, ಲಿಂಗಪ್ಪ, ಕೆಎಎಸ್ ಅಧಿಕಾರಿ ಶೈಲಾ ರವಿಕುಮಾರ್, ಉದ್ಯಮಿ ಸಿ.ನಾರಾಯಣಗೌಡ, ಲಯನ್ ದೇವೇಗೌಡ, ಕೃಷಿ ವಿಜ್ಞಾನಿ ವಸಂತಕುಮಾರ್ ತಿಮಕಾಪುರ, ನಿವೃತ್ತ ಐಪಿಎಸ್ ಅಧಿಕಾರಿ ಎಸ್.ಪಿ.ಶಂಕರೇಗೌಡ, ಶಿಕ್ಷಣ ಸೇವೆಗೆ ದತ್ತೇಶ್ ಕುಮಾರ್, ಚಿತ್ರಕಲಾ ನಾಗರಾಜು, ಉದ್ಯಮಿ ಗೋಪಾಲಸ್ವಾಮಿ, ವಿ.ಸಿ.ರವಿಕುಮಾರ್, ಕಾಂಗ್ರೆಸ್ ಮುಖಂಡ ಕೆ.ದಿನೇಶ್, ರಾಜೂಗೌಡ, ಚಲುವರಾಜು, ಪತ್ರಕರ್ತ ರವಿಪಾಂಡವಪುರ ಅವರಿಗೆ ಪ್ರಶಸ್ತಿ ವಿತರಿಸಲಾಯಿತು. ಅಖಿಲ ಕರ್ನಾಟಕ ಒಕ್ಕಲಿಗರ ಸಂಘ ಮತ್ತು ಮಹಿಳಾ ಘಟಕದ ನೂತನ ಪದಾಧಿಕಾರಿಗಳಿಗೆ ಸೋಮನಾಥನಂದ ಸ್ವಾಮೀಜಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಹೆಸರಿನಲ್ಲಿ ಪ್ರತಿಜ್ಞಾವಿಧಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಅಶ್ವಥ್ ನಾರಾಯಣ, ಮಾಜಿ ಸಂಸದ ಪ್ರತಾಪಸಿಂಹ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ನಿರ್ದೇಶಕ ಮಂಜೇಗೌಡ, ಬಿಜೆಪಿ ಮುಖಂಡ ಜಯಪ್ರಕಾಶ್ (ಜೆಪಿ), ವಿಧಾನಪರಿಷತ್ ಮಾಜಿ ಸದಸ್ಯ ಮಾದೇಗೌಡ, ಐಪಿಎಸ್ ಅಧಿಕಾರಿ ಎನ್.ಪ್ರಕಾಶ್ ಗೌಡ, ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ವೈದ್ಯ ಡಾ.ಶುಶ್ರೂತ್ ಗೌಡ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಡಬ್ಬಲ್ ಇಸ್ಮಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೀಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಣಿ (ಕ)	4 ಪ್ರದರ್ಶನಗಳು
ರಾಜಕಮಲ್	
ಎಆರ್‌ಎಂ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಕಳಿಂಗ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ವಿಕಾಸಪರ್ವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಬಕಿಂಗ್ಹ್ಯಾಮ್ ಮರ್ಡರ್ಸ್ (ಹಿಂ): ಬೆ.10.45ಕ್ಕೆ, ಶಾಲಿವಾಹನ ಶಕೆ (ಕ): ಮ.1.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಸಂ.4ಕ್ಕೆ, ಎಆರ್‌ಎಂ (3ಡಿ) (ಮ): ರಾ.7.05ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ರಾ.9.55ಕ್ಕೆ.
ಸ್ಕ್ರೀನ್ 2	ಕಾಲಾಪತ್ಥರ್ (ಕ): ಬೆ.11.10ಕ್ಕೆ, ಸ್ತ್ರೀ 2 (ಹಿಂ): ಮ.1.35ಕ್ಕೆ, ಕಲ್ಜಿಗ (ಕ): ಸಂ.4.35ಕ್ಕೆ, ದಿ ಬಕಿಂಗ್ಹ್ಯಾಮ್ ಮರ್ಡರ್ಸ್ (ಹಿಂ): ರಾ.7.05ಕ್ಕೆ, ಕೊಂಡಲ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ರಾಣಿ (ಕ): ಬೆ.10.45ಕ್ಕೆ, ಮ.1.45ಕ್ಕೆ, ಅನ್ನ (ಕ): ಸಂ.4.45ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10ಕ್ಕೆ.
ಸ್ಕ್ರೀನ್ 4	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಬೆ.10.15ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ, ವಿಕಾಸಪರ್ವ (ಕ): ಮ.1.40ಕ್ಕೆ, ಉತ್ಸವಂ (ತೆ): ಸಂ.4ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಬೆ.10.25ಕ್ಕೆ, ರಾ.9.30ಕ್ಕೆ, ರಾಣಿ (ಕ): ಮ.1.45ಕ್ಕೆ, ಕಾಲಾಪತ್ಥರ್ (ಕ): ಸಂ.4.35ಕ್ಕೆ, ಮಾತು ವದಲಾರ 2 (ತೆ): ಸಂ.6.50ಕ್ಕೆ.
ಸ್ಕ್ರೀನ್ 2	ಕಾಲಾಪತ್ಥರ್ (ಕ): ಬೆ.10.20ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.12.35ಕ್ಕೆ, ಸಂ.6.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.40ಕ್ಕೆ, ಎಆರ್‌ಎಂ (3ಡಿ) (ಮ): ರಾ.9.50ಕ್ಕೆ.
ಸ್ಕ್ರೀನ್ 3	ಇಬ್ಬನಿ ತಬ್ಬಿದ ಇಳೆಯಲಿ (ಕ): ಬೆ.10.45ಕ್ಕೆ, ಎಆರ್‌ಎಂ (3ಡಿ) (ಮ): ಮ.3.20ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕಳಿಂಗ (ತೆ): ರಾ.9.35ಕ್ಕೆ.
ಸ್ಕ್ರೀನ್ 4	ಶಾಲಿವಾಹನ ಶಕೆ (ಕ): ಬೆ.10.40ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.1.20ಕ್ಕೆ, ಕಲ್ಜಿಗ (ಕ): ಸಂ.4.25ಕ್ಕೆ, ರಾಣಿ (ಕ): ಸಂ.6.40ಕ್ಕೆ, ಉತ್ಸವಂ (ತೆ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪ್ಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರಿನಲ್ಲಿ ಬಹಳಷ್ಟು ಬಾಂಗ್ಲಾದೇಶಿಯರ ಅಕ್ರಮ ವಾಸ; ಬಂಧನಕ್ಕೆ ಶಾಸಕ ಶ್ರೀವತ್ಸ ಆಗ್ರಹ



ಟಿ.ಎಸ್.ಶ್ರೀವತ್ಸ

ಮೈಸೂರು, ಸೆ.16(ಬಿಎಲ್‌ಯು)– ಮೈಸೂರಿನಲ್ಲಿ ಬಹಳಷ್ಟು ಬಾಂಗ್ಲಾದೇಶಿಯರು ಅಕ್ರಮವಾಗಿ ನೆಲೆಸಿದ್ದಾರೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ನಗರದ ಅಗ್ರಹಾರದ 101 ಗಣಪತಿ ದೇವಸ್ಥಾನದ ಬಳಿ ಬಿಜೆಪಿ ಸದಸ್ಯತ್ವ ಅಭಿಯಾನ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರಿನಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿಯರನ್ನು ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕಳೆದ ತಿಂಗಳು ನಾನು ಬೆಂಗಳೂರಿನಿಂದ ಮೈಸೂರಿಗೆ ಬಸ್‌ನಲ್ಲಿ ಬರುವಾಗ ಏಳು ಮಂದಿ ಬಾಂಗ್ಲಾದೇಶಿಯರು ಇದ್ದರು. ಅವರ ಬಳಿ ಎರಡು ಗುರುತಿನ ಚೀಟಿಗಳಿದ್ದವು. ನಾವು ಬಸ್‌ನ್ನು ನೇರವಾಗಿ ಲಷ್ಕರ್ ಪೊಲೀಸ್ ಠಾಣೆಗೆ ಕರೆತಂದೆವು ಎಂದು ಶ್ರೀವತ್ಸ ತಿಳಿಸಿದರು.

ತರುವಾಯ ಬಸ್‌ನಲ್ಲಿದ್ದ ಏಳು ಬಾಂಗ್ಲಾದೇಶಿಗರನ್ನು ಪೊಲೀಸರು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡರು. ಮೈಸೂರಿನಲ್ಲಿ ಬಾಂಗ್ಲಾ ವಾಸಿಗಳು ನೆಲೆಸಿರುವುದಕ್ಕೆ ಇದೇ ಸ್ಪಷ್ಟ ನಿದರ್ಶನ ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ಪೊಲೀಸರು ಕಾರ್ಯೋನ್ಮುಖರಾಗಿ ಮೈಸೂರಿನಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿಗರನ್ನು ಬಂಧಿಸಬೇಕು ಎಂದು ಶ್ರೀವತ್ಸ ಒತ್ತಾಯಿಸಿದರು.

ಚೆನ್ನಾರೆಡ್ಡಿಯನ್ನೇಕೆ ಇನ್ನು ಬಂಧಿಸಿಲ್ಲ...

ಶಾಸಕ ಮುನಿರತ್ನ ಬಂಧನ ವಿಚಾರದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ದ್ವಿಮುಖ ನೀತಿ ಅನುಸರಿಸುತ್ತಿದೆ ಎಂದು ಇದೇ ವೇಳೆ ಶ್ರೀವತ್ಸ ಆಪಾದಿಸಿದರು.

ಇದೇ ರೀತಿಯ ಆರೋಪಕ್ಕೆ ಗುರಿಯಾಗಿರುವ ಶಾಸಕ ಚೆನ್ನಾರೆಡ್ಡಿಯನ್ನು ಈ ತನಕ ಬಂಧಿಸಿಲ್ಲ. ಚೆನ್ನಾರೆಡ್ಡಿ ಗೃಹ ಸಚಿವರ ನಿವಾಸದಲ್ಲೇ ಓಡಾಡಿಕೊಂಡಿದ್ದಾರೆ. ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದ ಸರ್ಕಾರ ಮುನಿರತ್ನ ಅವರನ್ನು ಏಕೆ ತರಾತುರಿಯಲ್ಲಿ ಬಂಧಿಸಿದೆ ಎಂದು ಪ್ರಶ್ನಿಸಿದರು.

ಆಡಿಯೋದಲ್ಲಿನ ಧ್ವನಿ ನನ್ನದಲ್ಲ ಎಂದು ಮುನಿರತ್ನ ಸ್ಪಷ್ಟಪಡಿಸಿದ್ದಾರೆ. ಇದರಿಂದ ಎಫ್‌ಎಸ್‌ಎಲ್ ವರದಿ ಬರುವ ತನಕ ಪೊಲೀಸರು ಕಾಯಬೇಕಿತ್ತು ಎಂದು ಅಭಿಪ್ರಾಯಪಟ್ಟರು. ಒಂದು ವೇಳೆ ಮುನಿರತ್ನ ಎರಡು ಸಮುದಾಯಗಳನ್ನು ಗುರಿಯಾಗಿಟ್ಟುಕೊಂಡು ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ಸತ್ಯಾಂಶದಿಂದ ಕೂಡಿದ್ದರೆ ಅದನ್ನು ಖಂಡಿತವಾಗಿ ನಾವು ಒಪ್ಪುವುದಿಲ್ಲ ಎಂದು ಶ್ರೀವತ್ಸ ಹೇಳಿದರು.

ಎಂ.ಎಸ್. ಸುಪ್ರದರಾವ್‌ಗೆ ಪಿಎಚ್.ಡಿ



ಮೈಸೂರು, ಸೆ. 16–ಡಾ. ಎ.ಸಿ. ಶಾರದಾ ಅವರ ಮಾರ್ಗದರ್ಶನದಲ್ಲಿ ಎಂ.ಎಸ್. ಸುಪ್ರದರಾವ್ ಅವರು ಜೀವರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಶಾಸಕ ಮುನಿರತ್ನ ವಿರುದ್ಧ ಸಂಚು

● ಬಿಜೆಪಿ ಎಂಎಲ್‌ಸಿ ಸಿ.ಟಿ. ರವಿ ಆರೋಪ ● ಟೂಲ್ ಕಿಟ್ ಬಳಸಿ ಆಡಿಯೋ ಮಾಡಿ ಬಂಧನ ತಂತ್ರ ● ಚಿಕ್ಕಮಗಳೂರಲ್ಲಿ ಪಾಲೆಸ್ತೈನ್ ಬಾವುಟ ಹಾರಾಟಕ್ಕೆ ಖಂಡನೆ



ಸಿ.ಟಿ.ರವಿ

ಮೈಸೂರು,ಸೆ.16(ಎಂಟಿವೈ)– ಟೂಲ್ ಕಿಟ್ ಬಳಸಿ ಆಡಿಯೋ ರಚಿಸಿ ಶಾಸಕ ಮುನಿರತ್ನ ವಿರುದ್ಧ ಸಂಚು ಮಾಡಿ, ಬಂಧಿಸಲಾಗಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಆರೋಪಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗುತ್ತಿಗೆದಾರರೊಂದಿಗೆ ಶಾಸಕ ಮುನಿರತ್ನ ಮಾತನಾಡಿದ್ದಾರೆ ಎಂಬ ಆಡಿಯೋ ತುಣುಕು ಗಮನಿಸಿದರೆ, ಟೂಲ್ ಕಿಟ್ ಬಳಸಿ ಆಡಿಯೋ ತಯಾರಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಆಡಿಯೋ ಕುರಿತ ಎಫ್‌ಎಸ್‌ಎಲ್ ವರದಿ ಬರುವ ಮುನ್ನವೇ ಮುನಿರತ್ನ ಅವರನ್ನು ಆತುರದಲ್ಲಿ ಬಂಧಿಸಲಾಗಿದೆ. ಈ ಹಿಂದೆ ಕಾಂಗ್ರೆಸ್ ಶಾಸಕ ಚೆನ್ನಾರೆಡ್ಡಿ ವಿರುದ್ಧವೂ ಅಟ್ರಾಸಿಟಿ ಪ್ರಕರಣ ದಾಖಲಾಗಿದೆ. ಅವರನ್ನು ಬಂಧಿಸದೇ ಸಿಎಂ ತಮ್ಮ ಮನೆಯಲ್ಲಿ ಬಿರಿಯಾನಿ ಊಟ ಹಾಕಿ ಕಳುಹಿಸಿದ್ದರು. ಕೃಷಿ ಸಚಿವ ಚಲುವರಾಯಸ್ವಾಮಿ, ನಾಗೇಂದ್ರ ಸೇರಿ ಹಲವು ಕಾಂಗ್ರೆಸ್ ನಾಯಕರ ವಿರುದ್ಧ ದೂರು ದಾಖಲಾಗಿದೆ. ಯಾರನ್ನು ಬಂಧಿಸಿಲ್ಲ. ಎಫ್‌ಐಆರ್ ದಾಖಲಾದ ದಿನವೇ ಮುನಿರತ್ನ ಅವರನ್ನು ಬಂಧಿಸಿದ್ದಾರೆ. ಇದು ಅನುಮಾನಕ್ಕೆ ಕಾರಣವಾಗಿದೆ ಎಂದು ಕಿಡಿಕಾರಿದರು.

ಚಿಕ್ಕಮಗಳೂರಿನಲ್ಲಿ ಪ್ಯಾಲೇಸ್ತೈನಿ ಬಾವುಟ ಹಾರಿಸಿರುವುದು ಖಂಡನೀಯ. ಮಲೆನಾಡು ಭಯೋತ್ಪಾದಕರ ತಾಣವಾಗುತ್ತಿದೆ. ಭಯೋತ್ಪಾದಕ ಕೃತ್ಯಕ್ಕೆ ಇಲ್ಲಿ ತರಬೇತಿ ನೀಡಲಾಗುತ್ತಿದೆ. ಈ ಹಿಂದೆ ಕೊಪ್ಪದಲ್ಲಿ ಯಾಸೀನ್ ಭಟ್ಕಳ್ ನೇತೃತ್ವದಲ್ಲಿ ಭಯೋತ್ಪಾದಕರ ತರಬೇತಿ ಶಿಬಿರ ನಡೆಸಲಾಗುತ್ತಿತ್ತು. ಅದನ್ನು ಭಜರಂಗದಳ ಪತ್ತೆ ಹಚ್ಚಿತ್ತು. ಪ್ಯಾಲೆಸ್ತೈನಿ ಬಾವುಟ ಹಾರಿಸಿದ ಪ್ರಕರಣದ ಹಿಂದಿನ ಜಾಲವನ್ನು ಪತ್ತೆ ಹಚ್ಚಬೇಕು. ಆರೋಪಿಗಳನ್ನು ಬಿಟ್ಟಿರುವುದು ಖಂಡನೀಯ. ದೇಶ ವಿರೋಧಿ ಚಟುವಟಿಕೆ ನಡೆಸಿದವರನ್ನು ಸಮಗ್ರ ವಿಚಾರಣೆಗೆ ಒಳಪಡಿಸಬೇಕಾಗಿತ್ತು. ಪ್ರಭಾವಿಗಳು ಹೇಳಿದ್ದಾರೆ ಎಂದು ವಿಚಾರಣೆ ಮಾಡದೇ ಬಿಟ್ಟು ಕಳುಹಿಸಿದ್ದಾರೆ. ಇದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎನ್‌ಐಎ ತನಿಖೆ ಆಗಬೇಕು: ನಾಗಮಂಗಲ ಗಲಭೆ ಪ್ರಕರಣದಲ್ಲಿ ಹೊರಗಿನ ಶಕ್ತಿ ಕೆಲಸ ಮಾಡಿದೆ ಎಂಬ ಅನುಮಾನ ನನಗೆ ಇತ್ತು. ಇದೀಗ ಕೇರಳದವರ ಹೆಸರು ಬಹಿರಂಗವಾಗಿರುವುದರಿಂದ ಅದು ಸಾಬೀತಾಗಿದೆ. ಈ ಕುರಿತು ಎನ್‌ಐಎ ತನಿಖೆಗೆ ಒಳಪಡಿಸಬೇಕು. ಮಂಡ್ಯದಲ್ಲಿ ಶೇ.90ರಷ್ಟು ಹಿಂದುಗಳಿದ್ದಾರೆ. ಅಂತಹ ಕಡೆ ಈ ರೀತಿ ಕೃತ್ಯ ಮಾಡಿರುವುದು ಪೂರ್ವ ನಿಯೋಜಿತ. ಗಲಾಟೆಗಿಂತ ಹೆಚ್ಚಾಗಿ ಭಯದ ವಾತಾವರಣ ನಿರ್ಮಾಣ ಮಾಡಬೇಕು. ಆತಂಕ ಸೃಷ್ಟಿ ಮಾಡಬೇಕು, ಗಲಭೆ ಮಾಡಿ ನಷ್ಟ ಉಂಟು ಮಾಡಬೇಕು ಎಂಬುದು ಅವರ ಉದ್ದೇಶವಾಗಿದೆ. ಪ್ರಕರಣದಲ್ಲಿ ಪೊಲೀಸರು ಅಸಹಾಯಕರಂತೆ ನಿಂತಿರುವ ವಿಡಿಯೋ ಅಲ್ಲಿನ ಪರಿಸ್ಥಿತಿ ಹಾಗೂ ಪೂರ್ವನಿಯೋಜಿತ ಕೃತ್ಯವನ್ನು ತಿಳಿಸುತ್ತದೆ. ಮುಸ್ಲಿಂರ ವಿರುದ್ಧ ಕ್ರಮ ಕೈಗೊಳ್ಳಬೇಡಿ ಎಂದು ಪೊಲೀಸರಿಗೆ ಸೂಚನೆ ನೀಡಿರುವಂತೆ ಕಂಡು ಬಂದಿದೆ. ಆ ಸೂಚನೆ ನೀಡಿದವರು ಯಾರು ಎನ್ನುವುದು ಬಹಿರಂಗವಾಗಬೇಕು ಎಂದು ಒತ್ತಾಯಿಸಿದರು.

ಇಂಜಿನಿಯರ್ಸ್ ದಿನಾಚರಣೆ



ಇಂಜಿನಿಯರ್ಸ್ ದಿನದ ಅಂಗವಾಗಿ ಜೆ.ಪಿ.ನಗರ ಲಯನ್ಸ್ ಕ್ಲಬ್ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯಪಾಲಕ ಅಭಿಯಂತರ ರಂಗರಾಜು ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಕ್ಲಬ್ಬಿನ ಅಧ್ಯಕ್ಷ ಲಯನ್ ಕೆ.ಎ.ಸಿದ್ದಲಿಂಗಪ್ಪ, ಇಂಗ್ಲೀಷ್ ಉಪನ್ಯಾಸಕ ಕೆ. ಶಶಿಧರ, ಹಿರಿಯ ಲಯನ್ ಕೆ.ವಿ.ಪಾರ್ಥರಾಜು, ಯೋಗ ಪ್ರತಿಷ್ಠಾನದ ಅಧ್ಯಕ್ಷ ಎನ್. ಸುಂದರಾಜು ಮತ್ತು ಕ್ಲಬ್ಬಿನ ಕಾರ್ಯದರ್ಶಿ ಲಯನ್ ಶ್ರೀ ವಿ. ಸತ್ಯನಾರಾಯಣ ಉಪಸ್ಥಿತರಿದ್ದರು.

ವಿದ್ವಾನ್ ಕುನ್ನಕ್ಕುಡಿ ಬಾಲಮುರುಳಿಕೃಷ್ಣ ಸಂಗೀತಕ್ಕೆ ಮಾರುಹೋದ ಶ್ರೋತೃಗಳು



63ನೇ 'ಪಾರಂಪರಿಕ ಸಂಗೀತೋತ್ಸವ'ದ ಹತ್ತನೇ ದಿನದ ಕಾರ್ಯಕ್ರಮದಲ್ಲಿ ವಿದ್ವಾನ್ ಕುನ್ನಕ್ಕುಡಿ ಬಾಲಮುರುಳಿಕೃಷ್ಣ ಅವರ ಗಾಯನ ಮೆರಗು ತಂದುಕೊಟ್ಟಿತು.

ಮೈಸೂರು,ಸೆ16(ಎಸ್‌ಪಿಎನ್)– ವಿದ್ವಾನ್ ಕುನ್ನಕ್ಕುಡಿ ಬಾಲಮುರುಳಿಕೃಷ್ಣ ಅವರು ಪ್ರಸ್ತುತಪಡಿಸಿದ ಕರ್ನಾಟಕ ಸಂಗೀತದ ವಿವಿಧ ರಾಗ ಆಲಾಪಕ್ಕೆ ಸಭಿಕರು ತಲೆದೂಗಿದರು.

ನಗರದ ವಾಣಿವಿಲಾಸ ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ ಶ್ರೀಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟೇಬಲ್ ಟ್ರಸ್ಟ್ (ಎಸ್‌ಪಿವಿಜಿಎಂಸಿ) ಏರ್ಪಡಿಸಿರುವ 63ನೇ 'ಪಾರಂಪರಿಕ ಸಂಗೀತೋತ್ಸವ'ದ ಹತ್ತನೇ ದಿನದ ಕಾರ್ಯಕ್ರಮದಲ್ಲಿ ವಿದ್ವಾನ್ ಕುನ್ನಕ್ಕುಡಿ ಬಾಲಮುರುಳಿಕೃಷ್ಣ ಅವರ ಗಾಯನ ಮೆರಗು ತಂದುಕೊಟ್ಟಿತು.

ವಿದುಷಿ ಅಕ್ಕರೈ ಶುಭಲಕ್ಷ್ಮಿ ವಯೋಲಿನ್, ವಿದ್ವಾನ್ ಸುಂದರ್‌ಕುಮಾರ್ ಮೃದಂಗ, ವಿದ್ವಾನ್ ಗುರುಪ್ರಸನ್ನ ಖಂಜಿರಾ ಹಾಗೂ ವಿದುಷಿ ಶ್ರೀವಿದ್ಯಾ ತಂಬೂರಿ ನುಡಿಸುವ ಮೂಲಕ ಸಂಗೀತ ಕಛೇರಿಗೆ ಮೆರಗು ತಂದರು.

ಇದಕ್ಕೂ ಮುನ್ನ 'ಶಿವತತ್ವ ಚಿಂತಾಮಣಿ' ಕುರಿತು ವಿದುಷಿ ಕೆ.ಎಸ್.ಭಾಗ್ಯಲಕ್ಷ್ಮಿ ವಾಚನ ಮಾಡಿದರು. ನಿವೃತ್ತ ಪ್ರಾಧ್ಯಾಪಕ ಮೊರಬದ ಮಲ್ಲಿಕಾರ್ಜುನ ವ್ಯಾಖ್ಯಾನಿಸಿದರು.

ಅಭಿನಂದನೆ: ಪಾರಂಪರಿಕ ಸಂಗೀತೋತ್ಸವದಲ್ಲಿ ಸೆ.18ರಂದು ಸಂಜೆ 6 ಗಂಟೆಗೆ ಮದ್ರಾಸ್ ಸಂಗೀತ ಅಕಾಡೆಮಿಯ ಸಂಗೀತ ಕಲಾನಿಧಿ–2024ರ ಗೌರವಕ್ಕೆ ಭಾಜನರಾಗಿರುವ ವಿದ್ವಾನ್ ಟಿ.ಎಂ.ಕೃಷ್ಣ ಅವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದ್ದು, ನಿವೃತ್ತ ಐಎಎಸ್ ಅಧಿಕಾರಿ ಎಸ್.ಕೃಷ್ಣಕುಮಾರ್ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಎಸ್‌ಪಿವಿಜಿಎಂಸಿ ಟ್ರಸ್ಟ್ ಅಧ್ಯಕ್ಷರಾದ ಜಗನ್ನಾಥ ಶೆಣೈ ಅಧ್ಯಕ್ಷತೆ ವಹಿಸಲಿದ್ದು, ಈ ಕಾರ್ಯಕ್ರಮ ನಂತರ ವಿದ್ವಾನ್ ಟಿ.ಎಂ.ಕೃಷ್ಣ ಅವರ ಸಂಗೀತ ಕಛೇರಿ ನಡೆಯಲಿದೆ.

ಕೃಷ್ಣರಾಜ ಕ್ಷೇತ್ರದ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

ನಾಗಮಂಗಲ ಗಲಭೆಗೆ ಸರ್ಕಾರದ ವೈಫಲ್ಯವೇ ಕಾರಣ; ಆರೋಪ



ಮೈಸೂರಿನ ಅಗ್ರಹಾರದ 101 ಗಣಪತಿ ದೇವಸ್ಥಾನದ ಬಳಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ, ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ಕೌಟಿಲ್ಯ ರಘು, ಅಲ್ಪ ಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಅನಿಲ್ ಥಾಮಸ್ ಸೇರಿದಂತೆ ಇತರರು ಈ ವೇಳೆ ಹಾಜರಿದ್ದರು.

ಮೈಸೂರು, ಸೆ.16(ಬಿಎಲ್‌ಯು)– ಮೈಸೂರಿನ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಇಂದು ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು.

ನಗರದ ಅಗ್ರಹಾರದ 101 ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಬಿಜೆಪಿ ಸದಸ್ಯತ್ವ ಅಭಿಯಾನ ಆರಂಭಿಸಲಾಯಿತು.

ಈ ವೇಳೆ ಮಾತನಾಡಿದ ಶ್ರೀವತ್ಸ, ಸದಸ್ಯತ್ವ ಅಭಿಯಾನದ ಮೂಲಕ ಬಿಜೆಪಿಯನ್ನು ಮತ್ತಷ್ಟು ಸಂಘಟನೆ ಮಾಡಲಾಗುವುದು. ಮೈಸೂರು ಸೇರಿದಂತೆ ಇಡೀ ರಾಷ್ಟ್ರದಲ್ಲಿ ಅಭಿಯಾನ ನಡೆಯುತ್ತಿದೆ ಎಂದರು.

ನಾಗಮಂಗಲದಲ್ಲಿ ಗಣೇಶನ ಮೆರವಣಿಗೆಗೆ ಅಡ್ಡಿಪಡಿಸಿ ಗಲಭೆ ನಡೆಸಿರುವುದು ಖಂಡನೀಯ. ಪೊಲೀಸ್ ಇಲಾಖೆಯ ವೈಫಲ್ಯ ಇದಕ್ಕೆ ಪ್ರಮುಖ ಕಾರಣವಾಗಿದೆ. ಬಂದೋಬಸ್ತ್‌ಗೆ ಬಂದಿದ್ದ 300 ಕೆಎಸ್‌ಆರ್‌ಪಿ ಪೊಲೀಸರಿಗೆ ಊಟದ ವ್ಯವಸ್ಥೆ ಮಾಡಿಸಬೇಕಾಗುತ್ತದೆ ಎಂದು ಅಲ್ಲಿನ ಪೊಲೀಸ್ ಇನ್ಸ್‌ಪೆಕ್ಟರ್ ಪೊಲೀಸ್ ಸಿಬ್ಬಂದಿಯನ್ನು ವಾಪಸು ಕಳುಹಿಸಿದರು. ಹೆಚ್ಚಿನ ಪೊಲೀಸರನ್ನು ನಿಯೋಜಿಸಿ, ಸೂಕ್ತ ಬಂದೋಬಸ್ತ್ ಮಾಡದಿರುವುದು ಗಲಭೆಗೆ ಕಾರಣವಾಯಿತು. ಇದು ಸರ್ಕಾರದ ವೈಫಲ್ಯತೆಯನ್ನು ಬಿಂಬಿಸುತ್ತದೆ ಎಂದು ಆರೋಪಿಸಿದರು.

ಈಗಲೂ ರಾಜ್ಯದ ಹಲವೆಡೆ ಗಣಪತಿ ಮೆರವಣಿಗೆ ನಡೆಯುತ್ತಿದೆ. ನಾಗಮಂಗಲದಂತೆ ಎಲ್ಲೂ ಇಂತಹ ಗಲಭೆಗಳು ನಡೆಯದಂತೆ ಸರ್ಕಾರ ಕೂಡಲೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಶ್ರೀವತ್ಸ ಆಗ್ರಹಿಸಿದರು.

ಈ ವೇಳೆ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಮೈಸೂರಿನಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ ಆರಂಭಿಸಲಾಗಿದೆ. ಪ್ರತಿಯೊಂದು ಮನೆಗೆ ಭೇಟಿ ನೀಡಿ ಸದಸ್ಯತ್ವ ಮಾಡಿಸುವಂತೆ ಕಾರ್ಯಕರ್ತರಿಗೆ ಗುರಿ ನೀಡಲಾಗಿದೆ. ಪ್ರತಿಯೊಬ್ಬ ಮುಖಂಡ ಕನಿಷ್ಠ 300 ಮಂದಿಗೆ ಸದಸ್ಯತ್ವ ಮಾಡಿಸುವಂತೆ ತಾಕೀತು ಮಾಡಲಾಗಿದೆ ಎಂದರು.

ಈ ಮೂಲಕ ಮೈಸೂರಿನ ಕೃಷ್ಣರಾಜ, ಚಾಮರಾಜ, ನರಸಿಂಹರಾಜ ಹಾಗೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ತಲಾ ಒಂದು ಲಕ್ಷದಂತೆ ನಾಲ್ಕು ಲಕ್ಷಕ್ಕೂ ಹೆಚ್ಚು ಸದಸ್ಯತ್ವ ಮಾಡಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಈ ವೇಳೆ ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಕೌಟಿಲ್ಯ ರಘು, ಅಲ್ಪ ಸಂಖ್ಯಾತ ಮೋರ್ಚಾ ಅಧ್ಯಕ್ಷ ಅನಿಲ್ ಥಾಮಸ್, ಮಾಜಿ ಮೇಯರ್ ಶಿವಕುಮಾರ್, ಒಬಿಸಿ ಮೋರ್ಚಾ ನಗರಾಧ್ಯಕ್ಷ ಜೋಗಿ ಮಂಜು ಸೇರಿದಂತೆ ಇತರರು ಈ ವೇಳೆ ಹಾಜರಿದ್ದರು.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಪದಾಧಿಕಾರಿಗಳ ಪದಗ್ರಹಣ, ಕೆಂಪೇಗೌಡ ಜಯಂತಿ





ಮೈಸೂರಿನ ಕಲಾಮಂದಿರದಲ್ಲಿ ಸೋಮವಾರ ನಡೆದ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಪದಾಧಿಕಾರಿಗಳ ಪದಗ್ರಹಣ, ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಹಿರಿಯ ದಂಪತಿಗಳಾದ ಗೋವಿಂದೇಗೌಡ ಮತ್ತು ಜಯಮ್ಮ, ಉದ್ಯಮಿ ಸಿ.ವೈ.ಶಿವೇಗೌಡ ಮತ್ತು ಉಮಾರಾಣಿ–ಶಿವೇಗೌಡ, ಡಾ.ರಾಜಶೇಖರ್–ಡಾ.ಲತಾ ರಾಜಶೇಖರ್, ಶ್ರೀಕಂಠಯ್ಯ – ಶಾಂತಕುಮಾರಿ, ಹೋಟೆಲ್ ಉದ್ಯಮಿ ಮಂಜುನಾಥ್–ವಿಜಯ, ಶಿವಶಂಕರ್ –ಉಮಾದೇವಿ ದಂಪತಿಗೆ ಆದರ್ಶ ಒಕ್ಕಲಿಗ ದಂಪತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಾರ್ಯಕ್ರಮಕ್ಕೂ ಮುನ್ನ ನಡೆದ ಅದ್ಧೂರಿ ಮೆರವಣಿಗೆಯನ್ನು ಬಲಚಿತ್ರದಲ್ಲಿ ಕಾಣಬಹುದು.

ಜಾತಿ ನಿಂದನೆ ಪ್ರಕರಣ

ಮುನಿರತ್ನ ವಿರುದ್ಧ ಕಠಿಣ ಕ್ರಮಕ್ಕೆ ಆಡಳಿತ ಪಕ್ಷದ ಒಕ್ಕಲಿಗ ಸಚಿವರು, ಶಾಸಕರಿಂದ ಸಿಎಂಗೆ ಮನವಿ



ಕಾಂಗ್ರೆಸ್ ಒಕ್ಕಲಿಗ ಶಾಸಕರು, ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ಕ್ರಮಕ್ಕೆ ಸಿಎಂಗೆ ಮನವಿ ಸಲ್ಲಿಸಿದರು.

ಬೆಂಗಳೂರು, ಸೆ. 16(ಕೆಎಂಶಿ)– ಜಾತಿ ನಿಂದನೆ ಪ್ರಕರಣದಲ್ಲಿ ಸಿಲುಕಿರುವ ಬಿಜೆಪಿ ಶಾಸಕ ಹಾಗೂ ಮಾಜಿ ಸಚಿವ ಮುನಿರತ್ನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಡಳಿತ ಪಕ್ಷದ ಒಕ್ಕಲಿಗ ಸಮುದಾಯದ ಸಚಿವರು ಮತ್ತು ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದ್ದಾರೆ.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರ ನೇತೃತ್ವದಲ್ಲಿ ಬೆರಳೆಣಿಕೆಯಷ್ಟೇ ಸದಸ್ಯರು ಮುಖ್ಯಮಂತ್ರಿಗಳ ಸರ್ಕಾರಿ ನಿವಾಸ ಕಾವೇರಿಯಲ್ಲಿ ಸಿದ್ದರಾಮಯ್ಯ ಅವರನ್ನು ಇಂದು ಭೇಟಿ ಮಾಡಿದರು.

ಪ್ರಭಾವೀ ಮಾಜಿ ಸಂಸದರ ಸಲಹೆ ಮೇರೆಗೆ ನಿಯೋಗ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದೆ. ಆಡಳಿತ ಪಕ್ಷದಲ್ಲಿ ಈ ಸಮುದಾಯದ 40ಕ್ಕೂ ಹೆಚ್ಚು ಶಾಸಕರಿದ್ದಾರೆ, ಆದರೆ, ಚಲುವರಾಯಸ್ವಾಮಿ ಹಾಗೂ ಡಾ.ಸುಧಾಕರ್ ಅವರನ್ನು ಹೊರತುಪಡಿಸಿ ಉಳಿದ ಸಚಿವರು ನಿಯೋಗದಲ್ಲಿ ಇರಲಿಲ್ಲ. ನಲವತ್ತಕ್ಕೂ ಹೆಚ್ಚು ಶಾಸಕರನ್ನು ಹೊಂದಿದ್ದರೂ ಇಬ್ಬರು ವಿಧಾನ ಪರಿಷತ್ ಸದಸ್ಯರೂ ಸೇರಿದಂತೆ 8 ಮಂದಿಯಷ್ಟೇ ಹಾಜರಿದ್ದರು. ಮುಖ್ಯಮಂತ್ರಿ ಭೇಟಿಗೆ ನಿಯೋಗದಲ್ಲಿ ತೆರಳುವಂತೆ ಪ್ರಭಾವಿಗಳು ಮನವಿ ಮಾಡಿದರೂ ಸಚಿವರಾದ ಕೃಷ್ಣಬೈರೇಗೌಡ, ರಾಮಲಿಂಗಾ ರೆಡ್ಡಿ, ಎಚ್.ಕೆ.ಪಾಟೀಲ್, ಕೆ.ವೆಂಕಟೇಶ್ ಸೇರಿದಂತೆ ಉಳಿದ ಯಾವುದೇ ಸದಸ್ಯರು ಇರಲಿಲ್ಲ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂಜಾನೆಯಷ್ಟೇ ವಿದೇಶದಿಂದ ಹಿಂತಿರುಗಿದ್ದರಿಂದ ನಿಯೋಗದಲ್ಲಿ ತೆರಳಲು ಸಾಧ್ಯವಾಗಲಿಲ್ಲ. ಮುಖ್ಯಮಂತ್ರಿ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರಾದ ಚಲುವರಾಯಸ್ವಾಮಿ ಹಾಗೂ ಡಾ.ಸುಧಾಕರ್, ಜಾತಿ ನಿಂದನೆ ಮಾಡಿರುವ ಮುನಿರತ್ನ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು. ಎಸ್ಐಟಿ ಇಲ್ಲವೇ ಲೋಕಾಯುಕ್ತಕ್ಕೆ ಪ್ರಕರಣವನ್ನು ವಹಿಸುವಂತೆ ನಾವು ಮಾಡಿದ ಮನವಿಗೆ ಮುಖ್ಯಮಂತ್ರಿ ಅವರು ಸ್ಪಂದಿಸಿದ್ದಾರೆ ಎಂದರು.

ಒಕ್ಕಲಿಗ ಹಾಗೂ ಎಸ್‌ಸಿ ಸಮುದಾಯದ ಬಗ್ಗೆ ಮಾತನಾಡಿದ್ದಾರೆ. ಈಗಾಗಲೇ ಅವರು ಪೊಲೀಸ್ ವಶದಲ್ಲಿದ್ದಾರೆ. ಈ ಹಿಂದೆ ಸಹಾ ಬಹಳಷ್ಟು ಸಮುದಾಯಗಳ ಬಗ್ಗೆ ಅವಹೇಳನಕಾರಿ ರೀತಿಯಲ್ಲಿ ಮಾತನಾಡಿದ್ದಾರೆ. ಅಷ್ಟೇ ಅಲ್ಲ, ಸ್ವಾಮೀಜಿಗಳ ಬಗ್ಗೆಯೂ ನಾಲಿಗೆ ಹರಿಬಿಟ್ಟಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡಿದ್ದೇವೆ.

ಮುನಿರತ್ನ ವಿರುದ್ಧ ಲೋಕಾಯುಕ್ತದಲ್ಲೂ ಪ್ರಕರಣಗಳು ದಾಖಲಾಗಿವೆ. ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ವಿವಿಧ ಠಾಣೆಗಳಲ್ಲಿ ಮೊಕದ್ದಮೆ ಹೂಡಲಾಗಿದೆ. ಧೈರ್ಯ ಮಾಡಿದ್ದರಿಂದ ಇಂತಹ ದೊಡ್ಡ ಪ್ರಕರಣ ಬಯಲಾಗಿದೆ. ಅವರಿಗೆ ಸಂಬಂಧಿಸಿದಂತೆ ಮತ್ತಷ್ಟು ಸಾಕ್ಷಿಗಳು ಹೊರಬರಲಿವೆ. ಆಡಿಯೊ ಈಗಾಗಲೇ ಬಯಲಾಗಿದೆ, ಮುನಿರತ್ನ ಎಲ್ಲಾ ವಿದ್ಯೆ ಕಲಿತ ಮಾಡಿಕೊಂಡವರು, ಅವರ ವಿರುದ್ಧ ಉನ್ನತ ಮಟ್ಟದ ತನಿಖೆ ಅಗತ್ಯವಿದೆ ಎಂದರು.

ಮೈಸೂರು ಕುಟುಂಬದ ಕಾರಿನ ಮೇಲೆ ಮಂಡ್ಯ ಬಳಿ ದಾಳಿ: ಅದೃಷ್ಟವಶಾತ್ ಪಾರು

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಖದೀಮರ ಹಾವಳಿ ಮುಂದುವರೆದೇ ಇದೆ!

ಮೈಸೂರು, ಸೆ.16– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಚಲಿಸುತ್ತಿದ್ದ ಕಾರಿನ ಗಾಜು ಪುಡಿಮಾಡಿ ದರೋಡೆಗೆ ಯತ್ನಿಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಮೈಸೂರಿನ ಹೆಬ್ಬಾಳು ನಿವಾಸಿ ಕೆ.ಸಿ. ಕೃಷ್ಣೇಗೌಡರು ಕುಟುಂಬದವರೊಂದಿಗೆ ಬೆಂಗಳೂರಿನಿಂದ ವಾಪಸ್ಸಾಗುವಾಗ ಮಂಡ್ಯ ಬೈಪಾಸ್ ಬಳಿ ಈ ಘಟನೆ ನಡೆದಿದ್ದು, ಅದೃಷ್ಟವಶಾತ್ ಅಪಾಯದಿಂದ ಪಾರಾಗಿದ್ದಾರೆ.

ಬೆಂಗಳೂರಿನಲ್ಲಿ ಸೆ.12ರಂದು ಮದುವೆ ರಿಸೆಪ್ಷನ್ ಮುಗಿಸಿಕೊಂಡು ಎಕ್ಸ್‌ಪ್ರೆಸ್ ವೇನಲ್ಲಿ ಮೈಸೂರಿಗೆ ಬರುವಾಗ ರಾತ್ರಿ 1 ಗಂಟೆ ಸುಮಾರಿಗೆ ಮಂಡ್ಯದ ಅಮರಾವತಿ ಹೋಟೆಲ್ ಎದುರು ರಸ್ತೆ ವಿಭಜಕದಲ್ಲಿ ನಿಂತಿದ್ದ ಇಬ್ಬರು ಏಕಾಏಕಿ ಕಾರಿನ ಮಧ್ಯಭಾಗದ ಗಾಜಿಗೆ ಯಾವುದೋ ವಸ್ತುವಿನಿಂದ ಜೋರಾಗಿ ಒಡೆದರು. ಪರಿಣಾಮ ಗಾಜು ಪುಡಿಪುಡಿಯಾಗಿ ಚೂರುಗಳು ಕಾರಿನೊಳಗೆ ಬಿದ್ದವು. ಇದರಿಂದ ಎಲ್ಲರೂ ಗಾಬರಿಗೊಂಡೆವು. ಕಾರು ನಿಲ್ಲಿಸದೆ ವೇಗವಾಗಿ ಮುಂದೆ ಸಾಗಿ, ಬಚಾವಾದೆವು ಎಂದು ಕೃಷ್ಣೇಗೌಡರು ತಿಳಿಸಿದ್ದಾರೆ.

ಅಮರಾವತಿ ಹೋಟೆಲ್ ಎದುರು, ರಸ್ತೆಯ ಮತ್ತೊಂದು ಬದಿಯಲ್ಲಿ ಅಂಗಡಿ ಮಳಿಗೆಗಳಿವೆ. ಅಲ್ಲಿ ವಿದ್ಯುತ್ ದೀಪದ ಬೆಳಕು ಸಾಕಷ್ಟು ಪ್ರಖರವಾಗಿದೆ. ಅದು ಮಂಡ್ಯ ಬೈಪಾಸ್ ರಸ್ತೆಯ ಆರಂಭ ಸ್ಥಳವಾಗಿರುವುದರಿಂದ ತಪ್ಪಿಸಿಕೊಳ್ಳಬಹುದು ಎಂದು ಖದೀಮರು ಅಲ್ಲಿ ನಿಂತಿರಬಹುದು. ಇಬ್ಬರೂ ಸುಮಾರು ಐದು ಮುಕ್ಕಾಲು ಅಡಿ ಇದ್ದರು. ಗಣಂಗೂರು ಟೋಲ್ ಪ್ಲಾಜಾ ಬಳಿ ಪೊಲೀಸರು ಇರುತ್ತಾರೆ. ಅವರಿಗೆ ಘಟನೆ ಬಗ್ಗೆ ತಿಳಿಸಬಹುದು ಎಂದು ಕೊಂಡಿದ್ದೆವು. ಆದರೆ ಅಲ್ಲಿ ಪೊಲೀಸರು ಇರದ ಕಾರಣ ಭಯದಲ್ಲೇ ಮೈಸೂರಿಗೆ ವಾಪಸ್ಸಾದೆವು ಎಂದು ಹೇಳಿದ್ದಾರೆ.

ಎಕ್ಸ್‌ಪ್ರೆಸ್ ವೇನಲ್ಲಿ ದರೋಡೆ ಪ್ರಕರಣಗಳಿಗೆ ಬ್ರೇಕ್ ಬಿದ್ದಿಲ್ಲ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ. ವಾಹನಗಳ ಮೇಲೆ ದಾಳಿ ಮಾಡಿ, ದೋಚುವ ಖದೀಮರು ಇನ್ನೂ ಸಕ್ರಿಯವಾಗಿದ್ದಾರೆ. ರಾತ್ರಿಯಲ್ಲಿ ಸಂಚರಿಸುವುದು ಸುರಕ್ಷಿತವಲ್ಲ ಎನ್ನಿಸುತ್ತದೆ. ದೋಚುವುದರ ಜೊತೆಗೆ ಜೀವಕ್ಕೆ ತೊಂದರೆ ಮಾಡಿದರೆ ಏನು ಗತಿ?. ಈ ಬಗ್ಗೆ ಪೊಲೀಸರು ತುರ್ತು ಕ್ರಮ ವಹಿಸುವ ಮೂಲಕ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕಿದೆ.

ಮುಖ, ದವಡೆ ಶಸ್ತ್ರಚಿಕಿತ್ಸಕರ ಸಂಘದ ಕಾರ್ಯದರ್ಶಿಯಾಗಿ ಡಾ.ಗಿರೀಶ್‌ಗೌಡ ಆಯ್ಕೆ

ಬೆಂಗಳೂರು, ಸೆ.16(ಕೆಎಂಶಿ)– ಕರ್ನಾಟಕ ರಾಜ್ಯ ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರ ಸಂಘದ ಕಾರ್ಯದರ್ಶಿಯಾಗಿ ಡಾ.ಗಿರೀಶ್‌ಗೌಡ ಅವಿರೋಧ ಆಯ್ಕೆಗೊಂಡಿದ್ದಾರೆ.

ನಗರದ ಸಂಜಯ ಗಾಂಧಿ ಆಸ್ಪತ್ರೆಯ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಡಾ.ಗಿರೀಶ್, ವೈದ್ಯರ ಸಂಘಟನೆಯಲ್ಲೂ ಸಕ್ರಿಯರಾಗಿದ್ದಾರೆ. ಕಳೆದ ಶನಿವಾರ ಬಳ್ಳಾರಿಯಲ್ಲಿ ನಡೆದ 11ನೇ ರಾಜ್ಯ ಕಾರ್ಯಕಾರಿಣಿಯಲ್ಲಿ ಅವಿರೋಧ ಆಯ್ಕೆಗೊಳ್ಳುವ ಮೂಲಕ ಡಾ.ಗಿರೀಶ್‌ಗೌಡ ಪ್ರತಿಷ್ಠಿತ ಹುದ್ದೆ ಅಲಂಕರಿಸಿದ್ದಾರೆ. ಕೊಳ್ಳೇಗಾಲದ ಪತ್ರಕರ್ತ ಎ.ಎಚ್. ಗೋವಿಂದ್ ಅವರ ಪುತ್ರರಾದ ಡಾ.ಗಿರೀಶ್, ಮುಖ ಮತ್ತು ದವಡೆ ವೈದ್ಯಕೀಯ ಕ್ಷೇತ್ರದಲ್ಲಿ ಕ್ಲಿಷ್ಟಕರ ಶಸ್ತ್ರಚಿಕಿತ್ಸೆಗಳನ್ನು ನಡೆಸುವಲ್ಲಿ ಸಿದ್ಧಹಸ್ತರು. ಅದರಲ್ಲೂ ಅಪಘಾತ ಸಂಬಂಧಿ ಶಸ್ತ್ರಚಿಕಿತ್ಸೆಗಳಲ್ಲಿ ಪರಿಣತಿ ಹೊಂದಿದ್ದು ಅನೇಕ ಬಾರಿ ಕ್ಲಿಷ್ಟಕರ ಪರಿಸ್ಥಿತಿಗಳಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿ ಎಷ್ಟೋ ಜೀವಗಳನ್ನು ಉಳಿಸಿದ್ದಾರೆ. ಅಲ್ಲದೆ, ಅಪಘಾತದಲ್ಲಿ ಮುಖದ ಚಹರೆಯೇ ಬದಲಾದ ಸಂದರ್ಭಗಳಲ್ಲೂ ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ಚಹರೆಯನ್ನು ಮೊದಲಿನಂತೆ ಮಾಡಿರುವುದು ನಿಜಕ್ಕೂ ಇವರ ಚಾತುರ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಮೈಸೂರಿನಲ್ಲಿ ದಿ ಕಾಲ್ ಆಫ್ ಬ್ಲೂ ವಾರಾಂತ್ಯ ಕಾರ್ಯಕ್ರಮ

ಮೈಸೂರು, ಸೆ.16– ಇಂಡಿಯಾ ಯಮಹಾ ಮೋಟಾರ್ ಪ್ರೈ ಲಿಮಿಟೆಡ್ (ಐವೈಎಂ) ಮೈಸೂರಿನ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ತನ್ನ ಬ್ರಾಂಡ್ ಅಭಿಯಾನದ ಭಾಗವಾಗಿ "ದಿ ಕಾಲ್ ಆಫ್ ದಿ ಬ್ಲೂ" (ಸಿಓಟಿಬಿ) ವಾರಾಂತ್ಯ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಉಲ್ಲಾಸ ಭರಿತ, ಉತ್ಸಾಹಕರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು 600 ಯಮಹಾ ಅಭಿಮಾನಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಯಮಹಾ ಅಭಿಮಾನಿಗಳು ಮತ್ತು ರೈಡರ್‌ಗಳು ಉತ್ಸಾಹದಿಂದ ಪಾಲ್ಗೊಂಡು ಯಮಹಾದ ಅತ್ಯಾಧುನಿಕ, ಅತ್ಯುತ್ತಮ ಕಾರ್ಯ ನಿರ್ವಹಣೆಯ ಮತ್ತು ಸುರಕ್ಷಿತ ಫೀಚರ್‌ಗಳನ್ನು ಹೊಂದಿರುವ ಪ್ರೀಮಿಯಂ ದ್ವಿಚಕ್ರ ವಾಹನಗಳ ಪ್ರದರ್ಶನಕ್ಕೆ ಸಾಕ್ಷಿಯಾದರು.

ಅವಾಂಟ್ ಬಿಕೆಜಿ ಆಸ್ಪತ್ರೆಯಲ್ಲಿ ಮೈಟ್ರಾಕ್ಲಿಪ್ ವಾಲ್ವ್ ಯಶಸ್ವಿ ವಿಶೇಷ ಶಸ್ತ್ರಚಿಕಿತ್ಸೆ

• ಶಸ್ತ್ರಚಿಕಿತ್ಸೆ ಇಲ್ಲದ ಕಾರ್ಯವಿಧಾನ • ಚೇತರಿಕೆ ಸಮಯ, ತೊಡಕು ಎರಡೂ ಕಡಿಮೆ • ರಾಜ್ಯದಲ್ಲೇ ವಿಶೇಷವಾದ ಶಸ್ತ್ರಚಿಕಿತ್ಸಾ ವಿಧಾನ

ಮೈಸೂರು,ಸೆ.16(ಪಿಎಂ)– ಮಿಟ್ರಲ್ ವಾಲ್ವ್ ರಿಗರ್ಗಿಟೇಶನ್ ಸಮಸ್ಯೆಯಿಂದ ಬಳಲುವ ರೋಗಿಗಳಿಗೆ ಪರಿಣಾಮಕಾರಿ ಚಿಕಿತ್ಸೆಯಾದ ಮೈಟ್ರಾಕ್ಲಿಪ್ ವಾಲ್ವ್ ರಿಪೇರಿ ಕಾರ್ಯವಿಧಾನ ಬಳಸುವಲ್ಲಿ ಮೈಸೂರಿನ ಬೋಗಾದಿಯಲ್ಲಿರುವ ಅವಾಂಟ್ ಬಿಕೆಜಿ ಆಸ್ಪತ್ರೆ ಯಶಸ್ವಿಯಾಗಿದೆ.



ಮೈಸೂರಿನ ಬೋಗಾದಿಯ ಅವಾಂಟ್ ಬಿಕೆಜಿ ಆಸ್ಪತ್ರೆಯಲ್ಲಿ ಇತ್ತೀಚೆಗೆ ಆಸ್ಪತ್ರೆಯ ವೈದ್ಯರ ತಂಡ ಸುದ್ದಿಗೋಷ್ಠಿ ನಡೆಸಿ ಮೈಟ್ರಾಕ್ಲಿಪ್ ವಾಲ್ವ್ ರಿಪೇರಿ ಕಾರ್ಯವಿಧಾನದ ಬಗ್ಗೆ ಮಾಹಿತಿ ನೀಡಿತು.

ಇತ್ತೀಚೆಗೆ ಆಸ್ಪತ್ರೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆ ಮುಖ್ಯ ಇಂಟರ್‌ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ.ರಾಜಗೋಪಾಲ್ ಜಂಬುನಾಥನ್ ಈ ವಿಷಯ ತಿಳಿಸಿದರು. ಈ ಕಾರ್ಯವಿಧಾನವನ್ನು ಯಶಸ್ವಿಯಾಗಿ ಬಳಸುವಲ್ಲಿ ಬೆಂಗಳೂರನ್ನು ಹೊರತುಪಡಿಸಿದರೆ ಕರ್ನಾಟಕದಲ್ಲಿ ನಮ್ಮ ಆಸ್ಪತ್ರೆಯೇ ಮೊದಲನೆಯದು. ಈ ಕಾರ್ಯವಿಧಾನದ ಚಿಕಿತ್ಸೆಯನ್ನು ನನ್ನ ನೇತೃತ್ವದಲ್ಲಿ ನಡೆಸಲಾಯಿತು. ಇದು ಮೈಸೂರು ನಗರ ಮತ್ತು ಕರ್ನಾಟಕ ರಾಜ್ಯಕ್ಕೆ ಹೃದಯ ಆರೈಕೆಯಲ್ಲಿ ಮಹತ್ವದ ಪ್ರಗತಿಯಾಗಿದೆ ಎಂದು ತಿಳಿಸಿದರು.

ಮಿಟ್ರಲ್ ವಾಲ್ವ್ ರಿಗರ್ಗಿಟೇಶನ್ ಎಂಬುದು ಮೈಟ್ರಲ್ ಕವಾಟದ ಸೋರಿಕೆಯಿಂದ ನಿರೂಪಿಸಲ್ಪಟ್ಟ ಸ್ಥಿತಿ. ಇದು ಹೃದಯ ವೈಫಲ್ಯದ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಸಾಮಾನ್ಯವಾಗಿ ಇದಕ್ಕೆ ತೆರೆದ ಹೃದಯ ಶಸ್ತ್ರಚಿಕಿತ್ಸೆ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ಇದು ಅಪಾಯಉಂಟು ಮಾಡಲಿದೆ. ಆದರೆ ಮೈಟ್ರಾಕ್ಲಿಪ್ ಕಾರ್ಯವಿಧಾನವು ತೊಡೆಯಲ್ಲಿ ಸಣ್ಣ ಪಂಕ್ಚರ್ ಮೂಲಕ ಕವಾಟವನ್ನು ದುರಸ್ತಿ ಮಾಡಲಿದೆ. ಆ ಮೂಲಕ ಚೇತರಿಕೆ ಸಮಯ ಮತ್ತು ತೊಡಕು ಎರಡೂ ಗಮನಾರ್ಹವಾಗಿ ಕಡಿಮೆಯಾಗಲಿದೆ ಎಂದು ಹೇಳಿದರು.

ಅವಾಂಟ್ ಬಿಕೆಜಿ ಆಸ್ಪತ್ರೆಯು ಕರ್ನಾಟಕದಲ್ಲಿ ಶಸ್ತ್ರಚಿಕಿತ್ಸೆ ಇಲ್ಲದೆ ಈ ಕಾರ್ಯವಿಧಾನ ನಿರ್ವಹಿಸಲು ತಂತ್ರಜ್ಞಾನ ಮತ್ತು ಪರಿಣತಿಯೊಂದಿಗೆ ಖ್ಯಾತ ವೈದ್ಯರ ತಂಡವನ್ನೂ ಹೊಂದಿರುವ ಕೆಲವೇ ಕೆಲವು ಆಸ್ಪತ್ರೆಗಳಲ್ಲಿ ಒಂದಾಗಿದೆ. ಮೈಟ್ರಾಕ್ಲಿಪ್ ವಾಲ್ವ್ ರಿಪೇರಿ ಕಾರ್ಯವಿಧಾನವು ಹೃದಯಾಘಾತದಿಂದ ಬಳಲುತ್ತಿರುವ ರೋಗಿಗಳಿಗೆ ಉತ್ತಮ ಮಾರ್ಗವಾಗಿದೆ. ಅತ್ಯಾಧುನಿಕ ಕ್ಯಾಥ್‌ಲ್ಯಾಬ್ ಹೊಂದಿರುವುದೂ ಈ ಕಾರ್ಯವಿಧಾನದ ಕಾರ್ಯಾಚರಣೆಗೆ ಪೂರಕವಾಗಿದೆ. ಮೈಸೂರು ನಗರದ ಮೊದಲ 4ಡಿ ಎಕೋ ಕಾರ್ಡಿಯೋಗ್ರಾಮ್ ಮತ್ತು 4ಡಿ ಟ್ರಾನ್ಸ್‌ಸೋಫೇಜಿಲ್ ಎಕೋ ಸೌಲಭ್ಯವೂ ನಮ್ಮಲ್ಲಿದ್ದು, ಇದು ರೋಗನಿರ್ಣಯ ಮತ್ತು ಚಿಕಿತ್ಸಾ ಸಾಮರ್ಥ್ಯಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ವಿವರಿಸಿದರು.

ಅವಾಂಟ್ ಬಿಕೆಜಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ರೊಬೊಟಿಕ್ ಕೀಲು ಮರುಜೋಡಣೆ ಶಸ್ತ್ರಚಿಕಿತ್ಸಕ ಡಾ.ಟಿ.ಎನ್.ಬಾಲಕೃಷ್ಣಗೌಡ ಮಾತನಾಡಿ, ಈ ಉತ್ತಮ ಕಾರ್ಯವಿಧಾನವು ನಮ್ಮ ಆಸ್ಪತ್ರೆಯ ಹೆಮ್ಮೆ. ಜೊತೆಗೆ ಇದು ವೈದ್ಯಕೀಯ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವ ನಮ್ಮ ಬದ್ಧತೆಯನ್ನು ಮೈಸೂರು ಮತ್ತು ಕರ್ನಾಟಕ ರಾಜ್ಯದಲ್ಲಿ ಖಚಿತಪಡಿಸುತ್ತದೆ. ನಮ್ಮಲ್ಲಿ ಈ ಪ್ರಾತಿಯ ರೋಗಿಗಳು ದೊಡ್ಡ ನಗರಗಳಿಗೆ ಪ್ರಯಾಣಿಸುವ ಅನಿವಾರ್ಯ ತಪ್ಪಿಸಲಿದ್ದು, ವಿಶ್ವ ದರ್ಜೆಯ ಆರೈಕೆಯನ್ನು ನಮ್ಮಲ್ಲೇ ಪಡೆಯಬಹುದು. ಮುಖ್ಯ ಅರಿವಳಿಕೆ ತಜ್ಞ ಡಾ.ಆದರ್ಶ್ ಮತ್ತು ನಾನ್–ಇನ್ವೆಸಿವ್ ಹೃದ್ರೋಗ ತಜ್ಞೆ ಡಾ.ವನಿತಾ ಕಾರ್ಯಾಚರಣೆ ನಡೆಸಿದ ತಂಡದ ಪ್ರಮುಖ ಸದಸ್ಯರಾಗಿದ್ದರು ಎಂದರು.

ಹೆಸರು ಬದಲಾವಣೆ

ಮಾಣಿಕ್ಯನ್ ಕಣ್ಣಪ್ಪನ್, ಮನೆ ನಂ. 651, ಫ್ಲಾಟ್ ನಂ. 6, ಲಲಿತಾದ್ರಿಪುರ, ವರುಣ ಹೋಬಳಿ, ಮೈಸೂರು ತಾಲ್ಲೂಕು–570 028, ಈ ಮೇಲಿನ ವಿಳಾಸದಲ್ಲಿ ವಾಸವಾಗಿರುವ ನಾನು ಈ ಹಿಂದೆ ನನ್ನ ಹೆಸರು ಮಾಣಿಕ್ಯನ್ ಕಣ್ಣಪ್ಪನ್ ಎಂದಿದ್ದು, ನನ್ನ ಸ್ವಂತ ಇಚ್ಛೆಯಿಂದ ನನ್ನ ಹೆಸರನ್ನು ಕೆ. ರಾಘವನ್ (K. Raghavan) (ಆಧಾರ್ ನಂ. 4576 9969 7798), ಎಂದು ಬದಲಾಯಿಸಿಕೊಂಡಿರುತ್ತೇನೆಂದು, ನೋಟರಿ ಸಿ.ಆರ್. ಸೀತಾರಾಮನ್ ರವರ ಎದುರು ಪ್ರಮಾಣೀಕರಿಸುತ್ತೇನೆ.

ಸಹಿ/– ಕೆ. ರಾಘವನ್

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

2ನೇ ವರ್ಷದ ಸವಿನೆನಪು



ವೆಂಕಟಲಿಂಗಯ್ಯ.ಎಲ್ (ಪಾಪಣ್ಣ)

ನಿಧನ: 17.09.2022

ದುಃಖತಪ್ತರು: ಪತ್ನಿ, ಮಕ್ಕಳು & ಕುಟುಂಬವರ್ಗ

6ನೇ ವರ್ಷದ ಸವಿನೆನಪು



ಶ್ರೀಮತಿ ಮಾದೇವಿ ರವರು

ನಿಧನ : 17.09.2018

ದೇವರು ನಿಮ್ಮ ಆತ್ಮಕ್ಕೆ ಶಾಂತಿ ಕೊಡಲಿ ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಕುಂಟೇಗೌಡ, ಮಗ ಮನೋಜ್, ಮಾನಸ, ರವಿ, ಜಾನವಿಗೌಡ, ಮೇಘ, ಕಿರನ್‌ಕುಮಾರ್, ಗೌರಮ್ಮ, ಮರೀಗೌಡ ಹಾಗೂ ಕುಟುಂಬವರ್ಗದವರು MNPM Colony, ಹುಲಿಕೆರೆ, ಕೆಆರ್‌ಎಸ್, ಮಂಡ್ಯ

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎಂ.ಎಸ್.ಪ್ರಕಾಶ್ (ಭೀಮ)

ವಿಕ್ರಾಂತ್ ಟೈರ್ ಕಾರ್ಮಿಕ ಸಂಘದ ಮಾಜಿ ಉಪಾಧ್ಯಕ್ಷರು

ಜನನ: 25.01.1962, ನಿಧನ: 17.09.2022

ಇವರ ಆತ್ಮಕ್ಕೆ ಶಾಂತಿಕೋರುವವರು : ಶ್ರೀಮತಿ ಪುಟ್ಟಮ್ಮ, ಸಂಧ್ಯಾ, ಪ್ರದೀಪ್, ಶಿಲ್ಪ, ರವಿ, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ರಿ.ನಂ. 24109/98–99, ದೂರವಾಣಿ ಸಂಖ್ಯೆ:–08223–264379.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ನೌಕರರ ವಿವಿಧೋದ್ದೇಶ ಸಹಕಾರ ಸಂಘ ನಿ.,

3ನೇ ಕ್ರಾಸ್, 17ನೇ ವಾರ್ಡ್, ಸುಭಾಷನಗರ, ಕೃಷ್ಣರಾಜನಗರ, ಮೈಸೂರು ಜಿಲ್ಲೆ.

ಕ.ರಾ.ರ.ಸಾ.ನಿ.ನೌ.ವಿ.ಸ.ಸಂ.ನಿ/ಕೃ.ರಾ.ನ/048/2024–2025, ದಿನಾಂಕ:–13–09–2024.

2023-2024ನೇ ಸಾಲಿನ 25ನೇ ವಾರ್ಷಿಕ ಮಹಾಸಭೆ

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, "ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ನೌಕರರ ವಿವಿಧೋದ್ದೇಶ ಸಹಕಾರ ಸಂಘ ನಿ., ಕೃಷ್ಣರಾಜನಗರ, ಮೈಸೂರು ಜಿಲ್ಲೆ", ಈ ಸಹಕಾರ ಸಂಘದ "2023-2024" ನೇ ಸಾಲಿನ 25 ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ:-22-09-2024ನೇ ಭಾನುವಾರದಂದು "ಶ್ರೀ ವಾಲ್ಮೀಕಿ ನಾಯಕರ ಸಮುದಾಯ ಭವನ, ಸಿಲ್ವರ್ ಜ್ಯೂಬಿಲಿ ರಸ್ತೆ, ಕೃಷ್ಣರಾಜನಗರ, ಮೈಸೂರು ಜಿಲ್ಲೆ."ಯಲ್ಲಿ ನಡೆಸಲು ಆಡಳಿತ ಮಡಳಿಯವರು ತೀರ್ಮಾನಿಸಿರುತ್ತಾರೆ. ಮಾನ್ಯ ಸದಸ್ಯರುಗಳು ದಯಮಾಡಿ ಹಾಜರಾಗಲು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ